
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 15
ರೂ. 2.00

ಐಕ್ಯರಂಗ

9 ಏಪ್ರಿಲ್ 1995



ಬಿಹಾರದ ಜನತೆ ತಕ್ಕ ಪಾಠ ಕಲಿಸಿದರು

ಕೊನೆಗೂ ಬಿಹಾರದಲ್ಲಿ ವಿಧಾನಸಭಾ ಚುನಾವಣೆಗಳು ನಡೆದವು. ಕೊನೆಗೂ ಮಾರ್ಚ್ 30ರ ವೇಳೆಗಾದರೂ ಫಲಿತಾಂಶಗಳು, ಹೆಜ್ಜೆಯ ಮೇಲೆ ಹೆಜ್ಜೆಯಿಕ್ಕಿ ಬರಲಾರಂಭಿಸಿದವು. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಅರ್ಧದಷ್ಟು ಚುನಾವಣಾ ಕ್ಷೇತ್ರಗಳಲ್ಲಿ ಜನತಾ ದಳ ಮತ್ತು ಎಡಪಕ್ಷಗಳು ಅರ್ಧಕ್ಕಿಂತಲೂ ಹೆಚ್ಚಿನ ಕಡೆ ಮುಂದಿದ್ದಾರೆ ಎಂಬ ಸುದ್ದಿ ಬಂದಿದೆ. ಪತ್ರಿಕಾ ವರದಿಗಳ ಪ್ರಕಾರ ಜನತಾ ದಳ, ಎಡ ಪಕ್ಷಗಳ ಸಹಕಾರದೊಂದಿಗೆ ಸಾಕಷ್ಟು ಬಹುಮತ ಗಳಿಸುವ ನಿರೀಕ್ಷೆಯಿದೆ.

ಕಾಂಗ್ರೆಸ್(ಐ) ಕೇಂದ್ರ ಸರಕಾರ ಹಾಗೂ ಮುಖ್ಯ ಚುನಾವಣಾ ಆಯುಕ್ತರು ಸಂಚು ಹೂಡಿ, ಆ ಸಂಚಿಗೆ ಬಿಜೆಪಿ ಮಾತ್ರವಲ್ಲ ಜಾರ್ಜ್ ಫರ್ನಾಂಡೀಸರಂತಹ ತಾವು ಸದಾ ವ್ಯವಸ್ಥೆಯ ವಿರೋಧಿಗಳೆಂದು ಹೇಳಿಕೊಳ್ಳುವವರ, ಜನತಾದಳದಿಂದ ಸಿಡಿದು ಬಂದುದನ್ನು ಅಧಿಕಾರದಿಂದಿಳಿಸುವಲ್ಲಿ ಕಾಂಗ್ರೆಸ್(ಐ) ಬಿಜೆಪಿಯೊಂದಿಗೆ ಪೈಪೋಟಿ ನಡೆಸುತ್ತಿದ್ದ ಸಮತಾ ಪಕ್ಷ ಕೂಡಾ ಸಕಲ ಬೆಂಬಲ ನೀಡಿದರೂ ಬಿಹಾರದ ಜನತೆ ಇವರೆಲ್ಲರಿಗೂ ತಕ್ಕ ಪಾಠ ಕಲಿಸುತ್ತಿರುವಂತಿದೆ. ಶೇಷನ್‌ರು ಟಾಂಟಾಂ ಮಾಡುತ್ತಿರುವಂತೆ "ದಕ್ಷತೆ"ಯ ಎಂಬ ಪ್ರತಿಮೂರ್ತಿಯಲ್ಲ, ಮುಕ್ತ ನ್ಯಾಯಪೂರ್ಣ ಚುನಾವಣೆ ನಡೆಸುವುದು ಅವರ ಗುರಿಯಲ್ಲ, ಯಾರದೋ ಲಾಭಕ್ಕಾಗಿ ಅವನ್ನು ಬುಡಮೇಲು ಮಾಡುವುದೇ ಅವರ ಗುರಿ ಎಂಬ ನಿಜರೂಪವಂತೂ ಈಗಾಗಲೇ ಸಂಪೂರ್ಣ ಬಯಲಾಗಿದೆ-ಮೊದಲು ಸುಪ್ರೀಂ ಕೋರ್ಟಿನ ತಡೆಯಾಜ್ಞೆಯಿಂದ, ಈಗ ಜನರು ನೀಡುತ್ತಿರುವ ತೀರ್ಪಿನಿಂದ. ಹಿಂದಿನ ವಿಧಾನಸಭೆಯಲ್ಲಿ ಜನತಾದಳಕ್ಕೆ ಪೂರ್ಣ ಬಹುಮತವಿರಲಿಲ್ಲ, 37.5 ಶೇ.ದಷ್ಟು ಸ್ಥಾನಗಳು ಮಾತ್ರ ದೊರೆತಿತ್ತು.(324 ಸ್ಥಾನಗಳಲ್ಲಿ 121) ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ವಾಸ್ತವವಾಗಿ ಶೇಷನ್‌ರ ಅದಕ್ಷತೆಯ ಬಿಹಾರದ ಚುನಾವಣೆಗಳು ನಡೆದ ರೀತಿಯಲ್ಲಿ ಸಂಪೂರ್ಣವಾಗಿ ಬಯಲಿಗೆ ಬಂದಿದೆ. ಬಿಹಾರದಲ್ಲಿ ಮಾರ್ಚ್ 15ರೊಳಗೆ ವಿಧಾನಸಭೆ ರಚನೆಯಾಗಲೇಬೇಕಿತ್ತು. ಮೊದಲಿಗೆ ಜನವರಿ 15ರೊಳಗೆ ಎಲ್ಲಾ ಮತದಾರರಿಗೆ ಗುರುತು ಪತ್ರ ನೀಡಿದರೆ ಮಾತ್ರವೇ ಫೆಬ್ರುವರಿ 20, 25 ಹಾಗೂ 28ರಂದು ಚುನಾವಣೆ ನಡೆಸಲಾಗುವುದು ಎಂದು ಶೇಷನ್ ಬೆದರಿಕೆ ಹಾಕಿದರು. ಜನತಾದಳ ಸರಕಾರ ಅದಕ್ಕೆ ಸೊಪ್ಪು ಹಾಕದಾಗ ತಾನೇ ಈ ಕಾಲಾವಧಿಯನ್ನು ಫೆಬ್ರುವರಿ 28ಕ್ಕೆ ವಿಸ್ತರಿಸಿ, ಅಷ್ಟರೊಳಗೆ ಎಲ್ಲರಿಗೂ ಗುರುತು ಪತ್ರ ನೀಡಿದರೆ ಮಾತ್ರವೇ ಮಾರ್ಚ್ 5, 7 ಹಾಗೂ 9ರಂದು ಚುನಾವಣೆ ನಡೆಸಲಾಗುವುದು ಎಂಬ ಇನ್ನೊಂದು ಬೆದರಿಕೆ ಹಾಕಲಾಯಿತು. ಇದಕ್ಕೂ ಸೊಪ್ಪು ಹಾಕಲಿಲ್ಲ. ಈ ನಡುವೆ ಜನವರಿ 16ರಂದು "ಗುರುತು ಪತ್ರವಿಲ್ಲದೆ ಚುನಾವಣೆಯಿಲ್ಲ" ಎಂಬ ಶೇಷನ್‌ರ ಜಂಭ ಬಿದ್ದು ಹೋಯಿತು. ಅವರು ತಮ್ಮ ಅಧಿಕಾರವ್ಯಾಪ್ತಿ ಮೀರಿ ಹೋಗುತ್ತಿದ್ದಾರೆ ಎಂಬ ದೇಶದ ಪ್ರಜಾಪ್ರಭುತ್ವವಾದಿ ಶಕ್ತಿಗಳ ವಾದವನ್ನು ಸುಪ್ರಿಂ ಕೋರ್ಟ್ ಕೂಡಾ ಎತ್ತಿ ಹಿಡಿಯಿತು. ಶೇಷನ್‌ರ ಗುರುತು ಪತ್ರ ಅಬ್ಬರಕ್ಕೆ ತಡೆಯಾಜ್ಞೆ ನೀಡಿತು. ಮುಖಭಂಗ ಅನುಭವಿಸಿದ ಶೇಷನ್ ಮಾರ್ಚ್ 5, 7 ಹಾಗೂ 9ರಂದು ಚುನಾವಣೆ ನಡೆಸುವ ಬಗ್ಗೆ ನೋಟಿಫಿಕೇಶನ್ ಜ್ಯಾರಿ ಮಾಡಿಸಲೇಬೇಕಾಯಿತು.

ಆದರೆ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದು ತೋರಿಸಲು ಕಾನೂನು-ವ್ಯವಸ್ಥೆಯ ನೆಪ ಹಾಕಿ ಚುನಾವಣೆಗಳನ್ನು ಮತ್ತೊಮ್ಮೆ ಮುಂದೂಡಿದರು-ಮಾರ್ಚ್ 11, 15 ಹಾಗೂ 19ಕ್ಕೆ. ಇದು ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿ ಕೇಂದ್ರದ ಆಳುವ ಪಕ್ಷಕ್ಕೆ ಅನುಕೂಲ ಮಾಡಿಕೊಡುವ, ಹೇಗಾದರೂ ಅವರ ಅದೃಷ್ಟ ಖುಲಾಯಿಸಲಿ ಎಂಬಂತಹ ಪಿತೂರಿ, ಮುಕ್ತ, ನ್ಯಾಯಪೂರ್ಣ ಚುನಾವಣೆ ನಡೆಸುವ ಬದಲು ಅವರೇ ಬುಡಮೇಲು ಕೃತ್ಯಗಳಲ್ಲಿ ತೊಡಗಿದ್ದಾರೆ ಎಂಬ ಸಿಪಿಐ(ಎಂ) ಇತರ ಎಡ-ಜಾತ್ಯಾತೀತ ಶಕ್ತಿಗಳು ಇದನ್ನು ಬಲವಾಗಿ ಪ್ರತಿಭಟಿಸಿದವು. ಈ ಪ್ರತಿಭಟನೆಗಳ ಒತ್ತಡದಿಂದಲೇ ಮಾರ್ಚ್ 15ರಂದು ಹಿಂದಿನ ವಿಧಾನಸಭೆಯ ಅವಧಿ ಮುಗಿದಾಗ ರಾಷ್ಟ್ರಪತಿ ಆಳ್ವಿಕೆ ಬರಲಿಲ್ಲ, ಲಲ್ಲೂ ಪ್ರಸಾದ್ ಯಾದವ್ "ಕೇರ್ ಟೇಕರ್" ಮುಖ್ಯಮಂತ್ರಿಯಾಗಿ ಮುಂದುವರಿದರು.

ಆದರೂ ಶೇಷನ್-ಕಾಂಗ್ರೆಸ್(ಐ) ಪಿತೂರಿ ಇಷ್ಟಕ್ಕೆ ನಿಲ್ಲಲಿಲ್ಲ. ರಾಜ್ಯ ಸರಕಾರ ಆರಂಭದಲ್ಲಿ 1700 ತುಕಡಿಗಳಷ್ಟು ಅರೆ ಸೈನಿಕ ಪಡೆಗಳನ್ನು ಕೇಳಿತ್ತು, ನಂತರ 1100 ತುಕಡಿಗಳಷ್ಟಾದರೂ ನೀಡಿ ಎಂದಿತ್ತು. ಅದನ್ನೂ ಒದಗಿಸದೆ ಕಾನೂನು-ವ್ಯವಸ್ಥೆಯ ನೆಪ ಸೃಷ್ಟಿಸಿ ಮತ್ತೊಮ್ಮೆ ಚುನಾವಣೆಗಳನ್ನು ಮುಂದಕ್ಕೆ ದೂಡಲಾಯಿತು. ಮಾರ್ಚ್ 19ರಂದು ಮುಗಿಯಬೇಕಾಗಿದ್ದ ಕೊನೆಯ ಸುತ್ತಿನ ಚುನಾವಣೆಗಳನ್ನು ಮಾರ್ಚ್ 21 ಹಾಗೂ 25ಕ್ಕೆ ಮುಂದೂಡಲಾಯಿತು. ನಂತರ 28ರವರೆಗೂ ಎಳೆಯಲಾಯಿತು. ಆಗ ಇನ್ನೇನು 31ರೊಳಗೆ ಹೊಸ ವಿಧಾನಸಭೆ ರಚನೆಯಾಗುವುದಿಲ್ಲ, ಸಂವಿಧಾನದ ಬಿಕ್ಕಟ್ಟು ಉದ್ಭವವಾಗುತ್ತದೆ, ಏಕೆಂದರೆ ಮುಂದಿನ ವರ್ಷದ ರಾಜ್ಯಸರಕಾರದ ನಿರ್ವಹಣೆಗೆ ಬಜೆಟ್ ಅನುದಾನ ಪಡೆಯಲಾಗುವುದಿಲ್ಲ ಎಂದು ಹೇಳಿ ಕೊನೆಗೂ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಯಿತು. ಶೇಷನ್‌ರೊಂದಿಗೆ ಸಂಚು ಹೂಡಿ ತಾವೇ ಸೃಷ್ಟಿಸಿದ ಪರಿಸ್ಥಿತಿಯನ್ನೇ ಬಳಸಿಕೊಂಡರೂ ಮುಖ್ಯ ಚುನಾವಣಾ ಆಯುಕ್ತರ ಅದಕ್ಷತೆಯಂತೂ ಬಟ್ಟಬಯಲಾಗುವುದನ್ನು ತಪ್ಪಿಸಲಾಗಲಿಲ್ಲ. ಅದನ್ನು ಸಾಬೀತು ಪಡಿಸುವಂತೆ ಹಿಂದೆ ಸೂಚಿಸಿದ ಮಾರ್ಚ್ 31ರಂದು ವಿಧಾಸಭಾ ಚುನಾವಣಾ ಪ್ರಕ್ರಿಯೆ ಮುಗಿಯುವುದಿಲ್ಲ ಅದನ್ನು ಇನ್ನೂ ಒಂದು ದಿನ ಮುಂದುವರಿಸಲಾಗುವುದು ಎಂದು ಹೇಳಿ ಶೇಷನ್ ತಮ್ಮ ಅಸಮರ್ಥತೆಯನ್ನು ಬಹುಶಃ ಕೊನೆಯದಾಗಿ ಜಾಹೀರು ಪಡಿಸಿದರು.

ಮಾರ್ಚ್ 23ರಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಒಂದು ಹೇಳಿಕೆ ನೀಡಿ ಮುಖ್ಯ ಚುನಾವಣಾ ಆಯುಕ್ತರು ಪ್ರಜಾಪ್ರಭುತ್ವದ, ಪ್ರಜಾಪ್ರಭುತ್ವ ಸಂಸ್ಥೆಗಳ ಹಾಗೂ ಚುನಾವಣಾ ಆಯೋಗದ ಅಪಹಾಸ್ಯ ಮಾಡುತ್ತಿದ್ದಾರೆ, ಕೇಂದ್ರ ಆಳುವ ಪಕ್ಷ ಹಾಗೂ ಮುಖ್ಯ ಚುನಾವಣಾ ಆಯುಕ್ತರ ನಡುವಿನ ಸಂಚಿನ ಪರಿಣಾಮದಿಂದ ಹೀಗೆ ಬಾರಿ-ಬಾರಿಗೆ ಮುಂದೂಡಿಕೆಯಾಗುತ್ತಿದೆ, ಆದ್ದರಿಂದ ಈ ಸಂಚುಗಳನ್ನು ಸಂಪೂರ್ಣವಾಗಿ ಬಯಲಿಗೆಳೆಯಿರಿ ಎಂದು ಬಿಹಾರದ ಜನತೆಗೆ ಕರೆ ನೀಡಿತ್ತು.

ಬಿಹಾರದ ಜನತೆ ನಿಜವಾಗಿಯೂ ಪ್ರಜಾಪ್ರಭುತ್ವದ ಪರವಾಗಿ ಯಾರಿದ್ದಾರೆ, ಯಾರು ಸಮಯಸಾಧಕರು, ಯಾರು ಸ್ವಾರ್ಥಸಾಧಕರು ಎಂಬುದನ್ನು ವಿಂಗಡಿಸಿಟ್ಟಂತೆ ಕಾಣುತ್ತಿದೆ.

ಬಿಹಾರದಲ್ಲೂ ಜನತಾದಳ ಸರಕಾರ ತನ್ನ ವರ್ಗ ಗುಣಕ್ಕನುಗುಣವಾಗಿ ಹಲವು ಜನ-ವಿರೋಧಿ ನೀತಿಗಳನ್ನು ಅನುಸರಿಸಿದ್ದರೂ ಸತತವಾಗಿ ಕಾಂಗ್ರೆಸ್ ವಿರೋಧದ ನಿಲುವು ತಳೆದಿದೆ-ಡಂಕೆಲ್ ಕರಡು ಹಾಗೂ ಹೊಸ ಆರ್ಥಿಕ ನೀತಿಗಳ ಕೆಲವು ಅಂಶಗಳ ವಿರುದ್ಧ ಪ್ರಚಾರ-ಪ್ರಕ್ಷೋಭೆಗಳಲ್ಲೂ ಪಾಲ್ಗೊಂಡಿದೆ ಹಾಗೂ ಮುಖ್ಯವಾಗಿ ಬಿಜೆಪಿಯಕೋಮುವಾದಿ ರಾಜಕೀಯ ಹಾಗೂ ಕೋಮುವಾದದ ಪ್ರಚಾರದ ವಿರುದ್ಧಸಕ್ರಿಯವಾಗಿದೆ. ಆದ್ದರಿಂದ ಸಿಪಿಐ(ಎಂ) ಕಾಂಗ್ರೆಸ್(ಐ)ಯನ್ನು ಸೋಲಿಸುವ ಹಾಗೂ ಬಿಜೆಪಿಯನ್ನು ಮೂಲೆಗೊತ್ತುವ ತನ್ನ ನೀತಿಗನುಗುಣವಾಗಿ ಜನತಾದಳದೊಡನೆ 13 ಸ್ಥಾನಗಳಲ್ಲಿ ಚುನಾವಣಾ ಮೈತ್ರಿ ಮಾಡಿಕೊಂಡಿತ್ತು. ತಾನು ಕಳೆದ ಐದು ವರ್ಷಗಳಲ್ಲಿ ಸತತವಾಗಿ ಜನಪರವಾಗಿ ಹೋರಾಟ ಮಾಡಿದಲ್ಲಿ ಸ್ವತಂತ್ರವಾಗಿಯೂ ಸ್ಪರ್ಧಿಸಿತ್ತು. ಈಗಲಾದರೂ ಎಡಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಲು ನಿರಾಕರಿಸಿದ ಒರಿಸ್ಸಾದಲ್ಲಿನ ಫಲಿತಾಂಶ ಹಾಗೂ ಬಿಹಾರದಲ್ಲಿನ ಫಲಿತಾಂಶ ಇವುಗಳನ್ನು ಜನತಾದಳದ ಮುಖಂಡರು ಹೋಲಿಸಿಕೊಳ್ಳುವುದೊಳ್ಳೆಯದು.

ಕನಿಷ್ಟ ಜವಾಬ್ದಾರಿಯನ್ನೂ ತೋರದ ಬಜೆಟ್

-ಜೆ.ವಿ. ಶ್ರೀರಾಮರೆಡ್ಡಿ

ರಾಜ್ಯದಲ್ಲಿ ಜನತಾದಳ ಸರಕಾರ ಹೆಚ್ಚಿನ ಜವಾಬ್ದಾರಿಯಿಂದ ಬಜೆಟ್ ಮಂಡಿಸುತ್ತದೆ ಎಂಬ ನಿರೀಕ್ಷೆ ಹುಸಿಯಾಗಿದೆ ಎಂದು ಸಿಪಿಐ(ಎಂ) ವಿಧಾನಸಭಾ ಸದಸ್ಯರಾದ ಕಾಂ ಜೆ.ವಿ.ಶ್ರೀರಾಮರೆಡ್ಡಿಯವರು ತೀವ್ರವಾಗಿ ಟೀಕಿಸಿದ್ದಾರೆ. ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ಸುಮಾರು ಒಂದೂವರೆ ಗಂಟೆ ಕಾಲ ಮಾತನಾಡಿದ ಕಾಂ. ಶ್ರೀರಾಮರೆಡ್ಡಿಯವರು ಜನತಾದಳದ ಆರ್ಥಿಕ ಚಿಂತನೆಯಲ್ಲಿನ ಲೋಪ-ದೋಷಗಳನ್ನು, ಕರ್ನಾಟಕದ ಒಟ್ಟಾರೆ ಬೆಳವಣಿಗೆಗೆ ಅವರ ಚಿಂತನೆ ಹಾಗೂ ಬಜೆಟ್ ಹೇಗೆ ಮಾರಕವಾಗುತ್ತದೆ ಎಂದು ಅಂಕಿ-ಅಂಶಗಳ ಮೂಲಕ ವಿವರಿಸಿದರು.

ವಾಸ್ತವವಾಗಿ ಈ ಸರಕಾರದ ಧೋರಣೆಗಳು ಹಾಗೂ ಹಿಂದಿನ ಸರಕಾರದ ಧೋರಣೆಗಳಲ್ಲಿ ಮೂಲಭೂತ ವ್ಯತ್ಯಾಸ ಇಲ್ಲದಿದ್ದರೂ ಇವರೇ ಬಜೆಟ್ಟಿನಲ್ಲೇ "ಇಂತಹ ಅಭೂತಪೂರ್ವ ಅವಕಾಶ, ಕನ್ನಡನಾಡಿನ ಜನ ಹಿಂದಿನ ಕಾಂಗ್ರೆಸ್ ಸರಕಾರವನ್ನು ಬದಲಿಸಿ ನಾವು ಸರಕಾರ ರಚಿಸಲು ಮಾಡಿದ ಆಶೀರ್ವಾದದ ಫಲ" ಎಂದು ಹೇಳಿಕೊಂಡಿರುವಾಗ ಈ ಸರಕಾರಕ್ಕೆ ಒಂದು ಕನಿಷ್ಟ ಜವಾಬ್ದಾರಿಯಿತ್ತು. ಆದರೆ ಈ ಬಜೆಟ್ ಅವರ ಕಲ್ಪನೆಯಲ್ಲಿರುವ ಒಂದು ದೋಷವನ್ನು ಎತ್ತಿ ತೋರಿಸಿದೆ ಎಂದು ಅವರು ತೀವ್ರವಾಗಿ ಟೀಕಿಸಿದರು.

ರಾಜ್ಯದ ಬಜೆಟ್ ಎಂದರೆ ಕೇವಲ ಆದಾಯ ಎಷ್ಟು, ಖರ್ಚು ಎಷ್ಟು ಎಂಬ ಲೆಕ್ಕಾಚಾರವಲ್ಲ, ರಾಜ್ಯದ ಭೌತಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಸರಕಾರದ ಬದ್ಧತೆ ಅದರಲ್ಲಿ ಕಂಡುಬರಬೇಕು, ಈ ಬಜೆಟ್‌ನಲ್ಲಿ ಇವೆರಡಕ್ಕೂ ಅವಕಾಶವಿಲ್ಲ ಎಂದು ಅವರು ವಿವರಿಸಿದರು.

ಒಂದು ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಎರಡು ಮುಖ್ಯ ಅಂಶಗಳಿವೆ-ಕೈಗಾರಿಕಾ ರಂಗ ಹಾಗೂ ಕೃಷಿ ರಂಗ. ಇವೆರಡೂ ರಂಗಗಳ ಬೆಳವಣಿಗೆಗೆ ಕುರಿತು ಬಜೆಟ್‌ನಲ್ಲಿ ಸ್ಪಷ್ಟ ನಿಲುಮೆಯಿಲ್ಲ, ಇದರ ಜೊತೆಗೆ 244.85 ಕೋಟಿ ರೂ. ತೆರಿಗೆ ಹಾಕಿದ್ದಾರೆ. ಇದನ್ನು ಮಧ್ಯಮ ವರ್ಗದಿಂದ ಶ್ರೀಮಂತ ವರ್ಗದಿಂದ ವಸೂಲಿ ಮಾಡಲಾಗುತ್ತಿದೆ ಎಂದು ಸರಕಾರ ಹೇಳಿಕೊಂಡಿದೆ. ಆದರೆ ಶ್ರೀಮಂತ ವರ್ಗಕ್ಕೆ ಹಾಕಿದ ತೆರಿಗೆ ಪರೋಕ್ಷವಾಗಿ ಜನಸಾಮಾನ್ಯರ ಜೇಬಿನ ಮೇಲೆಯೇ ಬೀಳುತ್ತದೆ ಎಂಬುದು ನಮಗೀಗ ಅರ್ಥವಾಗಿರುವ 'ಸರಳ ತರ್ಕ' ಎಂದು ಕಾಂ.ಶ್ರೀರಾಮರೆಡ್ಡಿ ನೆನಪಿಸಿದರು.

ಕೈಗಾರಿಕಾ ಉತ್ಪಾದನೆ ಹೆಚ್ಚು ಮಾಡುವ ಬಗ್ಗೆ ಒಂದು ಅಕ್ಷರವೂ ಇಲ್ಲ, ಕೈಗಾರಿಕಾ ಬೆಳವಣಿಗೆಗೆ ಹಿತಕರವಾದ ವಾತಾವರಣ ಎಂದರೆ ಖಾಸಗೀಕರಣ ಎಂಬ ನರಸಿಂಹರಾವ್ ಸರಕಾರದ ನೀತಿಯನ್ನೇ ಈ ಸರಕಾರ ಹೇಳುತ್ತಿರುವಂತಿದೆ. ಕೃಷಿರಂಗದಲ್ಲಿ ಉತ್ಪಾದನೆ ಹೆಚ್ಚಿಸಲು ಅಗತ್ಯವಾದ ಭೂಸುಧಾರಣೆಯ ಮಾತೇ ಇಲ್ಲ, ಪಶ್ಚಿಮ ಬಂಗಾಳದಲ್ಲಿ ಕೃಷಿ ಉತ್ಪಾದನೆ ಹೆಚ್ಚಿದ್ದರೆ "ಅವರೇನು ಮಂತ್ರ ಮಾಡಲಿಲ್ಲ-ಅವರು ಇಷ್ಟೇ ಮಾಡಿದ್ದು, ಭೂಮಿಯನ್ನು ಹಂಚಿದ್ದು" ಎಂದು ಕಾಂ. ಶ್ರೀರಾಮರೆಡ್ಡಿಯವರು ಹೇಳಿದರು.ಕೃಷಿ ಕಾರ್ಮಿಕರ ಕನಿಷ್ಟ ವೇತನ ಪ್ರಶ್ನೆಯ ಬಗ್ಗೆಯೂ ಯಾವುದೇ ಒಂದು ಅಕ್ಷರ ಬಜೆಟ್ಟಿನಲ್ಲಿ ಇಲ್ಲ, ಹೀಗಿರುವಾಗ ಉತ್ಪಾದನೆಗಳಿಗೆ ಬೇಕಾಗಿರುವ ಮಾರುಕಟ್ಟೆಯನ್ನು ಎಲ್ಲಿಂದ ಮಾಡುತ್ತೀರಿ? ಜನಗಳ ಕೈಯಲ್ಲಿ ಹಣವಿಲ್ಲದಿದ್ದರೆ ಮಾರುಕಟ್ಟೆಯೆಲ್ಲಿ? ಮಾರುಕಟ್ಟೆಯಿಲ್ಲದಿದ್ದರೆ ಉತ್ಪಾದನೆ ಎಲ್ಲಿ ಎಂದು ಪ್ರಶ್ನಿಸಿದ ಸಿಪಿಐ(ಎಂ) ವಿಧಾನಸಭಾ ಸದಸ್ಯರು ರೈತ ಬೆಳೆದ ಬೆಳೆಗೆ ಲಾಭದಾಯಕ ಬೆಲೆ ನಿಗದಿ ಮಾಡಿಸುವ ಕಾರ್ಯಕ್ರಮ ಕೂಡಾ ಬಜೆಟ್ಟಿನಲ್ಲಿ ಇಲ್ಲ ಎಂದು ಟೀಕಿಸಿದರು.


ಇತಿಹಾಸ

<u>ಭಾರತದ ಕ್ರಾಂತಿಕಾರಿ ಚಳುವಳಿಯ ಪ್ರಮುಖರಲ್ಲಿ ಕಲ್ಪನಾ(ದತ್ತ) ಜೋಷಿ ಅವರೂ ಒಬ್ಬರು. ಹದಿಹರೆಯದಲ್ಲೇ ಕ್ರಾಂತಿಕಾರಿ ಆಂದೋಲನಕ್ಕೆ ಧುಮುಕಿದ್ದ, ಆತ್ಮಸ್ಥೈರ್ಯದಿಂದ ಸೆಣಸಿದ ಕಲ್ಪನಾರ ಜೀವನ ಯುವ ಜನಾಂಗಕ್ಕೆ ಸ್ಫೂರ್ತಿಯ ಸೆಲೆ ಆಗಬಲ್ಲುದು. ದೇಶದ ಕಮ್ಯುನಿಸ್ಟ್ ಆಂದೋಲನದ ಪ್ರಮುಖರಲ್ಲೊಬ್ಬರೂ ಪ್ರಕಾಂಡ ಪಂಡಿತರೂ ಮಹಾನ್ ಸಾಹಿತಿಯೂ ಆಗಿದ್ದ ರಾಹುಲ ಸಾಂಕೃತ್ಯಾಯನ ಈ ಧೀರ ಮಹಿಳೆ ಬಗ್ಗೆ 1944ಕ್ಕೂ ಮೊದಲೇ ಹಿಂದಿಯಲ್ಲಿ ಲೇಖನವೊಂದನ್ನು ಬರೆದಿದ್ದರು. ಕಲ್ಪನಾ ಜೋಷಿ ತಮ್ಮ 81ನೇ ವಯಸ್ಸಿನಲ್ಲಿ ಇದೇ ಫೆಬ್ರವರಿ ಎಂಟರಂದು ನಿಧನರಾದರು. ಅವರ ಕ್ರಾಂತಿಕಾರಿ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುವ ಸಾಂಕೃತ್ಯಾಯನರ ಬರಹದ ಉಳಿದ ಭಾಗ ಇಲ್ಲಿದೆ.</u>

ಕಲ್ಪನಾ ಜೋಷಿ: ಸ್ವಾತಂತ್ರ್ಯ ಸಂಗ್ರಾಮದ ಧೀಮಂತ ಮಹಿಳೆ

ರಾಹುಲ ಸಾಂಕೃತ್ಯಾಯನ

ಕನ್ನಡಕ್ಕೆ: ವಿಶ್ವ



ಕುತ್ತಿಗೆ ಮಟ್ಟದ ನೀರಿನಲ್ಲಿ

ಕಲ್ಪನಾ ಮತ್ತು ಆಕೆಯ ತರುಣ ಸಂಗಾತಿಗೆ ಅಪಾಯ ಸಮೀಪಿಸುತ್ತಿತ್ತು. ಅವರು ಅವಿತುಕೊಳ್ಳಲೆಂದು ಓಡಿಹೋಗುವಾಗ ಒಂದು ಹಳ್ಳಕ್ಕೆ ಬಿದ್ದು ಬಿಟ್ಟರು. ಕುತ್ತಿಗೆ ಮಟ್ಟದವರೆಗೆ ನೀರಿತ್ತು. ಸುಮಾರು ಎರಡು ಗಂಟೆ ಕಾಲ ಅವರು ನೀರಿನಲ್ಲಿ ಮುಳುಗಿಯೇ ಇದ್ದರು. ಬೆಳಗಿನ ಜಾವ ನಾಲ್ಕು ಗಂಟೆ ಆಗುತ್ತಿತ್ತು. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ಸೂರ್ಯನ ಕಿರಣ ಭೂಮಿಯನ್ನು ಸ್ಪರ್ಶಿಸುತ್ತಿತು. ಇನ್ನೂ ಅಲ್ಲಿದ್ದರೆ ಉಳಿಗಾಲವಿಲ್ಲ ಎಂದರಿತ ಅವರಿಬ್ಬರೂ ಹಳ್ಳದಿಂದೆದ್ದು ಅದೇ ಒದ್ದೆ ಬಟ್ಟೆಯಲ್ಲಿ ಓಡ ತೊಡಗಿದರು. ಸುಮಾರು ನಾಲ್ಕೈದು ಮೈಲಿ ದೂರ ಓಡುತ್ತಲೇ ಇದ್ದರು.

ಒಂದು ಹಳ್ಳಿಯನ್ನು ತಲುಪಿದಾಗ ಅಲ್ಲಿನ ಬಾಲಕನೊಬ್ಬ ಇವರಿಬ್ಬರನ್ನು ತನ್ನ ಮನೆಯ ಒಂದು ಭಾಗದಲ್ಲಿ ಅವಿತಿಟ್ಟುಕೊಳ್ಳಲು ಅವಕಾಶ ಕೊಟ್ಟನು. ಬೆಳಿಗ್ಗೆ ಎಂಟು ಗಂಟೆಯಾಗಿತ್ತು. ಅವಿತಿಟ್ಟ ಜಾಗಕ್ಕೆ ಬಂದಾಗ ಇವರನ್ನು ಕಂಡ ಹುಡುಗನ ತಂದೆ ಮನೆ ಬಿಟ್ಟು ಹೋಗುವಂತೆ ಕ್ರಾಂತಿಕಾರಿಗಳನ್ನು ಗದರಿಸಿದ್ದನು. ಇಬ್ಬರ ಬಳಿಯೂ ಪಿಸ್ತೂಲ್ ಇತ್ತು. ತರುಣ ಸಂಗಾತಿ ಅದನ್ನು ಸಮಯೋಜಿತವಾಗಿ ಬಳಸಿದನು. ಕಲ್ಪನಾ ಓಡಿಹೋಗಲು ಯುವಕ ಅವಕಾಶವನ್ನು ಕಲ್ಪಿಸಿಕೊಟ್ಟನು. ಕಲ್ಪನಾ ದಿನವಿಡಿ ೩೦ ಮೈಲು ಓಡಿ ಒಂದು ಹಳ್ಳಿಯನ್ನು ತಲುಪಿದಳು. ಕ್ರಾಂತಿಕಾರಿಗಳು ಅಡಗಿಕೊಂಡಿದ್ದ ಒಂದು ಸ್ಥಳವನ್ನು ತಲುಪಿದ ಆಕೆ ಅಲ್ಲಿ ಮೂವರು ಸಂಗಾತಿಗಳು ಗಾಯಗೊಂಡು ನರಳುತ್ತಿದ್ದನ್ನು ಕಂಡಳು. ಅದರಲ್ಲಿ ಶಾಂತಿ ಚಕ್ರವರ್ತಿ ಎಂಬ ಸಂಗಾತಿಯ ಎದೆ ಗುಂಡೇಟಿನಿಂದ ಭಾರೀ ಘಾಸಿಗೊಂಡಿತ್ತು.

ಇದನ್ನೆಲ್ಲ ಕಂಡು ಕಲ್ಪನಾ ಧೃತಿಗೆಡಲಿಲ್ಲ. ಆದರೆ ಮಾಸ್ಟರ್ ದಾ ಅವರ ಬಂಧನದ ಸುದ್ದಿ ಕೇಳಿದಾಕ್ಷಣ ಕಲ್ಪನಾರ ಕಣ್ಣಮುಂದೆ ಕಗ್ಗತ್ತಲು ಕವಿದ ಅನುಭವವಾಯಿತು. 1993 ಮೇ 19ರಂದು ಕಲ್ಪನಾ ಮತ್ತು ಮೂವರು ಸಂಗಾತಿಗಳು ಮನೆಯೊಂದರಲ್ಲಿ ಅಡಗಿದ್ದ ವಿಷಯ ತಿಳಿದ ಸೈನಿಕರು ಮನೆಯನ್ನು ಸುತ್ತುವರಿದು ಗುಂಡು ಹಾರಿಸತೊಡಗಿದರು. ಒಬ್ಬ ಕ್ರಾಂತಿಕಾರಿ ಮೃತಪಟ್ಟನು. ಕಲ್ಪನಾರಿಗೆ ರಕ್ತ ಬರಲಾರಂಭಿಸಿತು. ಪ್ರತಿರೋಧವನ್ನು ಮುಂದುವರಿಸಿದಾಗ ಸೈನಿಕರು ಆ ಮನೆಯವರ ಮೇಲೆಯೇ ಗುಂಡು ಹಾರಿಸಲು ಆರಂಭಿಸಿದರು. ಮನೆಯ ಒಬ್ಬಾತ ಗುಂಡೇಟಿಗೆ ಬಲಿಯಾದ. ಹಲವರ ತಲೆಗಳು ಒಡೆದವು. ಅಲ್ಲಿನ ದೃಶ್ಯ ಭೀಭತ್ಸವಾಗಿತ್ತು. ಮನೆಯ ಎಲ್ಲರೂ ಸಾಯುವ ಸನ್ನಿವೇಶ ನಿರ್ಮಾಣವಾಗುವಂತಿತ್ತು. ಇತ್ತ ಕಲ್ಪನಾರ ಪಿಸ್ತೂಲಿನ ಗುಂಡುಗಳು ಖಾಲಿಯಾಗುತ್ತಿದ್ದವು. ಇದನ್ನು ಗಮನಿಸಿ ಆಕೆ "ಗುಂಡು ಹಾರಿಸುವುದನ್ನು ನಿಲ್ಲಿಸಿ, ನಾವು ಶರಣಾಗುತ್ತಿದ್ದೇವೆ" ಎಂದು ಗಟ್ಟಿಯಾಗಿ ಕೂಗಿ ಹೇಳಿದರು. ಆಗಲೂ ಸೈನಿಕರಿಗೆ ವಿಶ್ವಾಸ ಬರಲಿಲ್ಲ, ಅವರು ಗ್ರಾಮದ ದಫೇದಾರರನ್ನು ಅಲ್ಲಿಗೆ ಕಳಿಸಿದರು. ಕಲ್ಪನಾ ಮತ್ತು ಜೀವಂತ ಉಳಿದ ಇತರ ಕ್ರಾಂತಿಕಾರಿಗಳು ಖಾಲಿ ಪಿಸ್ತೂಲನ್ನು ದಫೇದಾರರಿಗೆ ಒಪ್ಪಿಸಿ ಶರಣಾದರು.

ಎರಡು ಗಂಟೆ ಕಾಲ ನಡೆದ ಭೀಷಣ ಕಾಳಗದ ನಂತರ ಶರಣಾದ ೧೯ ವರ್ಷ ಪ್ರಾಯದ ಈ ವೀರ ಬಾಲಕಿಯ ಕೈಗಳನ್ನು ಸೈನಿಕರು ಕಟ್ಟಿಹಾಕಿದರು.

ಸೆರೆವಾಸ

ಕಲ್ಪನಾ, ಸೂರ್ಯಸೇನ್, ತಾರಕೇಶ್ವರ, ದಸ್ತಿದಾರ್ ಮೊದಲಾದವರ ವಿರುದ್ಧ ಚಿತ್ತಗಾಂಗ್ ಅಸ್ತಾರದ ಮೇಲೆ ಆಕ್ರಮಣ ಮಾಡಿದ ಆರೋಪದಲ್ಲಿ ಮೊಕದ್ದಮೆ ಹೂಡುವ ಸಿದ್ಧತೆ ನಡೆಸಲಾಗುತ್ತಿರುವುದು ಇವರೆಲ್ಲ ಸೆರೆಮನೆಯಲ್ಲಿ ಒಂದೆರೆಡು ತಿಂಗಳು ಕಳೆದ ಬಳಿಕ ಗೊತ್ತಾಯಿತು. ಎರಡು ತಿಂಗಳು ವಿಚಾರಣೆ ನಡೆಯಿತು. ತಾರಕೇಶ್ವರ ಮತ್ತು ಸೂರ್ಯಸೇನರಿಗೆ ಗಲ್ಲು ಶಿಕ್ಷೆ ವಿಧಿಸಲಾಯಿತು. ವಯಸ್ಸು ಮತ್ತು ಮಹಿಳೆ ಎಂಬುದನ್ನು ಪರಿಗಣಿಸಿ ಕಲ್ಪನಾಗೆ ಅಜೀವ ಪರ್ಯಂತ ಕರಿನೀರಿನ ಶಿಕ್ಷೆಯನ್ನು ವಿಧಿಸಲಾಯಿತು.

ಮಹಿಳಾ ಖೈದಿಗಳನ್ನು ಬಿಡುಗಡೆ ಮಾಡಬೇಕೆಂದು ಆಂದೋಳನ ಪ್ರಬಲವಾಗಿ ಕೊನೆಗೊಮ್ಮೆ 1939 ಮೇ ಒಂದರಂದು ಕಲ್ಪನಾರನ್ನು ಬಿಡುಗಡೆ ಮಾಡಲಾಯಿತು. ಭಯೋತ್ಪಾದನೆ ಮಾರ್ಗವನ್ನು ಅನಿವಾರ್ಯವಾಗಿ ಅನುಸರಿಸಿದ್ದ ಕಲ್ಪನಾ ಸೆರೆಮನೆಯಿಂದ ಬಿಡುಗಡೆಯಾಗಿ ಹೊರಬಂದ ಮೇಲೆ ಮೊದಲು ಜೈಲಿನಿಂದ ಅನೇಕ ಸಂಗಾತಿಗಳು ಮಾರ್ಕ್ಸ್‌ವಾದದ ಪ್ರಭಾವಕ್ಕೆ ಒಳಗಾಗಿ ಕಮ್ಯುನಿಸ್ಟ್ ಪಕ್ಷಕ್ಕಾಗಿ ದುಡಿಯುತ್ತಿದ್ದದನ್ನು ಕಂಡಳು ತಾನೂ ಕಮ್ಯುನಿಸ್ಟಳಾಗುವ ನಿರ್ಧಾರ ತೆಗೆದುಕೊಂಡರು.

1942ರಲ್ಲಿ ಟೈಫಾಯ್ಡ್ ನಿಂದ ನರಳುತ್ತಾ ಹಾಸಿಗೆ ಹಿಡಿದಿದ್ದ ಕಲ್ಪನಾಗೆ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ದೊರಕಿದ ವಿಷಯವನ್ನು ತಿಳಿದು ಅಪಾರ ಸಂತೋಷವಾಯಿತು.

ಕಮ್ಯುನಿಸ್ಟ್ ಪಕ್ಷದ ಕೆಲಸಕ್ಕಾಗಿ ಕಲ್ಪನಾ 1943 ಜೂನ್ 29 ರಂದು ಮುಂಬಯಿಗೆ ಆಗಮಿಸಿದರು. ದೇಶದ ಕಮ್ಯುನಿಸ್ಟ್ ಆಂದೋಲನದ ಪ್ರಮುಖರಲ್ಲಿ ಒಬ್ಬರಾಗಿದ್ದ ಪಿ.ಸಿ.(ಪೂರ್ಣಚಂದ್ರ) ಜೋಷಿ ಬಂಗಾಳದ ಧೀರ ಬಾಲಕಿ ಬಗ್ಗೆ ಕೇಳಿ ಅರಿತಿದ್ದರು. ಮುಂಬಯಿಯಲ್ಲಿ ಪಿ.ಸಿ. ಜೋಷಿಯನ್ನು ಕಲ್ಪನಾ ಭೇಟಿ ಮಾಡಿದರು. ಆನಂತರ ಸಮಾನ ಮನಸ್ಕರಾದ ಇಬ್ಬರಲ್ಲೂ ಪ್ರೇಮ[illegible]ವಾಗಿ ಪಿ.ಸಿ. ಜೋಷಿ ಮತ್ತು ಕಲ್ಪನಾ ಕಲ್ಪನಾ ಹೋರಾಟರಂಗ ಮಾತ್ರವಲ್ಲ ಬಾಳರಂಗದಲ್ಲೂ ಸಂಗಾತಿಗಳಾದರು.

'ಬಾಂಬೆ' ಚಲನಚಿತ್ರ–ಒಂದು ಸಂವಾದ

ಜಾತಿ ಮತಗಳ[illegible] ಮನುಷ್ಯ ಸಂಬಂಧಗಳ ಸೂಕ್ಷ್ಮತೆ[illegible] ಕೋಮುವಾದದ ಅಪಾಯಗಳನ್ನು ಹಾಗೂ ಸೌಹಾರ್ದತೆಯ ಅಗತ್ಯವನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ಹೇಳುವ 'ಬಾಂಬೆ' ಚಲನಚಿತ್ರವನ್ನು ರಾಜ್ಯದ ಎಲ್ಲೆಡೆ, ನಿರಾತಂಕವಾಗಿ ಪ್ರದರ್ಶನವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಖ್ಯಾತ ಚಲನಚಿತ್ರ ನಿರ್ದೇಶಕರು, ಖ್ಯಾತ ಸಾಹಿತಿ, ವಿಚಾರವಾದಿಗಳು, ಪತ್ರಕರ್ತರು ಒತ್ತಾಯಿಸಿದ್ದಾರೆ.

ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಸಮುದಾಯ ಸಂಘಟನೆಗಳು ಮಾರ್ಚ್ 28 ರಂದು ಸಂಜೆ ಸಂಘಟಿ[illegible] 'ಬಾಂಬೆ' ಚಲನಚಿತ್ರ ಒಂದು ಸಂವಾದ ಕಾರ್ಯಕ್ರಮದಲ್ಲಿ ಸರ್ವಾನುಮತದ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಸಂವಾದದಲ್ಲಿ ಭಾಗವಹಿಸಿ ಮಾತನಾಡುತ್ತಾ ಪ್ರೊ. ಜಿ.ಕೆ.ಗೋವಿಂದರಾವ್ ಅವರು ಒಂದು ಗಂಡು ಹೆಣ್ಣನ್ನು ಬೆಸೆಯಲು ಇರುವ ಪ್ರಕೃತಿಯ ಸಾಧನ ಪ್ರೀತಿ ಅದಕ್ಕೆ ಹಿಂದೂ, ಮುಸ್ಲಿಂ ಎನ್ನುವ ಭೇದವಿಲ್ಲ ಎಂಬುದನ್ನು ಹಾಗೂ ನಮ್ಮ ಮುಂದಿನ ಪೀಳಿಗೆಗೆ ಎಂತಹ ಭಯಾನಕವಾದ ಸಮಾಜವನ್ನು ನಿರ್ಮಿಸುತ್ತಿದ್ದೇವೆ; ಕೋಮುವಾದದ ಅಪಾಯಗಳೇನು ಎಂಬುದನ್ನು ಮನಕಲಕುವಂತೆ ಚಿತ್ರಿಸಲಾಗಿರುವ 'ಬಾಂಬೆ' ಒಂದು ಉತ್ತಮ ಚಿತ್ರ ಎಂದು ತಿಳಿಸಿದರು.

ಪ್ರಖ್ಯಾತ ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರು ಮಾತನಾಡಿ ಈ ಚಿತ್ರದಲ್ಲಿ ಯಾವುದೇ ಜನವಿಭಾಗವನ್ನು ನೋಯಿಸುವಂಥದ್ದು "ಏನೂ ಇಲ್ಲ, ಚಿತ್ರವನ್ನು ನಿಷೇಧ ಮಾಡುವಂಥದ್ದು ಏನೂ ಇಲ್ಲ" ಎಂದು ಸ್ಪಷ್ಟಪಡಿಸಿದರು.

ಬಾಂಬೆ ಸಿನಿಮಾ ಪ್ರೇಕ್ಷಕರಲ್ಲಿ ದೇಶದ ಇಂದಿನ ಗಂಭೀರ ಸನ್ನಿವೇಶದ ಬಗ್ಗೆ ಸಂಕಟವನ್ನು ತರುತ್ತದೆ. ಸಾಮಾನ್ಯ ಪ್ರೇಕ್ಷಕರಲ್ಲಿ ಈ ರೀತಿಯ ಸಂಕಟವನ್ನು ತರುವ ಕೆಲಸ ದೊಡ್ಡದು ಎಂದ ಖ್ಯಾತ ಸಾಹಿತಿ, ಚಿತ್ರ ನಿರ್ದೇಶಕ ಬರಗೂರು ರಾಮಚಂದ್ರಪ್ಪ ಹೇಳಿದರು. ಒಂದು ಸಿನಿಮಾ ಪುಸ್ತಕ ಕಲಾಕೃತಿ ಶ್ರೇಷ್ಠವೋ ಅಲ್ಲವೋ ಎನ್ನುವ ಚರ್ಚೆಯೇ ಅಪ್ರಸ್ತುತವಾಗುವಂತೆ ಇಂದು ಮೂಲಭೂತವಾದಿಗಳು ಪ್ರಗತಿಪರ ವಿಚಾರ, ಕೃತಿಗಳ ವಿರುದ್ಧ ಕಾರ್ಯಾಚರಣೆಗಿಳಿದಿದ್ದಾರೆ. ಈ ಅಪಾಯದ ವಿರುದ್ಧ ಎಚ್ಚೆತ್ತುಕೊಳ್ಳಬೇಕೆಂದು ಅವರು ಕರೆ ನೀಡಿದರು.

ಖ್ಯಾತ ಚಲನಚಿತ್ರ ಪತ್ರಕರ್ತೆ ಡಾ. ವಿಜಯ ಅವರು ಮಾತನಾಡಿ, ಮತೀಯ ಸಾಮರಸ್ಯದ ಆಶಯವನ್ನು ಹೊಂದಿದ್ದ ಉತ್ತಮ ಚಿತ್ರ ಬಾಂಬೆಯಲ್ಲಿ ಹಿಂದೂಗಳಿಗಾಗಲಿ ಅಥವಾ ಮುಸ್ಲಿಮರಿಗಾಗಲಿ ನೋವಾಗುವಂಥದ್ದು ಏನೂ ಇಲ್ಲ ಎಂದು ಸ್ಪಷ್ಟ ಪಡಿಸಿದರು.

ಈ ಮೇಲ್ಕಂಡವರಲ್ಲದೇ ಹಲವಾರು ಜನ ಈ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದರು.

ಭಗತ್ ಸಿಂಗ್ ಹುತಾತ್ಮ ದಿನಾಚರಣೆ

ಹೊಸಪೇಟೆ: ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.)ನ ನೇತೃತ್ವದಲ್ಲಿ ಭಗತ್ ಸಿಂಗ್ ಹುತಾತ್ಮರ ದಿನಾಚರಣೆಯನ್ನು ಇದೇ ತಿಂಗಳ 23.3.1995ರಂದು ಸಂಘಟನೆಯ ಕಛೇರಿಯಲ್ಲಿ ಆಚರಿಸಲಾಯಿತು.

ಈ ಕಾರ್ಯಕ್ರಮದ ಅಂಗವಾಗಿ ಪ್ರಾರ್ಥನೆಯನ್ನು ಹನುಮಾ ನಾಯ್ಕ ಮಾಡಿದರು. ಉದ್ಘಾಟನೆಯನ್ನು ಪತ್ರಕರ್ತರಾದ ಶಿವಶಂಕರ ಬಣಕಾರ್ ನೆರವೇರಿಸಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಎಸ್.ಅಶೋಕ ಗೌ.ಧನ. ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷರು ಆಗಮಿಸಿದ್ದರು.

ಎಸ್.ಎಫ್.ಐ. ಜಿಲ್ಲಾ ಸಹಕಾರ್ಯದರ್ಶಿ ಕೆ. ರಮೇಶ್ ಮಾತನಾಡಿ 23 ವರ್ಷದ ಯುವಕ ನಗುನಗುತ್ತಾ ಸ್ವಾತಂತ್ರ್ಯಕ್ಕಾಗಿ ತಾಯ್ನಡನ್ನು ಪ್ರೀತಿಸಿ ದೇಶಕ್ಕಾಗಿ ದೇಹವನ್ನೇ ತ್ಯಾಗ ಮಾಡಿದ ಧೀರ ಭಗತ್ ಸಿಂಗರ ಧ್ಯೇಯೋದ್ದೇಶವನ್ನು ಹೊಂದಿರುವ ಸಂಘಟನೆ ಎಸ್.ಎಫ್.ಐ. ಎಂದರು.

ಈ ಸಂದರ್ಭದಲ್ಲಿ ಡಿ.ವೈ.ಎಫ್.ಐ. ತಾಲೂಕು ಕಾರ್ಯದರ್ಶಿ ಗೋವಿಂದರಾಜ ಮಾತನಾಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರ ಅಧ್ಯಕ್ಷರಾದ ಎ.ಕೆ. ಉದೇದಪ್ಪ ವಹಿಸಿದ್ದರು.

ಮತದಾರರಿಗೆ ಅಭಿನಂದನೆ

ಕೊಡಗು: ಕಳೆದ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಅಭ್ಯರ್ಥಿಗಳು ಮತ್ತು ಬೆಂಬಲಿತ ಅಭ್ಯರ್ಥಿಗಳಿಗೆ ದುಡಿದ ಮತ್ತು ಮತ ನೀಡಿದ ಕಾರ್ಯಕರ್ತರಿಗೆ ಮತ್ತು ಮತದಾರರಿಗೆ ಸಿಪಿಐ(ಎಂ) ಕೊಡಗು ಜಿಲ್ಲಾ ಸಮಿತಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸಿದೆ.

ಜಿಲ್ಲೆಯಲ್ಲಿ ಕಾಂಗ್ರೆ ಪಕ್ಷವನ್ನು ಧಿಕ್ಕರಿಸಿದ ಮತ್ತು ಭಾ.ಜ.ಪ.ವನ್ನು ಸೋಲಿಸಿದ ಮತದಾರರನ್ನು ಸಿಪಿಐ(ಎಂ) ಅಭಿನಂದಿಸಿದೆ.

ಸಿಪಿಐ(ಎಂ) ಮತ್ತು ಜನತಾದಳದೊಡನೆ ಸೀಮಿತ ಒಪ್ಪಂದ ಸಾಧ್ಯವಾಯಿತು. ಜನತಾದಳ ನಾಯಕತ್ವ ತನ್ನ ಸಂಕುಚಿತ ಮನೋಭಾವವನ್ನು ತೊರೆದು ಚುನಾವಣೆಯ ರಾಜಕೀಯ ಮಹತ್ವವನ್ನು ಪರಿಗಣಿಸಿ ಸಿಪಿಐ(ಎಂ) ನೊಡನೆ ಒಪ್ಪಂದ ಮಾಡಿಕೊಂಡಿದ್ದರೆ ವಿರಾಜಪೇಟೆ ತಾಲೂಕಿಗೂ ಗಣನೀಯ ವಿಜಯವನ್ನು ಸಾದಿಸುವುದರೊಂದಿಗೆ ತಾಲೂಕು ಪಂಚಾಯತ್ ಆಡಳಿತ ಕೈವಶವಾಗುತ್ತಿತ್ತೆಂಬುದನ್ನು ಚುನಾವಣೆಗಳ ಫಲಿತಾಂಶ ತೋರಿಸಿಕೊಟ್ಟಿದೆ.

ಸಿಐಟಿಯು ರಾಜ್ಯ ಮಂಡಳಿ ಸಭೆ ತಾ. 14-15 ಏಪ್ರಿಲ್ 1995ಕ್ಕೆ

ಸಿಐಟಿಯು ರಾಜ್ಯ ಮಂಡಳಿಯ ಸಭೆಯು ತಾ. 14-15, ಏಪ್ರಿಲ್ 95ರಂದು ಬೆಂಗಳೂರು ಜಾಲಹಳ್ಳಿಯಲ್ಲಿರುವ ಬಿ.ಇ.ಎಲ್. ವರ್ಕರ್ಸ್ ಯೂನಿಯನ್ ಕಛೇರಿಯಲ್ಲಿ ಕರೆಯಲಾಗಿದೆ. ಈ ಸಭೆಯು ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗುತ್ತದೆ.

ಬಿ.ಇ.ಎಲ್ ವರ್ಕರ್ಸ್ ಯೂನಿಯನ್ ಕಚೇರಿಗೆ ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ ಬಿ.ಟಿ.ಎಸ್. ಬಸ್ ನಂ. 271, ಎ, ಬಿ, ಸಿ ಹೋಗುತ್ತದೆ.

"ರಿಕ್ಷಾ ಚಾಲಕನ ಪ್ರಾಮಾಣಿಕತೆ"

ಆಟೋರಿಕ್ಷಾ ಚಾಲಕರ ಸಂಘ (ಎ.ಆರ್.ಡಿ.ಯು)ದ ಕಾರ್ಯಕರ್ತರಾದ ಕಾಂ. ರಾಮಕೃಷ್ಣ ಅವರು ತಮಗೆ ರಸ್ತೆ ಬದಿಯಲ್ಲಿ ದೊರತೆ 94,100 ರೂ ಬೆಲೆಯ ಡಿಮಾಂಡ್ ಡ್ರಾಫ್ಟ್ (ಡಿ.ಡಿ.)ಯನ್ನು ಶ್ರೀರಾಂಪುರ ಪೋಲೀಸ್ ಠಾಣೆಗೆ ಒಪ್ಪಿಸಿದ್ದಾರೆ. ಈ ಡಿಮಾಂಡ್ ಡ್ರಾಫ್ಟ್ ಅವರಿಗೆ ರಿಜರ್ವ್ ಬ್ಯಾಂಕಿನ ಬಳಿಯಲ್ಲಿ ದೊರೆಯಿತು.

ನಗರದ ಉತ್ತರ ವಲಯದ ಡಿ.ಸಿ.ಪಿ. ದೊರೆ ಸ್ವಾಮಿ ನಾಯಕ್ ಅವರು ಆಟೋಚಾಲಕನ ಪ್ರಾಮಾಣಿಕತೆಯನ್ನು ಮೆಚ್ಚಿ ಬಹುಮಾನ ಘೋಷಿಸಿದ್ದಾರೆ.

ಜಿಲ್ಲಾ ಪರಿಷತ್ತುಗಳಲ್ಲಿ ಸಿಪಿಐ(ಎಂ) ಸದಸ್ಯರು

ಕಾಂ. ಸಿ.ಡಿ. ಗಂಗಳಪ್ಪ
ಕೋಲಾರ ಜಿಲ್ಲೆ

ಕಾಂ.ಮೇಘರಾಜು ಕಠಾರೆ
ಗುಲಬರ್ಗಾ ಜಿಲ್ಲೆ

ಕಾಂ. ಪದ್ಮಾವತಿ
ದಕ್ಷಿಣ ಕನ್ನಡ

ತಾಲೂಕು ಪಂಚಾಯತು ಚುನಾವಣೆಗಳಲ್ಲಿ ಗುಲ್ಬರ್ಗಾ ಹಾಗೂ ಕೋಲಾರ ಜಿಲ್ಲೆಗಳಿಂದ ತಲಾ 3 ಸ್ಥಾನಗಳಲ್ಲಿ, ದ.ಕ. ಜಿಲ್ಲೆಯಲ್ಲಿ 2 ಸ್ಥಾನಗಳಲ್ಲಿ, ಮೈಸೂರು ಹಾಗೂ ರಾಯಚೂರು ಜಿಲ್ಲೆಗಳಲ್ಲಿ ತಲಾ 1 ಸ್ಥಾನದಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಗೆದ್ದಿದ್ದಾರೆ.

ಏಪ್ರಿಲ್ 25 ರಿಂದ ಬೀಡಿ ಕಾರ್ಮಿಕರ ಚಳುವಳಿತೀವ್ರಗೊಳಿಸಲು ಕರೆ

ಮಾರ್ಚ್ 23 ರಂದು ಮಂಗಳೂರಿನಲ್ಲಿ ಕರ್ನಾಟಕ ಸ್ಟೇಟ್ ಬೀಡಿ ವರ್ಕರ್ಸ್ ಫೆಡರೇಷನ್ ರಾಜ್ಯ ಸಮಿತಿಯ ಸಭೆಯು ಕಾಮ್ರೇಡ್ ವಿ.ಜೆ.ಕೆ. ನಾಯರ್‌ರವರ ಅಧ್ಯಕ್ಷತೆಯಲ್ಲಿ ಸೇರಿತು. ಪ್ರಧಾನ ಕಾರ್ಯದರ್ಶಿಯಾದ ಕಾಮ್ರೇಡ್ ಕೆ. ಶಂಕರ್ ರವರು ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ಬೀಡಿ ಕಾರ್ಮಿಕರು ಸಮಾನ ಬೇಡಿಕೆಗಳಿಗಾಗಿ ಏಪ್ರಿಲ್ 25 ರಿಂದ ನಡೆಸುವ ತೀವ್ರ ಚಳುವಳಿಯ ಮಹತ್ವವನ್ನು ವಿವರಿಸುತ್ತ ಕರ್ನಾಟಕ ರಾಜ್ಯದಲ್ಲಿ ಯಶಸ್ವಿಗೊಳಿಸಲು ಕಾರ್ಯಕ್ರಮ ರೂಪಿಸಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಕಾಂ.ವಿ.ಜೆ.ಕೆ. ನಾಯರ್ ರವರು ದಕ್ಷಿಣ ಭಾರತದ ನಾಲ್ಕು ರಾಜ್ಯಗಳಾದ ಕೇರಳ, ಕರ್ನಾಟಕ, ಆಂಧ್ರ ಮತ್ತು ತಮಿಳು ನಾಡಿನಲ್ಲಿ ಬೀಡಿಕಾರ್ಮಿಕರು ಪಡೆಯುತ್ತಿರುವ ಕೂಲಿ ಹಾಗೂ ಇತರ ಸವಲತ್ತುಗಳನ್ನು ವಿವರಿಸುತ್ತ ಮೂಲ ಕೂಲಿಯಲ್ಲಿ ತುರ್ತಾಗಿ 50 ರೂಪಾಯಿ ಸಾವಿರ ಬೀಡಿಗೆ ನಿಗದಿಗೊಳಿಸಲು ಕನಿಷ್ಠ ಕೂಲಿ ಪ್ರಕಟಣೆ ಹೊರಡಿಸಲು ಸರ್ಕಾರವನ್ನು ಒತ್ತಾಯಿಸಲು ಇ.ಎಸ್.ಐ., ಗ್ರೇಚ್ಯುಟಿ, ಸಂಬಳ ಚೀಟಿ, ಗುರುತು ಚೀಟಿ ಹಾಗೂ ಇತರ ಕಾಯಿದೆ ಬದ್ಧ ಸವಲತ್ತುಗಳಿಗಾಗಿ ಬೀಡಿ ಕಾರ್ಮಿಕರ ಸರ್ವೆ ನಡೆಸಲು ಒತ್ತಾಯಿಸಿ ಏಪ್ರಿಲ್ 25ರಿಂದ ಬೆಳಗಾಂ, ಬೆಂಗಳೂರು ಮತ್ತು ಮಂಗಳೂರು ಈ ಮೂರು ಕೇಂದ್ರಗಳಲ್ಲಿ ಬೀಡಿ ಕಾರ್ಮಿಕರು ಸಾಮೂಹಿಕ ಧರಣಿ ಸತ್ಯಾಗ್ರಹ ಮತ್ತು ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ನೀಡಿದರು.

ತುರ್ತಾಗಿ ಸಂಘಗಳ ಕಾರ್ಯಕಾರಿ ಸಮಿತಿಗಳನ್ನು ಸೇರಿಸಿ, ಹೋರಾಟದ ಸಮಿತಿಗಳನ್ನು ರಚಿಸಿ ತನ್ಮೂಲಕ ಹೋರಾಟದ ನಿಧಿ ಸಂಗ್ರಹಿಸಲು ಹಾಗೂ ಸಮಾವೇಶಗಳನ್ನು ನಡೆಸಿ, ಬೇಡಿಕೆಗಳನ್ನು ಪ್ರಚಾರ ಮತ್ತು ಹೋರಾಟದ ಮಹತ್ವವನ್ನು ರಾಜ್ಯಾದ್ಯಂತ ನಡೆಸಲು ರಾಜ್ಯ ಸಮಿತಿಯು ನಿರ್ಧಾರ ಕೈಗೊಂಡಿರುತ್ತದೆ.

ಕರ್ನಾಟಕ ಸುದ್ದಿ ಸಮಾಚಾರ

ಪವರ್ ಲೂಂ ಕಾರ್ಮಿಕರ ಯಶಸ್ವಿ ಹೋರಾಟ

ಒಂದು ವಾರ ಮುಷ್ಕರ ನಡೆಸಿದ ಅಸಂಘಟಿತರು

ಅನೇಕ ವರ್ಷಗಳಿಂದ ಮನಸ್ಸಿನ ಮೂಲೆಯೊಳಗೆ ತಕಥೈ ಎಂದು ಕುಣಿದಾಡುತ್ತಿದ್ದ ಪವರ್ ಲೂಂ ಕಾರ್ಮಿಕರ ನೋವು ಇದ್ದಕ್ಕಿದ್ದಂತೆ ಮಂಗಳವಾರ 21.3.1995ರಂದು ಜ್ವಾಲಾಮುಖಿಯಂತೆ ಆಸ್ಫೋಟಿಸಿ, ಬೆಂಗಳೂರು ನಗರದ ಹಲವೆಡೆ 1 ಲಕ್ಷದ ಇಪ್ಪತ್ತು ಸಾವಿರ ಕಾರ್ಮಿಕರನ್ನು ವರ್ಗ ಹೋರಾಟದ ಮಾರ್ಗಕ್ಕೆ ತಳ್ಳಿತು. 'ಇದು ಯಾವಾಗಲೋ ಆಗಬೇಕಾದ ಕೆಲಸ'- ಪ್ರತಿಯೊಬ್ಬ ಕಾರ್ಮಿಕರ ಬಾಯಿಯಲ್ಲಿ ಬರುತ್ತಿದ್ದ ಮಾತು. 'ಅಂದು ಆಕಸ್ಮಿಕವಾಗಿ ನಡೆದ ಒಂದು ಘಟನೆ ಪವರ್ ಲೂಂ ಕಾರ್ಮಿಕರನ್ನು ತಮ್ಮ ಹಕ್ಕುಗಳಿಗಾಗಿ ಬೀದಿಗಿಳಿದು ಹೋರಾಡುವಂತೆ ಪ್ರೇರೇಪಿಸಿತು. ಅಂದಿನಿಂದ ಅಂದರೆ 21.3.1995 ರಿಂದ 27.3.1995 ರವರೆಗೆ ಕಾರ್ಮಿಕರ ಶಕ್ತಿ ಮಾಲೀಕರ ಎದೆ ನಡುಗಿಸಿದ್ದು ಈಗ ಇತಿಹಾಸವಾಗಿದೆ.

ತಮ್ಮ ಜೀವನ ನಡೆಸಲು ಬೇಕಾದ ಕನಿಷ್ಠ ಕೂಲಿಗಾಗಿ ನಿರ್ವಾಹವಿಲ್ಲದೆ ಹೋರಾಟ ಭುಗಿಲೆದ್ದಿತು. ಆನಂತರ ಸಿಐಟಿಯುನ ಸಮರ್ಥ ನಾಯಕತ್ವದಲ್ಲಿ ಈ ಹೋರಾಟಕ್ಕೆ ಸ್ಪಷ್ಟ ದಾರಿ ಸಿಕ್ಕಿತು. ಅನೇಕ ಕಡೆ ಮಾಲೀಕರು -ಪೋಲೀಸರ ಒಳಸಂಚಿನಿಂದಾಗಿ ಕೆಲವರು ಕಾರ್ಮಿಕರು ಬಲಿಬಿದ್ದರೂ ಬಹುತೇಕ ಎಲ್ಲಾ ಕಾರ್ಮಿಕರು ಬಂಡೆಯಂತೆ ನಿಂತು, ಹೋರಾಟವನ್ನು ಯಶಸ್ಸಿನ ಪಥದತ್ತ ಸಾಗಿ ಯಶಸ್ವಿಯೂ ಆದ ಹೋರಾಟದ ಹಿನ್ನೆಲೆಯಲ್ಲಿ ಪವರ್ ಲೂಂ ಬಗ್ಗೆ ಕಿರು ನೋಟವನ್ನು ಹರಿಸೋಣ.

ಹಿನ್ನೆಲೆ

ಬೆಂಗಳೂರಿನ ಸುಮಾರು ಏಳೆಂಟು ಪ್ರದೇಶಗಳಲ್ಲಿ ಪವರ್ ಲೂಂ ಉದ್ಯಮ ಬೆಳೆದಿದೆ. ಅದರಲ್ಲಿ ಪ್ರಮುಖವಾಗಿ ಕಬ್ಬನ್ ಪೇಟೆ, ವೀವರ್ಸ್ ಕಾಲೋನಿ, ಸಂಪಂಗಿರಾವುನಗರ, ಶ್ರೀರಾಂ ಪುರ, ಲಕ್ಷ್ಮಿನಾರಾಯಣಪುರ, ಶ್ರೀನಗರ, ವಿನಾಯಕ ನಗರ, ಸುಧಾಮನಗರ ಹೀಗೆ ಹಲವು ಪ್ರದೇಶಗಳಲ್ಲಿ ಈ ಉದ್ಯಮ ಬೃಹತ್ತಾಗಿ ಬೆಳೆದಿದೆ.



ಕಾಂ. ಸೂರಿ ನೇತೃತ್ವದಲ್ಲಿ ಪವರ್ ಲೂಂ ಕಾರ್ಮಿಕರ ಬೃಹತ್ ಸಭೆ

ಇವರಲ್ಲಿ ಅತಿ ದೊಡ್ಡ ಮಾಲಿಕರೆಂದರೆ 80 ಮಗ್ಗಗಳ ಒಡೆಯ ಅತಿ ಕಡಿಮೆಯೆಂದರೆ 2 ಮಗ್ಗಗಳ ಒಡೆಯ. ಇವರಲ್ಲಿ ಕೆಲವರು ಸ್ವಂತವಾಗಿ ಮಗ್ಗಗಳನ್ನಿಟ್ಟು ಸೀರೆಗೆ ಬೇಕಾದ ಮೂಲವಸ್ತುಗಳನ್ನು ಅವರೇ ಬೆಲೆಗೆ ತಂದು ಮಾಡುವವರು, ಇನ್ನೂ ಹಲವರು ಮಗ್ಗಗಳನ್ನು ಬಾಡಿಗೆಗೆ ತಂದು ಸೀರೆಯ ಮೂಲ ವಸ್ತುಗಳನ್ನು ತಂದು ಸೀರೆಯನ್ನು ನೇಯ್ದು, ಆ ಸೀರೆಯನ್ನು ಅವರಿಗೆ ಕೊಟ್ಟು, ನೇಯ್ದಿದ್ದಕ್ಕಾಗಿ ಕೂಲಿ ಪಡೆಯುವವರು (ಇದನ್ನು ಮಜೂರಿ ಕೆಲಸ ಎನ್ನುತ್ತಾರೆ) ಇದ್ದಾರೆ. ಈ ಉದ್ಯಮ ಹೇಗೆ ಬೇರೂರಿದೆ ಎಂದರೆ ಇಲ್ಲಿ ಮಗ್ಗಗಳನ್ನು ಹಾಕುವುದೆಂದರೆ ಯಾವುದೇ ರೀತಿ ನೀತಿಗಳಿಲ್ಲ. ಯಾವುದೇ ಪರ್ಮಿಷನ್ ಬೇಕಾಗಿಲ್ಲ. ಮಗ್ಗಗಳನ್ನು ಹಾಕಲು ಬೇಕಾದ ಜಾಗವೊಂದಿದ್ದರೆ, ಹಣ ಚೆಲ್ಲಿದರೆ ಎಲ್ಲವೂ ಸುಗಮವಾಗಿ ಸಾಗಿ ಕಾರ್ಮಿಕರ ರಕ್ತ ಬಸಿದು ಇವರು ಶ್ರೀಮಂತರಾಗಿದ್ದಾರೆ/ರಾಗುತ್ತಿದ್ದಾರೆ. ಕೆಲವು ದಿನಗಳ ಹಿಂದೆ 30-40 ಮಗ್ಗಗಳ ಮಾಲೀಕರು, ತೆರಿಗೆಯನ್ನು ತಪ್ಪಿಸಲು ಆತನ ಹೆಂಡತಿ, ಮಗ ಹೀಗೆ ಸಂಬಂಧಿಕರ ಹೆಸರುಗಳಿಗೆ ಹತ್ತತ್ತು ಮಗ್ಗಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ. ಒಂದುಕಡೆ ಮಾಲಿಕನ ಮನೆಯ ನಾಯಿಯ ಹೆಸರಲ್ಲಿ 10 ಮಗ್ಗಗಳಿವೆ ಎಂದರೆ ಇಲ್ಲಿನ ಮಾಲಿಕರ ವ್ಯವಸ್ಥಿತ ಪಿತೂರಿ ಅರ್ಥವಾಗುತ್ತದೆ.

ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಯಾವುದೇ ರೀತಿಯ ಕೆಲಸದ ಭದ್ರತೆಯಿಲ್ಲದೇ ಒಂದು ದಿವಸ ಒಬ್ಬ ಕಾರ್ಮಿಕ ಕೆಲಸಕ್ಕೆ ಬರದಿದ್ದರೆ, ಅಥವಾ ತುರ್ತು ಕೆಲಸದಿಂದ ಒಂದು ದಿನ ಗೈರು ಹಾಜರಾದರೆ, ಮರುದಿನದಿಂದ ಆ ಮಾಲಿಕ ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ತೆಗೆಯುತ್ತಾನೆ. ಇಲ್ಲಿ ಬಹುಮುಖ್ಯವಾದ ಸಂಗತಿಯೊಂದಿದೆ. ಬೆಳಿಗ್ಗೆ 7 ಗಂಟೆಗೆ ಕಾರ್ಮಿಕರೆಲ್ಲ ಫ್ಯಾಕ್ಟರಿಯ ಒಳಗೆ ಸೇರಿದರೆ, ಆ ಫ್ಯಾಕ್ಟರಿಯ ಬಾಗಿಲಿಗೆ ಬೀಗ ಹಾಕಿ ಕಾರ್ಮಿಕರ್‍ಯಾರೂ ಹೊರಹೋಗದಂತ ಪರಿಸ್ಥಿತಿ ಇದೆ. ಕೆಲವು ಕಾರ್ಖಾನೆಗಳಲ್ಲಿ ಮೂತ್ರ ವಿಸರ್ಜನೆಗೂ ಜಾಗವಿಲ್ಲದೆ, ಹೊರಗಡೆ ಬಿಡದೆ, ಕಾರ್ಮಿಕರು ಮಧ್ಯಾಹ್ನದವರೆಗೆ ಊಟಕ್ಕೆ ಬಾಗಿಲು ತೆರೆಯುವವರೆಗೂ ಕಾಯಬೇಕಾಗಿದೆಯೆಂದರೆ ಈ ಮಗ್ಗ ಕಾರ್ಮಿಕರ ಶೋಷಣೆಯ ಒಂದು ಚಿತ್ರಣವನ್ನು ನೀವು ಕಾಣಬಹುದು. ಕೆಲವು ಕಾರ್ಖಾನೆಗಳಲ್ಲಿ ಸರಿಯಾದ ಬೆಳಕು, ಗಾಳಿಯ ವ್ಯವಸ್ಥೆ ಇಲ್ಲದೆ, ಅಲ್ಲಿನ ಕಾರ್ಮಿಕರು ಟಿ.ಬಿ.ಯಂತಹ ಕಾಯಿಲೆಗಳಿಗೆ ತುತ್ತಾಗಿರುವ ನಿದರ್ಶನಗಳೂ ಉಂಟು.

ಹೋರಾಟದ ಮೊದಲ ಪರಿಣಾಮ

ಹೀಗೆ ಕಾರ್ಮಿಕರನ್ನು ಭಯದಡಿಯಲ್ಲಿ, ಅನಾರೋಗ್ಯದ ವಾತಾವರಣದಲ್ಲಿ, ಕಡಿಮೆ ಕೂಲಿಗೆ ದುಡಿಸಿಕೊಳ್ಳುತ್ತಿದ್ದ ಮಾಲಿಕರಿಗೆ ಕಾರ್ಮಿಕರ ಈ ಹೋರಾಟ ಸರಿಯಾದ ಪೆಟ್ಟನ್ನು ಕೊಟ್ಟಿದೆ. ಮಾಲೀಕರು ಯಾವ ರೀತಿ ಹೆದರಿದ್ದಾರೆಂದರೆ ಕಾರ್ಮಿಕರು ಸೋಮವಾರ 27.3.1995 ರಂದು ಸಭೆ ಸೇರದಿರಲೆಂದು, ಆ ದಿನ ಬೆಳಿಗ್ಗೆ ಕೆಲವು ಮಾಲಿಕರು ಮೊದಲು ಕೊಡುತ್ತಿದ್ದ ಕೂಲಿಗಿಂತ ಹೆಚ್ಚು ಕೊಟ್ಟು ಅಡ್ವಾನ್ಸ್ ಕೊಟ್ಟು ಕೆಲಸಕ್ಕೆ ತೆಗೆದುಕೊಂಡಿರುವುದೆ ಸಾಕ್ಷಿ. ಇದಲ್ಲದೆ, ಆ ದಿನ ಬೆಳಿಗ್ಗೆ ಸಿಐಟಿಯು ರಾಜ್ಯ ಸಮಿತಿ ಕಛೇರಿಗೆ ಕೆಲವು ಗೂಂಡಾಗಳೊಂದಿಗೆ ಮಾಲೀಕರು ಬಂದು ಸಿಐಟಿಯು ರಾಜ್ಯ ಅಧ್ಯಕ್ಷರಾದ ಸೂರ್ಯನಾರಾಯಣ ರಾವ್ ಮೇಲೆ ಹಲ್ಲೆ ನಡೆಸಿದ್ದು ಅವರ ಭಯಭೀತ ಮನಸ್ಸನ್ನು ಎತ್ತಿ ತೋರಿಸುತ್ತದೆ.

ಅನೇಕ ಕಡೆ ಪೋಲೀಸರ ಜತೆ ಸೇರಿ ಸುಳ್ಳು ಮೊಕದ್ದಮೆಗಳನ್ನು ಹಾಕಿ ಅನೇಕ ಕಾರ್ಮಿಕರನ್ನು ಜೈಲಿನಲ್ಲಿಟ್ಟರೂ ಕಾರ್ಮಿಕರ ಉತ್ಸಾಹವನ್ನು ಕುಗ್ಗಿಸಲು ಮಾಲೀಕರಿಗೆ ಸಾಧ್ಯವಾಗಲಿಲ್ಲ ನೇಕಾರರು ದೃಢ ಹೆಜ್ಜೆಗಳನ್ನಿಟ್ಟರು.

ಇತ್ತೀಚೆಗೆ ತಾನೇ ಅಧಿಕಾರಕ್ಕೆ ಬಂದ 'ಜನಪರ' ಸರಕಾರವೆಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವ ಜನತಾದಳ ಸರಕಾರ ಮಧ್ಯಪ್ರವೇಶ ಮಾಡಬೇಕು ಎಂಬ ಒತ್ತಾಯವನ್ನು ಸಿಐಟಿಯು ಆಗ್ರಹ ಪಡಿಸಿತ್ತು.

ಈ ಮಧ್ಯೆ ಗುರುವಾರ ಸಭೆ ಸೇರಿದ ಕಾರ್ಮಿಕರು ಒಂದು ತಾತ್ಕಾಲಿಕ ಸಂಘಟನೆ ರಚಿಸಿಕೊಂಡರು. ಅದಕ್ಕೆ ಎಸ್. ಸೂರ್ಯನಾರಾಯಣ ರಾವ್ ಅಧ್ಯಕ್ಷರಾಗಿ, ಆರ್. ಶ್ರೀನಿವಾಸ್ ಪ್ರಧಾನ ಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಸಭೆಯು ಆರಿಸಿತು. ಆನಂತರ ಈ ಸಂಘದ ಅಧ್ಯಕ್ಷರಾದ ಕಾಂ. ಸೂರಿಯವರ ಮಧ್ಯಪ್ರವೇಶದಿಂದ ಈ ಹೋರಾಟಕ್ಕೆ ಹೊಸ ಕಳೆಯೇ ಬಂದಿತು. ಮಾರ್ಚ್ 25ರಂದು ತಮ್ಮ ಬೇಡಿಕೆಗಳನ್ನು ಈಡೇರಿಸಲು ಸರಕಾರಕ್ಕೆ ಒತ್ತಡ ತರಲು ಪವರ್ ಲೂಂ ಕಾರ್ಮಿಕರ ಬೃಹತ್ ಮೆರವಣಿಗೆಯನ್ನು ನಡೆಸಲಾಯಿತು. ಮೆರವಣಿಗೆಯಲ್ಲಿ 10 ಸಾವಿರಕ್ಕಿಂತ ಹೆಚ್ಚಿನ ಕಾರ್ಮಿಕರಿದ್ದರು. ಆ ದಿನ ಕಾಂ. ಸೂರಿಯವರ ನೇತೃತ್ವದಲ್ಲಿ ಕಾರ್ಮಿಕರ ನಿಯೋಗ ರಾಜ್ಯದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯ ಮಾಡಿದರು. ಇದಕ್ಕೆ ಮುಖ್ಯಮಂತ್ರಿಗಳು ಸೋಮವಾರ ಸ್ಥಳದಲ್ಲೇ ಪೋಲೀಸ್ ಕಮೀಷನರ್, ಕಾರ್ಮಿಕ ಕಾರ್ಯದರ್ಶಿ ಮಾಲಿಕರು ಹಾಗೂ ಪವರ್ ಲೂಂ ಕಾರ್ಮಿಕರ ಸಭೆಯನ್ನು ನಡೆಸಲು ಆದೇಶಿಸಿದರು.

ಈ ಸಭೆಯಲ್ಲಿ ಮಾತುಕತೆ ನಡೆದು, ಕೆಲವು ಮಾಲೀಕರು ಹೆಚ್ಚಿನ ಕೂಲಿ ಕೊಡಲು ಸಿದ್ಧರೆಂದು ಹೇಳಿದರು. ಆದರೆ ಬೇರೆ ಕಾನೂನುಗಳನ್ನು ಒಪ್ಪಿಕೊಳ್ಳಲು ತಯಾರಿಲ್ಲದಂತೆ ಕಾಣುತ್ತಿತ್ತು. ಬೇಡಿಕೆಗಳನ್ನು ಪರಿಶೀಲಿಸಲು 3 ದಿನಗಳ ಕಾಲಾವಕಾಶವನ್ನು ಸರಕಾರ ಮತ್ತು ಮಾಲೀಕರು ಪಡೆದರು. ಆದ್ದರಿಂದ ಮತ್ತೆ ಬುಧವಾರ ಸಭೆ ಸೇರಿ ಬೇಡಿಕೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಆ ಸಭೆ ತೀರ್ಮಾನಿಸಿತು. ಸುಳ್ಳು ಕೇಸುಗಳನ್ನು ಹಾಕಿ ಬಂಧಿಸಲ್ಪಟ್ಟ ಕಾರ್ಮಿಕರನ್ನು ಬೇಷರತ್ತಾಗಿ ಬಿಡುಗಡೆ ಮಾಡಲು ಸರ್ಕಾರ ಒಪ್ಪಿಕೊಂಡಿತು. ಆನಂತರ ಕಾರ್ಮಿಕರ ಸಭೆಯಲ್ಲಿ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಡೆದ ಮಾತುಕತೆಗಳನ್ನು ವಿವರಿಸಿದ ಸೂರಿಯವರು, "ಈ ಕಾಲಘಟ್ಟದಲ್ಲಿ ಮುಷ್ಕರವನ್ನು ವಾಪಸ್ ಪಡೆಯಲು ಮನವಿ ಮಾಡಿದರು. ಸರಕಾರ 3 ದಿನಗಳ ಕಾಲಾವಕಾಶ ಕೇಳಿದೆ. ಆದರೆ ನಾವು 15 ದಿನಗಳ ಕಾಲಾವಕಾಶ ನೀಡುತ್ತೇವೆ. ಅಲ್ಲಿಯವರೆಗೆ ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂದಕ್ಕೆ ಪಡೆಯೋಣ" ಎಂದು ಮನವಿ ಹೇಳಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿ ಮಂಗಳವಾರದಿಂದ ಒಂದು ವಾರದ ಮುಷ್ಕರವನ್ನು 28.3.95ಕ್ಕೆ ನಿಲ್ಲಿಸಿ ಕೆಲಸಕ್ಕೆ ಹಿಂತಿರುಗಲು ಕಾರ್ಮಿಕರು ನಿರ್ಧರಿಸಿದರು.

ಕಾಂ. ಸೂರಿಯವರು ಹೇಳಿದಂತೆ ಮೈಕ್ರೋ, ಹೋರಾಟದ ನಂತರ ನಡೆದ ಧೀರೋದಾತ್ತವಾದ ಹೋರಾಟವಾಗಿ ಮುಂದುವರೆದು ಯಶಸ್ವಿಯಾಗಿ ಮೊದಲ ಹಂತಮುಕ್ತಾಯವಾಯಿತು.

(ವರದಿ: ರಾಜಶೇ...)

ಸಿಐಟಿಯು ಖಂಡನೆ

ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಹೋರಾಟವನ್ನು ಬೆಂಬಲಿಸುತ್ತಾ ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿಯು ಮಾಲಿಕರು ಸಿಐಟಿಯು ರಾಜ್ಯ ಕಛೇರಿಗೆ ನುಗ್ಗಿ 27-3-1995 ರಂದು ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣ ರಾವ್ ರವರ ಮೇಲೆ ಹಲ್ಲೆ ಮಾಡಿದ್ದನ್ನು ಖಂಡಿಸಿದೆ. ಸರಕಾರವು ಕೂಡಲೇ ಹಲ್ಲೆ ಮಾಡಿದವರನ್ನು ದಸ್ತಗಿರಿ ಮಾಡಿ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಬೇಕೆಂದೂ ಒಂದುವಾರದೊಳಗೆ ಆಶ್ವಾಸನೆ ಕೊಟ್ಟಂತೆ ನೇಕಾರರ ಕನಿಷ್ಠ ಕೂಲಿಯನ್ನು ಹೆಚ್ಚಿಸಬೇಕೆಂದೂ ಒತ್ತಾಯಿಸಿದೆ.



...ಪವರ್ ಲೂಂ ಕಾರ್ಮಿಕರು

ಪೋಲೀಸರ ದಬ್ಬಾಳಿಕೆ ಪ್ರತಿಭಟನೆ

ಮಂಗಳೂರು: ಮೂಡುಶೆಡ್ಡೆಯ ಬಡ ಕಾರ್ಮಿಕರು ಹಾಗೂ ನಾಗರಿಕರು ತಮ್ಮ ನಿವಾಸಿಗಳಿಗೆ ಅಪಾಯಮಾಡಿರುವ ಕಪ್ಪು ಕಲ್ಲಿನ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಕಳೆದ ಹಲವಾರು ವರ್ಷಗಳಿಂದ ಒತ್ತಾಯಿಸುತ್ತಾ ಬಂದಿದ್ದು ಇದೀಗ ಕಳೆದ ಜನವರಿಯಿಂದ ಈ ಗಣಿಗಾರಿಕೆ ನಿಂತುಹೋಗಿದೆ.

ಆದರೆ ಕಳೆದ ಕೆಲವು ದಿನಗಳಿಂದ ಸದರಿ ಗಣಿ ಮಾಲಿಕರು ಈ ... ಭಾಗವಹಿಸಿದ ಬಡ ಜನರ ... ನುಗ್ಗಿ ಅವರ ಜೀವನಾವಶ್ಯಕ ... ಕೊಂಡೊಯ್ದು ಅವರ ... ನಡೆಸಲು ಅವಾಚ್ಯ ಶಬ್ದಗಳಿಂದ ... ದಬ್ಬಾಳಿಕೆ ನಡೆಸಲಾರಂಭಿಸಿದ್ದಾರೆ. ಈ ಗಣಿ ಮಾಲಕರ ಜೊತೆ ಶಾಮೀಲಾಗಿ ಕಂಕನಾಡಿ ಠಾಣೆಯ ಪೋಲೀಸ್ ಅಧಿಕಾರಿ ವಿಶ್ವನಾಥ ಪಂಡಿತ ಬಡ ನಿವಾಸಿಗಳನ್ನು ಬಂಧಿಸುವುದು ಸ್ಥಳ ಬಿಟ್ಟು ಹೋಗುವಂತೆ ಬೆದರಿಸುವುದು, ಗಣಿ ಮಾಲಕರ ಗೂಂಡಾಗಳನ್ನು ನಿವಾಸಿಗಳ ಮೇಲೆ ಛೂ ಬಿಡುವುದು ಮುಂತಾದ ವಿವಿಧ ರೀತಿಯ ಕಿರುಕುಳ ನೀಡುತ್ತಿರುವುದು ಖಂಡನೀಯ.

ಕೂಡಲೇ ಹಿರಿಯ ಪೋಲೀಸ್ ಅಧಿಕಾರಿಗಳು ಈ ಬಗ್ಗೆ ಸೂಕ್ತ ಗಮನ ಹರಿಸಿ ಈ ಅಕ್ರಮಗಳನ್ನು ಕೊನೆಗೊಳಿಸುವಂತೆಯೂ.

ಇಂತಹ ಕುಕೃತ್ಯಗಳಲ್ಲಿ ... ಪೋಲೀಸ್ ಅಧಿಕಾರಿ ವಿಶ್ವನಾಥ ... ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಸಿಪಿಐ(ಎಂ) ಮಂಗಳೂರು ನಗರ ... ಒತ್ತಾಯಿಸಿದೆ.

ಗಣಿ ಮಾಲಕರನ್ನು ಬೆಂಬಲಿಸಿ ಪೋಲೀಸರು ನಡೆಸುವ ಕಿರುಕುಳಗಳಿಗೆದುರಾಗಿ 25.3.1995 ರಂದು ಸಂಜೆ ಗ್ರಾಮದ ನೂರಾರು ನಾಗರಿಕರು ಮಹಿಳೆಯರು ಮಕ್ಕಳು ಸೇರಿ ಕಂಕನಾಡಿ ಪೋಲೀಸ್ ಠಾಣೆಯೆದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಯಾವುದೇ ಕ್ರಿಮಿನಲ್ ಘಟನೆಗಳು ನಡೆಯದೆಯೂ ಗಣಿ ಮಾಲಕನ ಪರವಹಿಸಿ, ನಿವಾಸಿಗಳಿಗೆ ಕಿರುಕುಳ ನೀಡುವ ಪೊಲೀಸ್ ಅಧಿಕಾರಿ ವಿಶ್ವನಾಥ ಪಂಡಿತರ ನೀತಿಯನ್ನು ಖಂಡಿಸಿ, ನಗರ ಸಮಿತಿಯ ಕಾರ್ಯದರ್ಶಿ ಕಾಂ.ವಿಷ್ಣುಮೂರ್ತಿ ಮದ್ಯಪ್ರವೇಶಿ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಬಾಬುದೇವಾಡಿಗ ಮೊದಲಾದವರು ಮಾತನಾಡಿದರು. ಗಣಿ ಮತ್ತು ಭೂ ವಿಜ್ಞಾನ, ಪೋಲೀಸ್ ಮತ್ತು ರೆವಿನ್ಯೂ ಇಲಾಖೆಗಳು ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದಲ್ಲಿ ಅನಿದಿಷ್ಟಾವಧಿಯ ಚಳುವಳಿ ನಡೆಸಲು ಸಿಪಿಐ(ಎಂ) ನಗರ ಸಮಿತಿ ನಿರ್ಧರಿಸಿದೆ.

ನೇಕಾರರ ಸಭೆ

ಉಡುಪಿ: ಉಡುಪಿ ಪ್ರಾಥಮಿಕ ನೇಕಾರರ ಸಹಕಾರಿ ಸಂಘದ ದೊಡ್ಡ ಗುಡ್ಡೆ ನೇಕಾರರ ಸಭೆಯು ತಾ. 24.3.95 ರಂದು ಕರ್ನಾಟಕ ಕೈ ಮಗ್ಗ ನೇಕಾರ ಸಮನ್ವಯ ಸಮಿತಿ ಅಧ್ಯಕ್ಷರಾದ ಕಾಂ. ನಿತ್ಯಾನಂದ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಗುರುರಾಜ ಸೆಟ್ಟಿಗಾರರು, ಕಾಲನಿ ನೇಕಾರರಿಗೆ ರಿಜಿಸ್ಟ್ರಿ ನೋಟೀಸ್ ಬಂದ ವಿಚಾರ ವಿವರಿಸಿದರು. ಕಾರ್ಯದರ್ಶಿಯವರು ಸಭೆಗೆ ವಿವರಿಸಿದ ವಿಚಾರವನ್ನು ಸಭೆಯು ಚರ್ಚಿಸಿ ಕಾಲನಿ ಕಟ್ಟಡದ ಸಾಲದ ಬಡ್ಡಿಯನ್ನು ಮನ್ನಾಮಾಡುವ ಮನವಿಯನ್ನು ಸರಕಾರಕ್ಕೂ ಆಡಳಿತ ಅಧಿಕಾರಿಯವರಿಗೂ ಕೊಡಬೇಕೆಂದು ಸಭೆಯು ಅಭಿಪ್ರಾಯ ಪಟ್ಟಿತು. ಈ ಸಭೆಗೆ ಕಾಂ. ಪಿ. ... ವಂದನೆ ...

ಸಿಪಿಐ(ಎಂ) 15
15 ನೇ ಮಹಾಧಿವೇಶನ, ಚಂಡೀಗಢ 3-8 ಏಪ್ರಿಲ್, 1995

ಮದ್ರಾಸಿನಿಂದ ಚಂಡೀಗಢದವರೆಗೆ

-ಸುರ್ಜಿತ್

ಮೂರು ವರ್ಷಗಳ ಹಿಂದೆ ಮದ್ರಾಸಿನಲ್ಲಿ ಸಿಪಿಐ(ಎಂ)ನ ಹದಿನಾಲ್ಕನೇ ಮಹಾಧಿವೇಶನ ನಡೆದ ವೇಳೆಗೆ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ಮತ್ತು ಇಡೀ ಸಮಾಜವಾದಿ ವ್ಯವಸ್ಥೆ ಬಹಳ ಕಷ್ಟಕರ ಸನ್ನಿವೇಶದಲ್ಲಿತ್ತು ಮತ್ತು ಸಾಮ್ರಾಜ್ಯಶಾಹಿ ಇನ್ನು ಸಮಾಜವಾದಕ್ಕೆ ಭವಿಷ್ಯವಿಲ್ಲ, ಕಮ್ಯುನಿಸಂ ಸತ್ತಿದೆ ಎಂದು ಆರ್ಭಟಿಸುತ್ತಾ ಆಕ್ರಮಣ ಆರಂಭಿಸಿತ್ತು. ಆಂತರಿಕವಾಗಿ ದೇಶದಲ್ಲಿ ಅಸ್ಥಿರತೆಯ ಪರಿಸ್ಥಿತಿಯಿತ್ತು. ಬಿಜೆಪಿ ಪ್ರಧಾನ ವಿರೋಧ ಪಕ್ಷವಾಗಿ ಮೂಡಿಬಂದಿತ್ತು. ಕಾಂಗ್ರೆಸ್ ಸಂಸತ್ತಿನಲ್ಲಿ ಬಹುಮತ ಪಡೆಯಲಾರದೆ ಅಲ್ಪಮತದ ಸರಕಾರ ರಚಿಸಿತ್ತು.

ಇಂತಹ ಸನ್ನಿವೇಶದಲ್ಲೂ 14ನೇ ಮಹಾಧಿವೇಶನದಲ್ಲಿ ನಡೆದ ಚರ್ಚೆಗಳು ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ಮೂಲಭೂತವಾಗಿ ಏನಾದರೂ ತಪ್ಪಿದೆ ಎಂಬುದನ್ನು ಈ ಹಿನ್ನಡೆಗಳು ತೋರಿಸುತ್ತಿಲ್ಲ, ಸಮಾಜವಾದ ಕಟ್ಟುವಲ್ಲಿ ಆ ದೇಶಗಳಲ್ಲಿ ನಡೆದ ವಿಕೃತಿಗಳಿಂದ ಹೀಗಾಗಿದೆ ಎಂಬ ತೀರ್ಮಾನದೊಂದಿಗೆ ಧೈರ್ಯವಾಗಿ ಹೊರಬರಲು ನೆರವಾದವು.

ಅಂತಹ ಬಿಕ್ಕಟ್ಟಿನ ಸನ್ನಿವೇಶ ನಮ್ಮ ಪಕ್ಷವನ್ನು ತಟ್ಟದಿರಲು ಸಾಧ್ಯವಿರಲಿಲ್ಲ, ಆದರೆ ಅದು ತಟ್ಟಿದ್ದು ಅತೀ ಕಮ್ಮಿ. ಏಕೆಂದರೆ ನಮ್ಮ ದೇಶದಲ್ಲೇ ಅವಿಭಜಿತ ಕಮ್ಯುನಿಸ್ಟ್ ಪಕ್ಷದಲ್ಲಿ ಒಂದು ಸರಿಯಾದ ಕಾರ್ಯತಂತ್ರ ಹಾಗೂ ನಿಲುವಿಗಾಗಿ ನಡೆದ ದೀರ್ಘ ಕಾಲದ ತೀವ್ರ ಆಂತರಿಕ ಹೋರಾಟದಲ್ಲಿ ನಮ್ಮ ದೇಶದ ವಾಸ್ತವ ಪರಿಸ್ಥಿತಿಗಳಿಗೆ ಮಾರ್ಕ್ಸ್ ವಾದ-ಲೆನಿನ್‌ವಾದವನ್ನು ನಿರ್ದಿಷ್ಟವಾಗಿ ಅನ್ವಯಿಸುವುದು ಅತ್ಯಗತ್ಯ ಎಂದು ಒತ್ತು ನೀಡುವುದು ನಮಗೆ ಸಾಧ್ಯವಾಗಿತ್ತು. ಆಗ ಎರಡು ದೊಡ್ಡ ಪಕ್ಷಗಳಾದ ಸೋವಿಯೆತ್ ಒಕ್ಕೂಟದ ಹಾಗೂ ಚೀಣಾದ ಕಮ್ಯುನಿಸ್ಟ್ ಪಕ್ಷಗಳು ಭಾರತದ ಪ್ರಭುತ್ವದ ವರ್ಗ ಸ್ವರೂಪದ ಬಗ್ಗೆ ಮುಂದಿಟ್ಟ ತಿಳುವಳಿಕೆಯನ್ನು ನಾವು ತಿರಸ್ಕರಿಸಿದೆವು. ಇದರಿಂದ ಭಾರತೀಯ ಕಮ್ಯುನಿಸ್ಟ ಆಂದೋಲನ ಇಬ್ಭಾಗವಾದ ಮೇಲೆ ಭಾರತದ ಕಾರ್ಮಿಕ ವರ್ಗ, ರೈತಾಪಿ ವರ್ಗಗಳು ಹಾಗೂ ಶ್ರಮಜೀವಿ ವಿಭಾಗಗಳಲ್ಲಿ ನಮ್ಮ ನೆಲೆ ಸ್ಥಾಪಿಸಿಕೊಳ್ಳುವವರೆಗೂ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದಲ್ಲಿ ನಾವು ಒಬ್ಬಂಟಿಯಾಗಿಯೇ ಇದ್ದೆವು. ಆದರೆ ಆಗಲೂ ಕೂಡಾ ನಾವು ನಮ್ಮ ಅಂತರ್ರಾಷ್ಟ್ರೀಯ ದೃಷ್ಟಿಕೋಣವನ್ನು ಬಿಟ್ಟಿರಲಿಲ್ಲ.

ಅಪಾರ ಕೊಡುಗೆ

ಈ ರೀತಿ ಅಂತರ್ರಾಷ್ಟ್ರೀಯ ದೃಷ್ಟಿಕೋನ ಹಾಗೂ ದೇಶದ ನಿರ್ದಿಷ್ಟ ಸನ್ನಿವೇಶದ ನಿರ್ದಿಷ್ಟ ಅಧ್ಯಯನದಿಂದಾಗಿ ಎಪ್ಪತ್ತರ ದಶಕದಲ್ಲೇ ದೇಶದ ಕಮ್ಯುನಿಸ್ಟ್ ಆಂದೋಲನದ ಒಂದು ಪ್ರಧಾನ ಶಕ್ತಿಯಾಗಿ ನೆಲೆಗೊಳ್ಳಲು ನಮಗೆ ಸಾಧ್ಯವಾಗಿತ್ತು.

ಈ ಅನುಭವ ಹಾಗೂ ಸೈದ್ಧಾಂತಿಕ ತಿಳುವಳಿಕೆಯ ಆಧಾರದ ಮೇಲೆ 14ನೇ ಮಹಾಧಿವೇಶನ ಆಗ ಅಂತರ್ರಾಷ್ಟ್ರೀಯ ರಂಗದಲ್ಲಿ ಸಂಭವಿಸಿದ್ದ ಹಿನ್ನಡೆಗಳಿಂದ ಎದ್ದು ಬಂದ ಹಲವು ಸೈದ್ಧಾಂತಿಕ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಒಂದು ದಸ್ತಾವೇಜನ್ನು ತಯಾರಿಸಿತು. ಈ ಬಗ್ಗೆ ಇನ್ನಷ್ಟು ಅಧ್ಯಯನ ನಡೆಸಬೇಕು ಎಂಬ ಕೆಲಸವನ್ನು ಕೇಂದ್ರ ಸಮಿತಿಗೆ ವಹಿಸಿದ್ದರೂ ಆ ದಸ್ತಾವೇಜು ಪಕ್ಷವನ್ನು ಏಕೀಕರಿಸಲು ನೆರವಾಯಿತು. ಇದರಿಂದಾಗಿಯೇ ಈ ಅವಧಿಯಲ್ಲಿ ನಮ್ಮ ಯಾವ ಸದಸ್ಯರೂ ಪಕ್ಷ ತ್ಯಜಿಸಲಿಲ್ಲ, ಬದಲಾಗಿ ಈ ಅವಧಿಯಲ್ಲಿ ನಮ್ಮ ಸದಸ್ಯತ್ವ ಹೆಚ್ಚಿತು. ಇದರರ್ಥ ನಮ್ಮ ಸೈದ್ಧಾಂತಿಕ ಕೆಲಸ ಜಗತ್ತಿನಲ್ಲಿ ಹಾಗೂ ಭಾರತದಲ್ಲಿ ಬೆಳೆದು ಬರುತ್ತಿರುವ ಸನ್ನಿವೇಶ ಎದುರಿಸಲು ಸಾಕಷ್ಟಾಗಿದೆ ಎಂದರ್ಥವಲ್ಲ, ಇಲ್ಲಿ ಈ ಸಂದರ್ಭದಲ್ಲಿ 14ನೇ ಮಹಾಧಿವೇಶನ ನೀಡಿರುವ ಕೊಡುಗೆಯನ್ನಷ್ಟೆ ಒತ್ತಿ ಹೇಳುತ್ತಿದ್ದೇವೆ. ಈ ಕೊಡುಗೆ ಅಪಾರ.

ಪ್ರತಿಷ್ಠೆ ಹೆಚ್ಚಿದೆ

ಮೊದಲೇ ಹೇಳಿದಂತೆ ಆಂತರಿಕವಾಗಿ ರಾಜಕೀಯ ಅಸ್ಥಿರತೆಯ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಿತ್ತು. ಅಮೇರಿಕನ್ ಸಾಮ್ರಾಜ್ಯಶಾಹಿ ತನ್ನ ಸಂಸ್ಥೆಗಳಾದ ಐ.ಎಂ.ಎಫ್.-ವಿಶ್ವ ಬ್ಯಾಂಕುಗಳ ಮೂಲಕ ಮಧ್ಯಪ್ರವೇಶಿಸಲು ಪ್ರಯತ್ನಿಸುತ್ತಿತ್ತು. ಈ ಅವಧಿಯಲ್ಲಿ ಬಂದ ಎಲ್ಲಾ ಸರಕಾರಗಳೂ ಅದರ ಒತ್ತಡಕ್ಕೆ ಮಣಿದವು. ನಮ್ಮ ಕೇಂದ್ರ ಸರ್ಕಾರ ವಿಶ್ವಬ್ಯಾಂಕ್ ಕಾರ್ಯತಂತ್ರವನ್ನು ಪೂರ್ಣವಾಗಿ ಒಪ್ಪಿಕೊಂಡೇ ಆರಂಭಿಸಿತು.


ಆದರೆ ಕಳೆದ ಅವಧಿಯ ಮುಖ್ಯ ಲಕ್ಷಣವೆಂದರೆ ಕಾಂಗ್ರೆಸ್‌ನ ವಿರುದ್ಧ ಹೆಚ್ಚುತ್ತಿರುವ ಅತೃಪ್ತಿ -ಅದರ ಆರ್ಥಿಕ ನೀತಿಗಳಿಂದಾಗಿ ಹಾಗೂ ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುವ ಅದರ ನಿಲುವಿನಿಂದಾಗಿ.

ಅಖಿಲ ಭಾರತ ಮಟ್ಟದಲ್ಲಿ ಒಂದು ಸಮರ್ಥ ಪರ್ಯಾಯವಿರಲಿಲ್ಲವಾದ್ದರಿಂದ ಹಾಗೂ ಎಡ-ಪ್ರಜಾಪ್ರಭುತ್ವ ಶಕ್ತಿಗಳ ದುರ್ಬಲತೆಯಿಂದಾಗಿ ಬಿಜೆಪಿ ಈ ಅಸಂತೃಪ್ತಿಯ ಲಾಭ ಪಡೆದು ಪ್ರಧಾನ ವಿರೋಧ ಪಕ್ಷವಾಗಿ ಮೂಡಿಬಂತು, ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಪ್ರಚಾರವನ್ನು ತೀವ್ರಗೊಳಿಸಿತು. ಬಿಜೆಪಿಯನ್ನು ಏಕಾಂಗಿಯಾಗಿಸಲು ನಾವು ಪ್ರಯತ್ನ ನಡೆಸಿದರೂ, ಇಡೀ ದೇಶ ಪ್ರಧಾನಿಗಳ ಬೆಂಬಲಕ್ಕೆ ನಿಂತರೂ ಅವರು ಮಸೀದಿಯನ್ನು ಧ್ವಂ[...] ಮಾಡಲು ಬಿಟ್ಟರು. ಪರಿಣಾಮವಾಗಿ ದೇಶದ[...] ವ್ಯಾಪಕ ಕೋಮು ಗಲಭೆಗಳು ನಡೆದು[...] ರಾಜಕೀಯ ಕೋಮುಗ್ರಸ್ತಗೊಂಡಿತು.

ದುರದೃಷ್ಟವಶಾತ್ ಈ ಸವಾಲನ್ನು ಎದು[...] ಸಲು ಎಡ, ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿ[...] ಐಕ್ಯತೆ ಅತೀ ಅಗತ್ಯವಾಗಿದ್ದಾಗಲೇ ರಾಷ್ಟ್ರೀ[...] ರಂಗ/ಜನತಾದಳ ಒಂದು ಸುಸಂಗತ ನೀತಿ[...] ಲ್ಲದ ಕಾರಣ ವಿಘಟನೆಗೊಳ್ಳಲಾರಂಭಿಸಿತು. [...] ನಮ್ಮ ಪಕ್ಷ ಜನ-ವಿರೋಧಿ ಆರ್ಥಿಕ ನೀತಿ[...] ಹಾಗೂ ರಾಷ್ಟ್ರೀಯ ಐಕ್ಯತೆಯ ಜನ ದ[...] ಇವೆರಡಕ್ಕಾಗಿಯೂ ಇವುಗಳನ್ನು ಸತ[...] ಅಣಿನೆರೆಸುವ ಕೆಲಸ ಮಾಡಬೇಕಾಯಿತು. ಪ್ರಶ್ನೆಗಳ ಮೇಲೆ ಸಾಮೂಹಿಕ ಆಂದೋಲ[...]

ಈ ಸಂಚಿಕೆ ಓದುಗರ ಕೈಸೇರುವ ವೇಳೆಗೆ ಪಂಜಾಬಿನ ಚಂಡೀಗಢದಲ್ಲಿ ಸಿಪಿಐ(ಎಂ)ನ 15ನೇ ಮಹಾಧಿವೇಶನ ಕಲಾಪಗಳು ಆರಂಭವಾಗಿರುತ್ತವೆ.

ಮಾರ್ಕ್ಸ್‌ವಾದ-ಲೆನಿನ್‌ವಾದದ ಸಮಂಜತೆಯನ್ನು, ಸಾರ್ಥಕತೆಯನ್ನು ಮತ್ತೊಮ್ಮೆ ಪ್ರದರ್ಶಿಸುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಈ ವಿಜ್ಞಾನದ ಆಧಾರದಲ್ಲಿ ತನ್ನ ನೀತಿಗಳನ್ನು ತನ್ನ ಅನುಭವಗಳ ಬೆಳಕಲ್ಲಿ ಪರೀಕ್ಷಿಸುತ್ತಿರುವ, ನಿಲುವಿನ ಸತ್ಯಾಸತ್ಯತೆಯನ್ನು ಪರೀಕ್ಷಿಸುತ್ತಿರುವ ಪಕ್ಷ ಇದೋ ಇಲ್ಲಿದೆ ಎಂದು ಸಾದರ ಪಡಿಸುತ್ತಿದೆ ಸಿಪಿಐ(ಎಂ) ಈ ಬಗ್ಗೆ ಎರಡು ವಿಶೇಷ ಲೇಖನಗಳು 14ನೇ ಮಹಾಧಿವೇಶನ ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿದ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಹಾಗೂ ಅದೇ ಅಧಿವೇಶನದಲ್ಲಿ ಮೊದಲ ಬಾರಿಗೆ ಪೊಲಿಟ್‌ಬ್ಯೂರೋಗೆ ಆರಿಸಲ್ಪಟ್ಟ ಕಾಂ. ಸೀತಾರಾಂ ಯೆಚೂರಿಯವರಿಂದ.



ಆಧುನಿಕ ಭಾರತವನ್ನು ಭವ್ಯ ಭವಿಷ್ಯದೆಡೆಗೆ ಮುಂದೊಯ್ಯಲು

-ಸೀತಾರಾಂ ಯೆಚೂ[...]

ಸಿಪಿಐ(ಎಂ) ಮಹಾಧಿವೇಶನ ಎಂಬುದು ಪಕ್ಷದ ಅತ್ಯುನ್ನತ ನಿರ್ಣಯ ಕೈಗೊಳ್ಳುವ ವ್ಯವಸ್ಥೆ. ಮೂರು ವರ್ಷಗಳಿಗೊಮ್ಮೆ ಇದು ಸಭೆ ಸೇರಿ ಮಹತ್ವದ ರಾಜಕೀಯ, ಸಂಘಟನಾತ್ಮಕ ಪ್ರಶ್ನೆಗಳ ಮೇಲೆ ನಿರ್ಣಯ ಕೈಗೊಳ್ಳುತ್ತದೆ. ತನ್ನ ಗುರಿಯ ಸಾಧನೆಗೆ ಅಗತ್ಯ ತಂತ್ರಗಳನ್ನು ಅಂಗೀಕರಿಸುತ್ತದೆ. ಈಗಿನ ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸಂದರ್ಭದಲ್ಲಿ ಈ 15ನೇ ಮಹಾಧಿವೇಶನ ಬಹಳ ಮಹತ್ವ ಪಡೆದಿದೆ. ಏಕೆಂದರೆ ಇದರ ನಿರ್ಣಯಗಳು ಪಕ್ಷದ ಬೆಳವಣಿಗೆಯ ಮೇಲೆ ಮಾತ್ರವಲ್ಲ, ಭಾರತೀಯ ಜನತೆ ಹಾಗೂ ದೇಶದ ಅಭಿವೃದ್ಧಿಯ ಮೇಲೂ ತಕ್ಷಣದ ಪ್ರಭಾವ ಬೀರುವಂತದ್ದು.

ಇಷ್ಟೇ ಅಲ್ಲ, ಸಿಪಿಐ(ಎಂ)ನ ಕಾರ್ಯಕ್ರಮ ಅಂಗೀಕರಿಸಿದ 30ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಡೆಯುತ್ತಿರುವ ಮಹಾಧಿವೇಶನ ಇದು. ಆದ್ದರಿಂದ ಸಿಪಿಐ(ಎಂ) ತಳೆದ ನಿಲುವುಗಳು ಹಾಗೂ ಮೂರು ದಶಕಗಳ ಅನುಭವಗಳ ಬೆಳಕಿನಲ್ಲಿ ಅದರ ಸಾರ್ಥಕತೆಯ ಪರಿಶೀಲನೆಗೆ ಇದು ಸೂಕ್ತ ಸಮಯ.

ಇದು ಕನಿಷ್ಠ ಎರಡು ಕಾರಣಗಳಿಂದ ಮಹತ್ವದ್ದು. ಮೊದಲನೆಯದಾಗಿ, ಸಿಪಿಐ(ಎಂ) ಸ್ಥಾಪನೆಯಾದದ್ದು ಮಾರ್ಕ್ಸ್‌ವಾದ-ಲೆನಿನ್‌ವಾದದ ಕ್ರಾಂತಿಕಾರಿ ತತ್ವಗಳಿಂದ ದಾರಿತಪ್ಪುತ್ತಿದ್ದುದರ ವಿರುದ್ಧ ನಡೆದ ತೀವ್ರ ಹೋರಾಟದಲ್ಲಿ ಈ ಸೈದ್ಧಾಂತಿಕ ಹೋರಾಟದಲ್ಲಿ, ಭಾರತದ ಕಮ್ಯುನಿಸ್ಟರು ಮಾತ್ರವಲ್ಲ, ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಎರಡು ಅತೀ ದೊಡ್ಡ ಪಕ್ಷಗಳೂ ಭಾಗವಹಿಸಿದ್ದವು. -ಸೋವಿಯೆತ್ ಪಕ್ಷ ಸಿಪಿಐನ ಪರಿಷ್ಕರಣವಾದಿ ತಪ್ಪುಗಳ ಪರವಾಗಿ ಹಾಗೂ ಚೀಣಾ ಪಕ್ಷ ಸಿಪಿಐ(ಎಂ-ಎಲ್)ನ ಎಡ ದುಸ್ಸಾಹಸವಾದಿ ತಪ್ಪುಗಳ ಪರವಾಗಿ. ಅತ್ಯಂತ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಸಿಪಿಐ(ಎಂ) ಭಾರತದ ವಾಸ್ತವತೆಗೆ ತನ್ನ ಈ ವಿಜ್ಞಾನದ ತಿಳುವಳಿಕೆಯನ್ನು ಅತ್ಯಂತ ಮುತುವರ್ಜಿಯಿಂದ ಅನ್ವಯಿಸಿದುದರ ಫಲ ಈಗ ಎಲ್ಲರ ಮುಂದೆ ಇದೆ. ಇದರಲ್ಲೀಗ ಯಾರು ತಪ್ಪು, ಯಾರು ಸರಿ ಎಂದು ಸಾಬೀತಾಗಿದೆ ಎಂದು ಸ್ಥಾಪಿಸುವ ಅಗತ್ಯವಿಲ್ಲದಿದ್ದರೂ ಇಂತಹ ತಪ್ಪುಗಳು ಮತ್ತೆ ಸಂಭವಿಸಿ ಶೋಷಣೆಯಿಂದ ಭಾರತೀಯ ಜನತೆಯ ಮುಕ್ತಿ ಮತ್ತೊಮ್ಮೆ ವಿಳಂಬವಾಗದಿರಲೆಂದಾದರೂ ಇವೆಲ್ಲವನ್ನು ನೆನಪಿಸಿಕೊಳ್ಳಬೇಕಾಗುತ್ತದೆ.

ಕಳೆದ ಮೂರು ದಶಕಗಳ ಅನುಭವಗಳ ಆಧಾರದಲ್ಲಿ ಸಿಪಿಐ(ಎಂ)ನ ನಿಲುವುಗಳ ಮೌಲ್ಯಮಾಪನ ಇನ್ನೊಂದು ಕಾರಣ ದಿಂದಲೂ ಅಗತ್ಯ. ಏಕೆಂದರೆ ಜನಗಳ ಹೋರಾಟಗಳನ್ನು ಮುನ್ನಡೆಸುವಲ್ಲಿ ಹಾಗೂ ಈಗಾಗಲೇ ಸಾಧಿಸಿರುವುದನ್ನು ಉಳಿಸಿಕೊಳ್ಳುವಲ್ಲಿ ಈ ನಿಲುವುಗಳು ಈಗಲೂ ಅಷ್ಟೇ ಸಮಂಜಸವಾಗಿವೆ.

ನಾಲ್ಕು ಸಮಸ್ಯೆಗಳು

ನಮ್ಮ ದೇಶ ಹಾಗೂ ಜನತೆ ಈಗ ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ನಾಲ್ಕು ಎದ್ದು ಕಾಣುತ್ತಿವೆ.

1. ನಮ್ಮ ಆರ್ಥಿಕ ಸಾರ್ವಭೌಮತೆಯನ್ನು ಸ್ವಾವಲಂಬನೆಯನ್ನು ಒತ್ತೆಯಿಟ್ಟು ಜನಸಮೂಹಗಳ ದಾರಿದ್ರ್ಯಕ್ಕೆ ಕಾರಣವಾಗುತ್ತಿರುವ ಹೊಸ ಆರ್ಥಿಕ ನೀತಿಗಳು

2. ಭಾರತೀಯ ಜನತೆಯ ಇದುವರೆಗಿನ ಪ್ರಜಾಪ್ರಭುತ್ವ ಸಾಧನೆಗಳಿಗೆ ನಕಾರದ ಬೆದರಿಕೆಯೊಡ್ಡಿರುವ ಫ್ಯಾಸಿಸ್ಟ್ ಮಾದರಿಯ ಕೋಮುವಾದಿ ಹಲ್ಲೆ.

3. ಹೆಚ್ಚುತ್ತಿರುವ ಜಾತಿ ಪ್ರಜ್ಞೆಯ ನಕಾರಾತ್ಮಕ, ಹೇಗೊ ಸಾಮಾಜಿಕ ವಿಭಜನೆಯನ್ನು ಹೆಚ್ಚಿಸುವ ಅಂಶಗಳು.

4. ವಿವಿಧ ಮಟ್ಟಗಳಲ್ಲಿ ದೇಶದ ಐಕ್ಯತೆ, ಸಮಗ್ರತೆಗೆ ಬೆದರಿಕೆಯೊಡ್ಡುತ್ತಿರುವ ಪ್ರತ್ಯೇಕತಾವಾದಿ ಹಾಗೂ ಪ್ರಾದೇಶಿಕ ಆಂದೋಲನಗಳು.

ಈ ಪ್ರತಿಯೊಂದರ ಬಗ್ಗೆ ಸ್ಪಷ್ಟ ಚಿಂತನೆ ಮಾತ್ರವಲ್ಲ, ಅವುಗಳನ್ನು ಪರಿಹರಿಸಲು ಒಂದು ದೃಢಚಿತ್ತದ ಅವಶ್ಯಕತೆಯೂ ಇದೆ. ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದಷ್ಟೇ ಅಲ್ಲ, ಅದನ್ನು ಬದಲಿಸುವ ಅಗತ್ಯವೂ ಇದೆ.

ಈ ಸಮಸ್ಯೆಗಳ ಬಗ್ಗೆ ಸಿಪಿಐ(ಎಂ)ನ ನಿಲುವುಗಳನ್ನು ಪರಿಶೀಲಿಸುವ ಮೊದಲು ಸಂಕ್ಷಿಪ್ತವಾಗಿ ಭಾರತೀಯ ಕಮ್ಯುನಿಸ್ಟ್ ಆಂದೋಲನದಲ್ಲಿ ಉಂಟಾದ ಒಂದು ಮೂಲಭೂತ ಸೈದ್ಧಾಂತಿಕ ವಿವಾದದ ಬಗ್ಗೆ ನೆನಪಿಸಿಕೊಳ್ಳುವುದೂ ಅಗತ್ಯ. ಭಾರತದ ಆಳುವ ವರ್ಗ ದೊಡ್ಡ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ-ಭೂಮಾಲಕ ವರ್ಗಗಳ ಮೈತ್ರಿಕೂಟ ಎಂಬ ವಿಶ್ಲೇಷಣೆ ಸಿಪಿಐ(ಎಂ)ನ ವಿಶಿಷ್ಟ ಲಕ್ಷಣ. ಅಷ್ಟೇ ಅಲ್ಲ- ಭಾರತೀಯ ಬಂಡವಾಳಶಾಹಿ ವರ್ಗಕ್ಕೆ ಸಾಮ್ರಾಜ್ಯಶಾಹಿ ಕುರಿತಂತೆ ಒಂದು ದ್ವಿಮುಖ ಸ್ವಭಾವವಿದೆ; ಒಂದೆಡೆ ತನ್ನ ವರ್ಗ ಹಿತಾಸಕ್ತಿಗಳ ರಕ್ಷಣೆಗೆ ತನ್ನ ಮಾರುಕಟ್ಟೆಗಳನ್ನು, ಸಂಪನ್ಮೂಲಗಳನ್ನು ಕಾಪಾಡಿಕೊಂಡು ತನ್ನ ಸ್ವಾತಂತ್ರ್ಯವನ್ನು ಅದು ರಕ್ಷಿಸಿಕೊಳ್ಳಬಯಸುತ್ತದೆ; ಇನ್ನೊಂದೆಡೆ ಅದು ಸಾಮ್ರಾಜ್ಯಶಾಹಿಯೊಂದಿಗೆ ಬಂಡವಾಳಶಾಹಿಯನ್ನು ಇಲ್ಲಿ ಬೆಳೆಸಲು ಶಾಮೀಲಾಗಲೂ ಬಯಸುತ್ತದೆ ಎಂದು ಸಿಪಿಐ(ಎಂ) ವಿಶ್ಲೇಷಿಸಿತು.

ಸಿಪಿಐ ಪ್ರಕಾರ "ರಾಷ್ಟ್ರೀಯ ಬಂಡವಾಳಶಾಹಿ" ಮಾತ್ರ ಏಕೈಕ ಆಳುವ ವರ್ಗವಾಗಿದ್ದರೆ, ಇನ್ನೊಂದು ತುದಿಯಲ್ಲಿ ಸಿಪಿಐ(ಎಂ-ಎಲ್) ಪ್ರಕಾರ ನಮ್ಮ ಆಳ[...] ವರ್ಗಗಳಿಗೆ ಸ್ವತಂತ್ರ ಹಿತಾಸಕ್ತಿಗಳಿಲ್ಲ, ಅ[...] ಸಾಮ್ರಾಜ್ಯಶಾಹಿಯ ಬಾಲಗೊಂಚೆಗಳು, ಪ[...] ಟರಷ್ಟೆ.

ಹೊಸ ಆರ್ಥಿಕ ನೀತಿ ಏಕೆ[...] ಬಂತು?

ಮೇಲೆ ಹೇಳಿದ ಪ್ರಶ್ನೆಗಳನ್ನು ಎದು[...] ವಲ್ಲಿ ಈ ತಿಳುವಳಿಕೆಗಳು ಪ್ರಭಾವ ಬ[...] ತ್ತವೆ. ಹೊಸ ಆರ್ಥಿಕ ನೀತಿ ನಮ್ಮ ಆ[...] ಸೌರ್ವಭೌಮತೆಯನ್ನು ಒತ್ತೆಯಿಟ್ಟಿದೆ [...] ಬಗ್ಗೆ ಬಹಳ ಜನ ಒಪ್ಪುತ್ತಾರೆ. [...] ಇಂತಹ ನೀತಿಗಳು ಈಗಲೇ ಏಕೆ ಬಂ[...] ಎಂದೂ ಪರಿಶೀಲಿಸಬೇಕಾಗುತ್ತದೆ. ಸಿ[...] ವಿಶ್ಲೇಷಣೆಯನ್ನು ಒಪ್ಪುವುದಾದರೆ 'ರಾಷ್ಟ್ರೀ[...]

ಜಂಟಿ ಕಾರ್ಯಾಚರಣೆಗಳ ಮೂಲಕ
ತೆಯನ್ನು ಬಲಪಡಿಸಲು ಪಕ್ಷ ಪ್ರಯ
ವರಲ್ಲಿ ಸಾಧ್ಯವಾದಷ್ಟು ಜಾತ್ಯಾತೀತ
ಒಳಗೊಳ್ಳಲು ಪ್ರಯತ್ನಿಸಿದೆವು.
ಂದಾಗಿಯೇ ಪರಿಸ್ಥಿತಿಯನ್ನು ಬದಲಿ
ಮರ್ಥ್ಯವನ್ನು ಇನ್ನೂಪಡೆಯದಿದ್ದರೂ
) ಹಾಗೂ ಎಡಪಕ್ಷಗಳಿಗೆ ತಕ್ಕ
ಭಾವ ಬೀರುವುದು ಸಾಧ್ಯವಾಯಿತು.
ಎಡ ಒಲವಿನ ಅಚೆಗಿದ್ದ ಜನರೂ
ು ಒಂದು ನೀತಿಬದ್ಧ ಶಕ್ತಿ ಎಂದು
ದ ನೋಡುವಂತಾಯಿತು.
ಹಾಧಿವೇಶನದ ನಂತರದ ಮೂರು
ತ್ತ ಹಿಂದುರಿಗಿ ನೋಡಿದಾಗ ನಮ್ಮ
ು ಸರಿಯೆಂದು ಸಾಬೀತಾಗುವುದು
. ರಾಷ್ಟ್ರೀಯ ರಾಜಕಾರಣದಲ್ಲಿ ಹಾಗೂ
ಯ ಕಮ್ಯುನಿಸ್ಟ್ ಆಂದೋಲನದಲ್ಲಿ
ತಿಷ್ಠೆ ಹೆಚ್ಚಿದೆ. 15ನೇ ಮಹಾಧಿವೇಶ
ಾಗವಹಿಸಲು 22 ಪಕ್ಷಗಳು ತಮ್ಮ
ಳನ್ನು ಕಳಿಸುತ್ತಿರುವುದು ಹಾಗೂ ಇನ್ನೂ
ಪಕ್ಷಗಳಿಂದ ಸಂದೇಶಗಳು ಬರುತ್ತಿ
ಇದಕ್ಕೊಂದು ಸಂಕೇತ.

ಅನುಭವಗಳ ಪರೀಕ್ಷಣೆ

ಮೂರು ವರ್ಷಗಳ ನಂತರ ಮತ್ತೆ
ುತ್ತಿದ್ದೇವೆ. ಹಿಂದಿನ ಅನುಭವ ಹಾಗೂ
, ಅಂತರ್ರಾಷ್ಟ್ರೀಯ ಸನ್ನಿವೇಶದ ಆಧಾ
ರೆ ಒಂದು ಕರಡು ರಾಜಕೀಯ ಠರಾವು

ತಯಾರಿಸಲ್ಪಟ್ಟಿದ್ದು ಅದರ ಮೇಲೆ ಪಕ್ಷದಲ್ಲಿ ಪ್ರಾಥಮಿಕ ಘಟಕಗಳಿಂದ ಹಿಡಿದು ರಾಜ್ಯ ಸಮಿತಿಗಳವರೆಗೆ ಚರ್ಚೆ ನಡೆಯುತ್ತಿದೆ. ಇದೀಗ ನಮ್ಮ ಪಕ್ಷ ಮಾರ್ಕ್ಸ್‌ವಾದ-ಲೆನಿನ್‌ವಾದ ವಿಜ್ಞಾನದ ಆಧಾರದ ಮೇಲೆ ತನ್ನ ನೀತಿಗಳನ್ನು ತನ್ನ ಅನುಭವಗಳ ಆಧಾರದ ಮೇಲೆ ಪರೀಕ್ಷಿಸುವ ಪಕ್ಷ. ಏಕೆಂದರೆ ಯಾವುದೇ ನಿಲುವಿನ ಸತ್ಯಾಸತ್ಯತೆ ಸಿದ್ಧವಾಗುವುದು ಅದರ ಆಚರಣೆಯಲ್ಲಿ.

ಪಕ್ಷದ ಎಲ್ಲಾ ಘಟಕಗಳ ಸಮ್ಮೇಳನಗಳು ನಡೆದಿವೆ. ಇವುಗಳಲ್ಲಿ ಅಭಿಪ್ರಾಯಗಳ ಮುಕ್ತ ವಿನಿಮಯ ನಡೆದಿದೆ. ವಿವಿಧ ಹಂತಗಳಲ್ಲಿ ಪಕ್ಷದ ನಿಲುವನ್ನು ಅನುಷ್ಠಾನಕ್ಕೆ ತರುವಲ್ಲಿನ ಕುಂದುಕೊರತೆಗಳ ಬಗ್ಗೆ ವಿಮರ್ಶೆಗಳು, ಸ್ವಯಂ ವಿಮರ್ಶೆಗಳು ನಡೆದಿವೆ. ಈ ಪ್ರಕ್ರಿಯೆ ಪಕ್ಷದ ಮುಖಂಡತ್ವಕ್ಕೆ ಬಹಳಷ್ಟು ಶಿಕ್ಷಣ ನೀಡುವಂತದ್ದು. ಈ ಅನುಭವಗಳ ಆಧಾರದಲ್ಲಿ ಕರಡು ರಾಜಕೀಯ ಠರಾವಿನಲ್ಲಿ ಏನಾದರೂ ಸರಿಪಡಿಸುವಂತದಿದ್ದರೆ ಮಹಾಧಿವೇಶನ ಮಾಡುತ್ತದೆ.

ರಾಜಕೀಯ ಸನ್ನಿವೇಶದಲ್ಲಿ ಹಿಂದಿನ ಪ್ರವೃತ್ತಿಗಳೊಂದಿಗೇ ಹೊಸ ಅಂಶಗಳೂ ಸೇರುತ್ತಿವೆ. ಆಳುವ ಪಕ್ಷ ಐ.ಎಂ.ಎಫ್.-ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳನ್ನು ಅತ್ಯಂತ ಭರದಿಂದ ಅನುಸರಿಸುತ್ತಿದ್ದು ಇದರ ದುಷ್ಪರಿಣಾಮಗಳು ಈ ಮೊದಲು ಈ ನೀತಿಗಳನ್ನು ಬೆಂಬಲಿಸುತ್ತಿದ್ದವರ ಅರಿವಿಗೂ ಬರಲಾರಂಭಿಸಿದೆ.

ಪುಟ 7 ನೋಡಿ



ಳಶಾಹಿ ವರ್ಗ ಇದ್ದಕ್ಕಿದ್ದಂತೆ ತನ್ನ
ಬದಲಿಸಿ ಸಾಮ್ರಾಜ್ಯಶಾಹಿಯೊಂ
ೀಲಾಗುವ ವರ್ಗವಾಗಿ ಬಿಟ್ಟಿತು.
ಯೆತ್ ಒಕ್ಕೂಟ ಇಲ್ಲವಾದ್ದರಿಂದ
ಈ ಆಳುವ ವರ್ಗಕ್ಕೆ ಬೇರೆ
ರಲಿಲ್ಲ ಎಂಬ ತೀರ್ಮಾನಕ್ಕೆ ಬರ
ತ್ತದೆ. ಆದರೆ ಇಂತಹ ತೀರ್ಮಾನ
ದ ನಂತರ ದೇಶದಲ್ಲಾದ ಆಂತರಿಕ
ಗಳನ್ನು ಪೂರ್ಣವಾಗಿ ವಿವರಿಸು
ಇನ್ನು ಸಿಪಿಐ(ಎಂ.ಎಲ್.) ನಿಲು
ಿದರಂತೂ ಕಳೆದ ನಾಲ್ಕು ದಶಕ
ಮ್ರಾಜ್ಯಶಾಹಿ ಮತ್ತು ಭಾರತೀಯ
ವರ್ಗಗಳ ನಡುವಿನ ತಿಕ್ಕಾಟಗಳಲ್ಲಿ
ನ್ನೂ ವಿವರಿಸುವುದು ಸಾಧ್ಯವಾಗು

ಎರಡು ಪಕ್ಷಗಳ ಸೈದ್ಧಾಂತಿಕ
ಿಂದಾಗಿ ಒಂದೆಡೆ ಕಾಂಗ್ರೆಸ್ಸಿನೊಂ
ಲಾಗುವ, ಇನ್ನೊಂದೆಡೆ ನಕ್ಸಲೀ
ಸಸ್ತಾ ಯುದ್ಧ" ನಡೆಸುವ ತಪ್ಪು
ರಿ ಮಾಡಿಕೊಟ್ಟಿತೆಂಬುದೂ
ಿರಪರಿಚಿತ ಸಂಗತಿ. ಈ ಹಿನ್ನೆಲೆ
ಿಐ(ಎಂ)ನ ತಿಳುವಳಿಕೆ ಹೇಗೆ
ಸಮಂಜಸವಾಗಿದೆ ಎಂಬುದನ್ನು
ಬೇಕಾಗಿದೆ.

ನಮ್ಮ ದೇಶದ ಬಂಡವಾಳಶಾಹಿಗಳು ಭೂಮಾಲಕರೊಂದಿಗೆ ರಾಜಿ ಮಾಡಿಕೊಂಡಿದ್ದರಿಂದಲೇ ಅದಕ್ಕೆ ಕರ್ಷಕ ಕ್ರಾಂತಿಯ ಕರ್ತವ್ಯಗಳನ್ನು ನೆರವೇರಿಸಲಾಗಲಿಲ್ಲ; ತನ್ನದೇ ಭೂಸುಧಾರಣಾ ನೀತಿಗಳನ್ನು ಅನುಷ್ಠಾನಕ್ಕೆ ತರಲಾಗಲಿಲ್ಲ. ಇದರ ಪರಿಣಾಮವಾಗಿ ಬಹುಪಾಲು ಜನ ಊಳಿಗಮಾನ್ಯ ಸುಲಿಗೆಯ ನೊಗದಲ್ಲೇ ಉಳಿದು ಆಂತರಿಕ ಮಾರುಕಟ್ಟೆ ವಿಸ್ತರಿಸದಂತಾಯಿತು. ಬಹುಪಾಲು ಜನಗಳ ಬಡತನದಿಂದಾಗಿ ಆಂತರಿಕ ಮಾರುಕಟ್ಟೆ ವಿಸ್ತರಿಸದಿದ್ದುದರಿಂದಾಗಿ ದೇಶದಲ್ಲಿ ಬಂಡವಾಳಶಾಹಿನ್ನು ಕಟ್ಟುವಲ್ಲಿ ತೊಡಗಿದ್ದ ಬಂಡವಾಳಶಾಹಿಗಳು ಒಂದೋ ದೇಶದ ಶ್ರೀಮಂತ ವಿಭಾಗಗಳು ಒದಗಿಸುವ ಸೀಮಿತ ಮಾರುಕಟ್ಟೆಯನ್ನೇ ಅವಲಂಬಿಸಬೇಕು ಅಥವಾ ರಫ್ತು ಮಾರುಕಟ್ಟೆಯನ್ನು ಅವಲಂಬಿಸಬೇಕು. ಇವೆರಡಕ್ಕೂ ಆಧುನಿಕ ತಂತ್ರಜ್ಞಾನ ಹಾಗೂ ಭಾರೀ ಪ್ರಮಾಣದ ವಿದೇಶೀ ವಿನಿಮಯ ಬೇಕು. ಆದ್ದರಿಂದಲೇ ನಮ್ಮ ಆಳುವ ಮಂದಿ ಐ.ಎಂ.ಎಫ್. ಸಾಲದತ್ತ ಹೊರಳಬೇಕಾಯಿತು. ಅವರ ಶರತ್ತುಗಳಿಗೆ ಮಣಿಯಬೇಕಾಯಿತು. ಈ ಪ್ರಕ್ರಿಯೆ 1980ರ ದಶಕದಲ್ಲೇ ಸೋವಿಯೆತ್ ಒಕ್ಕೂಟ ಕುಸಿಯುವ

ಪುಟ 8 ನೋಡಿ

ಬೇಕೆ ಎರಡು ಲಕ್ಷ ಉದ್ಯೋಗಗಳು?

ರಾವಣನ ಹೊಟ್ಟೆಗೆ ಕಾಸಿನ ಮಂಡಿ ಎಂಬಂತೆ ಉದಾರೀಕರಣದ ಈ ಮಹಾ ಸಾಧನೆ ನೋಡಿ. ಉದಾರೀಕರಣ ಎರಡು ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುತ್ತಿದೆಯಂತೆ. ಕೋಟ್ಯಾಂತರ ಉದ್ಯೋಗಗಳು ಇಲ್ಲವಾಗುವುದರ ಬಗ್ಗೆ ಉದಾರೀಕರಣವಾದಿಗಳು ಮಾತನಾಡುವುದಿಲ್ಲ. ಮೂವತ್ತೊಂದು ಕೋಟಿಗೂ ಮಿಕ್ಕಿ ಜನ ನಿರುದ್ಯೋಗಿಗಳಾಗಿರುವ ನಮ್ಮ ಈ ದೊಡ್ಡ ದೇಶದಲ್ಲಿ ಎರಡು ಲಕ್ಷ ದ್ಯೋಗಗಳದ್ದು ದೊಡ್ಡ ಸುದ್ದಿ ಯಾಕೆ?

ಈ ಎರಡು ಲಕ್ಷ ಉದ್ಯೋಗಗಳು ಎಂತಹವು. ಇವು ಕಂಪನಿಗಳಲ್ಲಿನ ಕಾರ್ಯನಿರ್ವಾಹಕ ಸಿಬ್ಬಂದಿಗಳ ಉದ್ಯೋಗ ಇವರ ಕೆಲಸವೇನು? ಉದಾರೀಕರಣದ ಈ ಸಂದರ್ಭದಲ್ಲಿ ಕಂಪನಿಗಳಿಗೆ ದೊರೆವ ಎಲ್ಲ ತರಹದ ಅವಕಾಶಗಳನ್ನು ಬಳಸಿಕೊಂಡು ಲಾಭ ತಂದುಕೊಡುವ ಕೆಲಸವನ್ನು ಮಾಡಬೇಕು ದೇಶದ ಕಾನೂನುಗಳನ್ನು ಪಾಲಿಸಬೇಕೆಂದೇನಿಲ್ಲ, ಆದರೆ ಅವುಗಳ ಬಲೆಯೊಳಗೆ ಬೀಳಬಾರದು. ನೈತಿಕತೆ ಇವೆಲ್ಲ ನೋಡಬೇಕಾದ ವಿಷಯಗಳೇ ಅಲ್ಲ.

ಉದಾರೀಕರಣದ ನೈತಿಕ ತಳಹದಿಯನ್ನೇ ಎತ್ತಿ ತೋರಿಸುತ್ತದೆ ಇದು.

ದೇಶದ ಕೋಟಿಗಟ್ಟಲೇ ಜನ ನಿರುದ್ಯೋಗ ಮತ್ತು ಬಡತನದಿಂದ ನರಳುವಾಗ ಕೆಲವೇ ಕೆಲವರು ಅಪಾರ ಲಾಭ ಗಳಿಸುವುದೆಂದರೆ ಅದು ಈ ಕೋಟಿಗಟ್ಟಲೆ ಜನರನ್ನು ಕೆಲವೇ ಕೆಲವರು ಶೋಷಿಸುವುದೆಂದೇ ಅರ್ಥವಾಗುತ್ತದೆ. ದೇಶದ ಅಪಾರ ಜನಸಮೂಹದ ಉತ್ಪಾದನಾ ಸಾಮರ್ಥ್ಯ ವ್ಯರ್ಥವಾಗುತ್ತದೆ. ಒಟ್ಟಾರೆಯಾಗಿ ದೇಶವೇ ಆರ್ಥಿಕವಾಗಿ ಹಿನ್ನಡೆಯುತ್ತದೆ.

ನರಸಿಂಹರಾಯರ ಸರ್ಕಾರಕ್ಕೆ ಇದರ ಬಗ್ಗೆ ಕಾಳಜಿ ಇಲ್ಲ. ಆದರೆ ಉದಾರೀಕರಣ, ಐ.ಎಂ.ಎಫ್.-ವಿಶ್ವಬ್ಯಾಂಕ್‌ಗಳ ಷರತ್ತುಗಳ ಪಾಲನೆ ಅತ್ಯಂತ ಲಾಭದಾಯಕ ಎನ್ನುವ ಭಂಡತನ ಬೇರೆ. ಕೋಟಿಗಟ್ಟಲೆ ನಿರುದ್ಯೋಗ ಸೃಷ್ಟಿಸಿ ಎರಡು ಲಕ್ಷ ಉದ್ಯೋಗ ಸೃಷ್ಟಿಸಿದ್ದೇವೆಂಬ ಹೆಗ್ಗಳಿಕೆಯ ಪ್ರದರ್ಶನ?

ಇದಲ್ಲವೇ ದೇಶದ್ರೋಹ?

ಮತ್ತೇ "ಮೈದಾನಕ್ಕೆ" ಬೇಡಿಕೆ

ಉದಾರೀಕರಣದ ಆರಂಭದ ದಿನಗಳಲ್ಲಿ ಹಲವು ಉದ್ಯಮಿಗಳು ಸೇರಿಕೊಂಡು ವಿದೇಶೀ ಕಂಪನಿಗಳಿಗೆ ಗುತ್ತೇದಾರೀ ಬಂಡವಾಳಿಗರಿಗೆ ದೇಶದೊಳಕ್ಕೆ ಪ್ರವೇಶ ನೀಡುವಾಗ "ಮೈದಾನ" ಇರಬೇಕು ಎಂಬ ಬೇಡಿಕೆ ಮುಂದಿಟ್ಟಿದ್ದು ನೆನಪಿದೆ ಅಲ್ಲವೇ? ಇಲ್ಲ ಮೈದಾನವೆಂದರೆ ಸಮತಟ್ಟಾದ ಭೂಮಿ ಅಂದರೆ ಸಮಾನ ಅವಕಾಶ ಇರಬೇಕು ಎಂಬುದು ಅವರ ಇಚ್ಛೆ. ಒಂದೇ ಮಾತಿನಲ್ಲಿ ಹೇಳುವುದಾದರೆ ವಿದೇಶೀಯರಿಗೆ ವಿಶೇಷ ಸವಲತ್ತುಗಳಿರಬಾರದು ಮತ್ತು ಅವಕಾಶಗಳು ಸಮನಾಗಿರಬೇಕು ಎಂಬುದೇ ಆವಾದ. ಈ ಉದ್ಯಮಿಗಳ ಗುಂಪನ್ನು 'ಮುಂಬೈ ಕ್ಲಬ್' ಎಂದು ಕರೆಯಲಾಗುತ್ತಿತ್ತು. ನಂತರದ ದಿನಗಳಲ್ಲಿ ಉದಾರೀಕರಣದ ಹೆಚ್ಚಾದಂತೆ ಈ ಗುಂಪಿನ ಪ್ರತಿಭಟನೆ ಮೊನಚು ಕಳೆದುಕೊಂಡಿತ್ತು. ಸರ್ಕಾರ ಉದಾರೀಕರಣದ ವೇಗವನ್ನು ಕಡಿಮೆ ಮಾಡಿದ್ದೂ ಒಂದು ಕಾರಣ.

ಈಗ 1995-96ರ ಬಜೆಟ್ ಮಂಡನೆಯಾದ ಕ್ಷಣದಿಂದ ಮತ್ತೆ ಈ ಪ್ರತಿಭಟನೆ ಕೇಳಿಬರತೊಡಗಿದೆ. ಉದ್ಯಮಿ/ವ್ಯಾಪಾರಸ್ಥರ ಮಹಾಮಂಡಳಕ್ಕೆ ಪತ್ರ ಬರೆದಿರುವ ಈ ಕೆಲವು ದೇಶೀ ಉದ್ಯಮಿಗಳು ಆಮದು ಸುಂಕ ಕಡಿತಗಳ ಮೂಲಕ ವಿದೇಶೀ ಉದ್ಯಮಿಗಳಿಗೆ ಹೆಚ್ಚಿನ ಅವಕಾಶ ನೀಡಿರುವುದನ್ನು ಪ್ರತಿಭಟಿಸಿದ್ದಾರೆ. ಬಜೆಟ್ಟು ದೇಶವನ್ನೇ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮಾರಾಟ ಮಾಡುವ ಕ್ರಮ ಎಂದು ಅವರು ಹೇಳಿದ್ದಾರೆಂದರೆ ಈ ಬಜೆಟ್ಟಿನ ಬಗೆಗಿನ ಅವರ ನಿಲುವು ಅರ್ಥವಾದೀತೆ.

ಆದರೆ ಈಗ ತಕರರಾರು ತೆಗೆದಿರುವ ಉದ್ಯಮಿಗಳೆಲ್ಲ ಹಿಂದೆ ಪ್ರತಿಭಟಿಸಿದವರೇ ಅಲ್ಲ, ಬೇರೆಯವರು ದೇಶದ ಮುಖ್ಯ ಬಂಡವಾಳ ಕುಟುಂಬಗಳಾದ ಬಿರ್ಲಾ, ಮತ್ತು ಮೋದಿ ಕುಟುಂಬಗಳ ಸದಸ್ಯರು ಇದರಲ್ಲಿ ಸೇರಿದ್ದಾರೆ ಎನ್ನಲಾಗಿದೆ.

ಉದಾರೀಕರಣದ ಗಾಯಾಳುಗಳು ಹೆಚ್ಚುತ್ತಿದ್ದಾರೆ ಅಲ್ಲವೇ?

ಕಾಂಗೈಗೆ ತಾನು ಸಹೋದರನೆಂದ ಬಿಜೆಪಿ

ಯಾವ ವಿಷಯದಲ್ಲಿ ಎಂದು ಕೇಳಿದಿರಾ? ಉದಾರೀಕರಣದ ವಿಷಯದಲ್ಲಿ, ಹೊಸ ಆರ್ಥಿಕ ನೀತಿಯ ವಿಷಯದಲ್ಲಿ ಕಾಂಗೈಗೂ ಬಿಜೆಪಿಗೂ ಹಲವು ಸಾಮ್ಯಗಳಿವೆಯೆಂಬುದು ಆಗಾಗ ಕಾಣಿಸುತ್ತ ಬಂದಿರುವ ಸತ್ಯ. ಬಿಜೆಪಿ ತಾನು ಕಾಂಗ್ರೆಸ್ಸಿಗಿಂತ ಭಿನ್ನ ಕಾಂಗ್ರೆಸ್ ತಾನು ಬಿಜೆಪಿಗಿಂತ ಬೇರೆ ಎಂದು ಹೇಳಿಕೊಳ್ಳುತ್ತ ಜನರಿಗೆ ಅದನ್ನು ಮನದಟ್ಟು ಮಾಡಲು ಪ್ರಯತ್ನಿಸುತ್ತಲೇ ಬಂದಿವೆ. ಆದರೆ ಇವರ ಸುಳ್ಳುಗಳು ಜನರ ಮುಂದೆ ತಮ್ಮ ವೇಷ ಕಳೆದು ಬೆತ್ತಲಾಗುತ್ತಲೂ ಇವೆ.

ಹೊಸ ಆರ್ಥಿಕ ನೀತಿಯ ವಿಷಯದಲ್ಲೂ ಬಿಜೆಪಿ ತಾನು ಕಾಂಗ್ರೆಸ್ಸಿಗಿಂತ ಭಿನ್ನ ಎಂದು ತೋರಿಸಿಕೊಳ್ಳಲು ಪರದಾಡುತ್ತಲೇ ಇದೆ. ಆದರೆ ಅದು ಸಾಧ್ಯವಾಗುತ್ತಿಲ್ಲ.

ಈಗ ಪಣಜಿಯಲ್ಲಿ ನಡೆವ ಬಿಜೆಪಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತನ್ನ ಆರ್ಥಿಕ ನೀತಿಯ ಬಗ್ಗೆ ಜನರಲ್ಲಿ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಇರುವ ಅವಿಶ್ವಾಸವನ್ನು ತೆಗೆದುಹಾಕುವ ಪ್ರಯತ್ನಗಳ ಬಗ್ಗೆ ಅದು ಚರ್ಚಿಸಲಿದೆ. ಅಂದರೆ 'ಕಾಂಗ್ರೆಸ್' ನ ಹೊಸ ಆರ್ಥಿಕ ನೀತಿಯೇ ನಮ್ಮ ನೀತಿಯೂ ಎಂಬುದನ್ನು ಮನದಟ್ಟು ಮಾಡಿಕೊಡುವ ಪ್ರಯತ್ನಗಳನ್ನು ಗಂಭೀರವಾಗಿ ಬಿಜೆಪಿ ಮಾಡಲಿದೆ.

ಮುಂದೆ ತಾನು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಕಾಂಗ್ರೆಸ್ ನ ನೀತಿಗಳನ್ನೇ ಮುಂದುವರಿಸಿಕೊಂಡು ಬೆಳೆಸಿಕೊಂಡು ಹೋಗುತ್ತೇವೆ. ಆ ಬಗ್ಗೆ ಸಂಶಯ ಬೇಡ ಎಂಬ ಸಂದೇಶ ಅದರದ್ದು?



ತಂಬಾಕು ಕಂಪನಿಗಳ ಯುದ್ಧದ ಹೊಗೆ

ಕಳೆದ ಕೆಲವು ದಿನಗಳಿಂದ ಇಂಡಿಯನ್ ಟೊಬ್ಯಾಕೋ ಕಂಪನಿ (ಐಟಿಸಿ) ಮತ್ತು ಬ್ರಿಟಿಷ್ ಅಮೇರಿಕನ್ ಟೊಬ್ಯಾಕೋ (ಬಿ.ಎ.ಟಿ.) ಇವೆರಡೂ ಸುದ್ದಿಯಲ್ಲಿವೆ. ಬ್ರಿಟನ್ ಮೂಲದ ಬಿಎಟಿ ಐಟಿಸಿಯ ತಾಯಿ ಕಂಪನಿ.

ಈ ತಾಯಿ ಕಂಪನಿ ಐಟಿಸಿಯಲ್ಲಿ ತನ್ನ ಪಾಲನ್ನು ಹೆಚ್ಚಿಸಿಕೊಂಡು ಅದರ ಮೇಲೆ ಪೂರ್ತಿ ಹತೋಟಿ ಪಡೆವ ಹುನ್ನಾರ ನಡೆಸುತ್ತಲೇ ಇತ್ತು. ಆದರೆ ಐಟಿಸಿಯ ಅಧ್ಯಕ್ಷ ಕೆ.ಎಸ್. ಬೂಫ್ ಈ ಪ್ರಯತ್ನಗಳಿಗೆ ಅಡ್ಡಗೋಡೆಯಾಗಿ ನಿಂತಿದ್ದರು.

ಈಗ ಒಮ್ಮೆಲೆ ಭೂಫ್‌ರನ್ನು ತೆಗೆದುಹಾಕುವ ಪ್ರಯತ್ನವನ್ನು ಬಿಎಟಿ ಮಾಡಿತು.

ಅದು ಯಶಸ್ವಿಯಾಗದಿದ್ದರೂ ಆಡಳಿತ ಮಂಡಳಿಯಲ್ಲಿ ತನ್ನ ಜನರನ್ನು ತೂರಿಸುವಲ್ಲಿ ಸಫಲವಾಯಿತು.

ಇರಲಿ.

ಇದು ಬರಲಿರುವ ದಿನಗಳಲ್ಲಿ ಕಂಪನಿ ಯುದ್ಧಗಳು ಹೇಗಿರುತ್ತವೆ ಎಂಬ ಸ್ಯಾಂಪಲು. ಅಪಾರ ಸಂಪನ್ಮೂಲಗಳು ಮತ್ತು ಸಾಮರ್ಥ್ಯ ಹೊಂದಿರುವ ಬಹುರಾಷ್ಟ್ರೀಯ ಕಂಪೆನಿಗಳು ಲಾಭಕ್ಕಾಗಿ ಹೇಗೆ ವರ್ತಿಸಬಲ್ಲವೆಂಬುದರ ಘಟ್ಟ ಉದಾಹರಣೆ ಇದು. ಉದಾರೀಕರಣದ ಈ ದಿನಗಳಲ್ಲಿ ದೇಶೀ ಕಂಪನಿಗಳನ್ನು ದೈತ್ಯ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳು ನುಂಗಿ ನೀರು ಕುಡಿವ ಲೀಲೆಗಳು ಇನ್ನೂ ಹೆಚ್ಚಾಗಿ ನಮಗೆ ಕಾಣಲಿವೆ.

ಕರ್ನಾಟಕದ ಕಾಮಧೇನುಗಳ ಸಾಧನೆ

ಉದಾರೀಕರಣದ ದಿನಗಳಲ್ಲಿ ಕರ್ನಾಟಕದ ಸಾರ್ವಜನಿಕ ವಲಯದ ಉದ್ದಿಮೆಗಳು ಉತ್ತಮ ಕಾರ್ಯನಿರ್ವಹಣೆ ತೋರಿದೆ. 1993-94ಕ್ಕೆ ಒಟ್ಟು ಹಾನಿಯನ್ನು ಹಿಂದಿನ ವರ್ಷದ 65.71 ಕೋಟಿ ರೂಪಾಯಿಗಳಿಂದ 32.77 ಕೋಟಿ ರೂಪಾಯಿಗಳಿಗೆ ಇಳಿಸಿದೆ. ಇದು ನಿಜಕ್ಕೂ ಶ್ಲಾಘನೀಯ ಸಾಧನೆ.

ಖಾಸಗಿ ಬಂಡವಾಳಿಗರು ಈ ಉದ್ದಿಮೆಗಳನ್ನು ತಮ್ಮ ಲಾಭಕ್ಕಾಗಿ ಹಿಂದುತ್ತಲೇ ಇದ್ದರೂ ಇಂತಹ ಸಾಧನೆಯನ್ನು ಅವು ತೋರಿವೆ.

ಲಾಭಗಳಿಸಿದ ಉದ್ದಿಮೆಗಳ ಪೈಕಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕರ್ನಾಟಕ ವಿದ್ಯುತ್ ನಿಗಮ, ಕರ್ನಾಟಕ ತಂಬಾಕು ಸಂಸ್ಥೆ ಸೇರಿವೆ.

ದೇಶದೊಳಗೆ



-ವಿಶ್ವ

ಕೇರಳದಲ್ಲಿ ನಿಲ್ಲದ ಚಳುವಳಿ

ಕೇರಳ ಮುಖ್ಯಮಂತ್ರಿ ಕೆ. ಕರುಣಾಕರನ್ ಅವರೇನೋ ನಿರ್ಗಮಿಸಿದರು. ಆ ರಾಜ್ಯದ ಪತ್ರಿಕೆಗಳು ಬರೆದಿರುವಂತೆ ಕರುಣಾಕರನ್ ಹೊರಹೋಗಲಿಲ್ಲ, ಅವರನ್ನು ಹೊರಗೆ ಹಾಕಲಾಯಿತು. (He did not went, but sent out)

ಪ್ರಮುಖ ಭಿನ್ನಮತೀಯ ನಾಯಕ ಎ.ಕೆ. ಆಂತೋಣಿ ರಾಜ್ಯದ ಹೊಸ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಹೊಸ ಮಂತ್ರಿಗಳೂ ಅಧಿಕಾರಕ್ಕೆ ಬಂದಿದ್ದಾರೆ.

ಕರುಣಾಕರನ್ ಬದಲಾದ ಮಾತ್ರಕ್ಕೆ ಆ ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿಯ ಗುರಿ ಈಡೇರಿದಂತಾಗಿಲ್ಲ. ಕಾಂಗ್ರೆಸ್(ಐ) ಸರಕಾರವೇ ನಿರ್ಗಮಿಸಿ ಹೊಸದಾಗಿ ಚುನಾವಣೆ ನಡೆಯಬೇಕೆಂಬುದು ಪ್ರಮುಖ ಬೇಡಿಕೆಯಾಗಿತ್ತು., ಆಗಿದೆ ಕೂಡ.

ಈ ದಿಸೆಯಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಮಾರ್ಚ್ 27 ರಂದು ರಾಜ್ಯವ್ಯಾಪಿ ಚಳುವಳಿಯನ್ನು ಹಮ್ಮಿಕೊಂಡಿತ್ತು. ರಾಜ್ಯ ಸರಕಾರದ ಕಾರ್ಯಾಲಯ ಮತ್ತು ಜಿಲ್ಲಾ ಕೇಂದ್ರಗಳನ್ನು ಜಿಲ್ಲಾಧಿಕಾರಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲಾಯಿತು.

ಸಹಕಾರಿ ಸಚಿವ ಎಂ.ವಿ. ರಾಘವನ್ ಅವರನ್ನು ಸಚಿವ ಸ್ಥಾನದಿಂದ ತೆಗೆದು ಹಾಕುವುದು, ಕೂತುಪರಂಬ ಗೋಳಿಬಾರಿಗೆ ಹೊಣೆಗಾರರಾದ ರಾಘವನ್ ಮತ್ತು ಪೋಲೀಸ್ ಅಧಿಕಾರಿಗಳ ವಿರುದ್ಧ ಕೊಲೆ ಮೊಕದ್ದಮೆಯನ್ನು ದಾಖಲಿಸುವುದು ಹಾಗೂ ವಿಧಾನಸಭೆಗೆ ಹೊಸದಾಗಿ ಚುನಾವಣೆಗಳನ್ನು ನಡೆಸಬೇಕು ಎನ್ನುವುದು ಡಿ.ವೈ.ಎಫ್.ಐ.ನ ಪ್ರಮುಖ ಬೇಡಿಕೆಗಳಾಗಿದ್ದವು.

ಭ್ರಷ್ಟಾಚಾರಿಗಳಿಗೆ ರಕ್ಷಣೆ: ಲೋಕಾಯುಕ್ತ ಕಟು ಟೀಕಾ ಪ್ರಹಾರ

ಭ್ರಷ್ಟಾಚಾರದಲ್ಲಿ ಒಳಗೊಂಡ ಸ್ಪಷ್ಟ ಪುರಾವೆಗಳಿರುವ ಹಿರಿಯ ಅಧಿಕಾರಿಗಳನ್ನು ಹಾಗೂ ಅಧಿಕಾರ ದುರುಪಯೋಗ ಪಡಿಸಿಕೊಂಡವರನ್ನು ಸರಕಾರ ರಕ್ಷಿಸಿದೆ, ಈಗಲೂ ರಕ್ಷಿಸುತ್ತಿದೆ.

ಇದು ಮಧ್ಯಪ್ರದೇಶದ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರು ಸಲ್ಲಿಸಿದ 1992-93 ಹಾಗೂ 93-94ನೇ ಸಾಲಿನವರದಿಯಲ್ಲಿ ಉಲ್ಲೇಖವಾಗಿರುವ ಅಂಶವಾಗಿದೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದ್ದಾಗ ಮತ್ತು ಈಗಿನ ಕಾಂಗ್ರೆ ಸರಕಾರದ ಇದುವರೆಗಿನ ಅವಧಿಯಲ್ಲಿ ಭ್ರಷ್ಟಾಚಾರ ಏಕಪ್ರಕಾರವಾಗಿ ಮುಂದುವರಿದಿದೆ ಎಂದು ಅವರು ಹೇಳಿದ್ದಾರೆ.

ಒರಿಸ್ಸಾದಲ್ಲಿ ಭಿನ್ನಮತದ ಕಹಳೆ

ಒರಿಸ್ಸಾದಲ್ಲಿ ಜನತಾದಳ ಸರಕಾರವನ್ನು ಕೆಳಗಿಳಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ (ಐ) ಸರಕಾರದಲ್ಲಿ ಆರಂಭದಲ್ಲೇ ಭಿನ್ನಮತದ ಸಂಘ್ಯೆ ಉದ್ಭವಿಸಿದೆ. ಇಬ್ಬರು ಉಪಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಹೇಮಾನಂದ ಬಿಸ್ವಾಲ್ ಬಂಡಾಯದ ಕಹಳೆಯನ್ನು ಊದಿದ್ದಾರೆ.

ಮಾಜಿ ಮುಖ್ಯಮಂತ್ರಿಯಾದ ಬಿಸ್ವಾಲ್ ಮತ್ತೊಮ್ಮೆ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಆದರೆ ಯಶಸ್ವಿಯಾಗಲಿಲ್ಲ. ಶಾಸಕರ ಪಕ್ಷದಲ್ಲೇ ಸಾಕಷ್ಟು ಬೆಂಬಲವಿಲ್ಲದುದು ಕಾರಣವಾಗಿತ್ತು. ಹಳೆಯ ಹುಲಿ ಜೆ.ಬಿ. ಪಟ್ನಾಯಕ್ ಮತ್ತೆ ಮುಖ್ಯಮಂತ್ರಿ ಆದರು.

ಮತ್ತೆ ಮುಖ್ಯಮಂತ್ರಿಯಾಗುವ ಕನಸು ನನಸಾಗದಿದ್ದರಿಂದ ಅತೃಪ್ತರಾಗಿರುವ ಬಿಸ್ವಾಲ್ ಸ್ವತಃ ತಮ್ಮ ಸರಕಾರಕ್ಕೆ ತಲೆನೋವು ತರುವ ಕೆಲಸವನ್ನು ಆರಂಭಿಸಿದ್ದಾರೆ. ಮುಂದೆ ಏನೆಲ್ಲಾ ಆಗಲಿದೆ ಎನ್ನುವುದನ್ನು ಕಾದುನೋಡಬೇಕಷ್ಟೆ.

ಸಾಮೂಹಿಕ ನಾಶ: ಠಾಕ್ರೆ ಬೆದರಿಕೆ

ಮಹಾರಾಷ್ಟ್ರದಲ್ಲಿ ಶಿವಸೇನೆ-ಬಿಜೆಪಿ ಕೂಟದ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಎದುರಾಗಲಿರುವ ಅಪಾಯದ ಒಂದೊಂದೇ ಸುಳಿವು ದೊರಕಲಾರಂಭಿಸಿದೆ.

ಅಪಾಯಕಾರಿಯಾದ ಮಣ್ಣಿನ ಮಕ್ಕಳವಾದವನ್ನು ಪ್ರತಿಪಾದಿಸುತ್ತಿರುವ ಶಿವಸೇನೆಯೇ ಸರಕಾರದಲ್ಲಿ ಪ್ರಮುಖ ಪಾತ್ರಧಾರಿಯಾಗಿದೆ. ಅದರ ಮುಖಂಡ ಬಾಳಠಾಕ್ರೆ ಪಕ್ಷದ ಪತ್ರಿಕೆ 'ಸಾಮ್ನಾ'ದಲ್ಲಿ ಪ್ರಕಟಿಸಿರುವ ಹೇಳಿಕೆಯೊಂದು ಮಾರ್ಚ್ ೨೮ರಂದು ರಾಜ್ಯ ವಿಧಾನಸಭೆಯಲ್ಲಿ ಕೋಲಾಹಲವನ್ನು ಎಬ್ಬಿಸಿತು.

'ನನ್ನ ಮೇಲೆ ಯಾರಾದರೂ ಧಾಳಿ ನಡೆಸಿದಲ್ಲಿ ಹಂತಕ ಯಾವ ಸಮುದಾಯಕ್ಕೆ ಸೇರಿದವನೋ ಆ ಇಡೀ ಸಮುದಾಯವನ್ನು ನಿರ್ಮೂಲ ಮಾಡಲಾಗುತ್ತದೆ' ಎಂದು ಠಾಕ್ರೆ ಬೆದರಿಕೆ ಹಾಕಿದ್ದರು.

ತನಗೆ (ಠಾಕ್ರೆ) ಹಾಗೂ ಮುಖ್ಯಮಂತ್ರಿ ಮನೋಹರ ಜೋಷಿಗೆ ಅಜ್ಞಾತ ವ್ಯಕ್ತಿಯೊಬ್ಬರಿಂದ ದೂರವಾಣಿಯಲ್ಲಿ ಕೊಲೆ ಬೆದರಿಕೆ ಬಂದಿದೆ ಎಂದು ಹೇಳುವ ಠಾಕ್ರೆ ಅದಕ್ಕೆ ಪ್ರತಿಕ್ರಿಯೆಯಾಗಿ ಈ ರೀತಿ ಬೆದರಿಕೆ ಹಾಕಿದ್ದಾರೆ. ಫೋನ್ ಮಾಡಿದಾತ ತಾನು 'ಬಾಂಗ್ಲಾದೇಶಿ' ಎಂದು ಹೇಳಿದ್ದ ಎಂದೂ ಠಾಕ್ರೆ ಬರೆದಿದ್ದರು.

ಆದ್ದರಿಂದ ಠಾಕ್ರೆಯ ಎಚ್ಚರಿಕೆ ಮುಸ್ಲಿಮರನ್ನು ಕುರಿತಾದದ್ದು ಎಂಬುದು ಸ್ಪಷ್ಟವಾಗಿದೆ. ಅಲ್ಪಸಂಖ್ಯಾತರು ಮಾತ್ರವಲ್ಲದೆ ಮರಾಠಿಗರಲ್ಲದ ಭಾಷಿಕರು ಕೂಡ ಮಹಾರಾಷ್ಟ್ರದಲ್ಲಿ ಭಯದಿಂದಲೇ ಜೀವನ ನಡೆಸುವ ದಿನಗಳು ಸಮೀಪಿಸುತ್ತಿರುವ ಸೂಚನೆಗಳು ಕಂಡುಬರುತ್ತಿವೆ.

ಠಾಕ್ರೆ ಹೇಳಿಕೆಯನ್ನು ವಿಧಾನಸಭೆಯಲ್ಲಿ ಪ್ರಸ್ತಾವಿಸಿದ ಪ್ರತಿಪಕ್ಷ ಸದಸ್ಯರು, ಈ ಹೇಳಿಕೆಯನ್ನು ರಾಜ್ಯದಲ್ಲಿನ ಅಲ್ಪಸಂಖ್ಯಾತರಿಗೆ ಒಂದು ಬೆದರಿಕೆಯಾಗಿದ್ದು ಈ ಬಗ್ಗೆ ತುರ್ತಾಗಿ ಚರ್ಚೆ ನಡೆಯಬೇಕೆಂದು ಹೇಳಿದರು. 'ಕೋಮುವಾದಿ ಸರಕಾರಕ್ಕೆ ಧಿಕ್ಕಾರ' ಎಂದು ಘೋಷಣೆಗಳನ್ನು ಕೂಗಿದರು.

ನಕ್ಸಲೀಯರ ವಿರುದ್ಧ ಆಂಧ್ರ ಸರಕಾರದ ಬಿಗು ನಿಲುವು

ಆಂಧ್ರ ಪ್ರದೇಶದಲ್ಲಿ ಎಡಸಾಹಸವಾದಿಗಳ ದುಷ್ಕೃತ್ಯಗಳನ್ನು ಮಟ್ಟಹಾಕುವ ದಿಸೆಯಲ್ಲಿ ತೆಲುಗುದೇಶಂ ಸರಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುವ ಎಲ್ಲಾ ಸಂಭವವಿದೆ.

ಅಧಿಕಾರಕ್ಕೆ ಬಂದು ಮೂರು ತಿಂಗಳಾಗಿರುವ ರಾಮರಾವ್ ಸರಕಾರ, ಶರಣಾಗಿ ಸಮಾಜದ ಮುಖ್ಯವಾಹಿನಿಗೆ ಸೇರಿಕೊಳ್ಳುವಂತೆ ನಕ್ಸಲೀಯರಿಗೆ ಮನವಿ ಮಾಡಿತ್ತು. ಆದರೆ ಆಗೇನೂ ಅದು ಶರಣಾಗತಿಗೆ ಸಮಯದ ಗಡುವನ್ನು ವಿಧಿಸಿರಲಿಲ್ಲ.

ಶರಣಾಗತಿ ಕರೆಗೆ ನಕ್ಸಲೀಯರು ಪ್ರತಿಕ್ರಿಯೆ ನೀರಸವಾಗಿರುವುದರಿಂದ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸರಕಾರ ಮುಂದಾಗುತ್ತಿದೆ. ಕೆಲವು ನಕ್ಸಲೀಯರು ಮಾತ್ರ ಸರಕಾರದ ಮನವಿಗೆ ಓಗೊಟ್ಟು ಶರಣಾಗಿದ್ದಾರೆ. ಉಳಿದಂತೆ ನಕ್ಸಲೀಯರ ಚಟುವಟಿಕೆ ಮುಂದುವರಿದಿದೆ.

ಪ್ರಾದೇಶಿಕ ಹಿಂದುಳಿಯುವಿಕೆಯ ವಿರುದ್ಧ ಹೋರಾಡಲು ಧಾರವಾಡ ಜಿಲ್ಲಾ ಸಮ್ಮೇಳನದ ನಿರ್ಧಾರ

ಹುಬ್ಬಳ್ಳಿ: ಕರ್ನಾಟಕ ಏಕೀಕರಣದ ನಂತರ ಎಲ್ಲಾ ಸರ್ಕಾರಗಳಿಂದಲೂ ನಿರ್ಲಕ್ಷಿಸಲ್ಪಟ್ಟ ಉತ್ತರ ಕರ್ನಾಟಕದ ಜಿಲ್ಲೆಗಳ ಜನತೆಯ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಇತರ ಪಕ್ಷಗಳೊಂದಿಗೆ ಹಾಗೂ ಸಂಘ ಸಂಸ್ಥೆಗಳೊಂದಿಗೆ ಜಂಟೀಯಾಗಿ ಹೋರಾಡಲು ಫೆಬ್ರವರಿ 15 ರಿಂದ 17ರವರೆಗೆ ಹುಬ್ಬಳ್ಳಿಯಲ್ಲಿ ನಡೆದ ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮ್ಮೇಳನ ತೀರ್ಮಾನಿಸಿದೆ. ದಕ್ಷಿಣದ ಜಿಲ್ಲೆಗಳೊಂದಿಗೆ ಹೋಲಿಸಿದರೆ ಧಾರವಾಡ ಮತ್ತು ಬೆಳಗಾಂವ್ ಜಿಲ್ಲೆಗಳೂ ಸೇರಿದಂತೆ ಉತ್ತರ ಕರ್ನಾಟಕದ ೮ ಜಿಲ್ಲೆಗಳು ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ತುಂಬ ಹಿಂದುಳಿದಿವೆ. ಅನೇಕ ದೊಡ್ಡ ದೊಡ್ಡ ನದಿಗಳು ಇಲ್ಲಿ ಹರಿಯುತ್ತಿದ್ದರೂ ಈ ಜಿಲ್ಲೆಗಳಿಗೆ ಬರಗಾಲ ತಪ್ಪಿದ್ದಲ್ಲ. ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ಈ ನದಿಗಳ ನೀರನ್ನು ಲಭ್ಯವಿರುವ ಫಲವತ್ತಾದ ಭೂಮಿಗೆ ಒದಗಿಸದಿರುವುದೇ ಈ ಪ್ರಾದೇಶಿಕ ಹಿಂದುಳಿಯುವಿಕೆಗೆ ಮುಖ್ಯ ಕಾರಣ. ಮಳೆಯ ಅಭಾವ ಮಾತ್ರವಲ್ಲ ನೀರಾವರಿ ಸೌಲಭ್ಯದ ಅಭಾವದಿಂದಾಗಿ ರೈತರು ಭೂಮಿ ಇದ್ದೂ ಬಡವರಾಗಿದ್ದಾರೆ. ಭೂ ಹೀನ ಕೃಷಿ ಕೂಲಿಕಾರರಂತೂ ಹೊಟ್ಟೆ ಪಾಡಿಗಾಗಿ ಪ್ರತಿವರ್ಷ ಕಾಫಿ ಸೀಮೆಗೋ ಅಥವಾ ಮುಂಬೈ ಗೋವಾದಂತಹ ಕಡೆಗೆ ವಲಸೆ ಹೋಗಲೇ ಬೇಕಾಗುತ್ತದೆ. ಎರಡು ವಿಶ್ವವಿದ್ಯಾಲಯಗಳನ್ನು ಮತ್ತು ಒಂದು ಕೃಷಿ ವಿದ್ಯಾಲಯವನ್ನು ಈ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದರೂ ಅನಕ್ಷರತೆ ಈ ಜಿಲ್ಲೆಗಳಲ್ಲಿಯೇ ಅತಿ ಹೆಚ್ಚು. ಈ ವಿಶ್ವವಿದ್ಯಾಲಯಗಳಿಂದ ಹೊರಬರುವ ಪದವೀಧರರಿಗೆ ಉದ್ಯೋಗದ ಅವಕಾಶಗಳನ್ನು ಉಂಟುಮಾಡಲು ಸರ್ಕಾರಗಳು ಮುತುವರ್ಜಿವಹಿಸಲಿಲ್ಲ. ಈ ಪ್ರದೇಶದ ಔದ್ಯಮಿಕ ಅಭಿವೃದ್ಧಿಗೆ ಅತೀ ಅವಶ್ಯ ಇರುವ ರೈಲು ಮಾರ್ಗಗಳನ್ನಾಗಲಿ ರಸ್ತೆಗಳನ್ನಾಗಲಿ ಅಭಿವೃದ್ಧಿ ಪಡಿಸಲಿಲ್ಲ. ಸರ್ಕಾರಗಳೇ ಬೆಂಬಲಿಸಿ ಬೆಳಸಿದಂತಹ ಮಠಮಾ[illegible] ಇಂದು ವಿದ್ಯಾದಾನದ ಹೆಸರಿನಲ್ಲಿ [illegible] ವ್ಯಾಪಾರದ ಗುತ್ತೇದಾರಿಗಳಾ[illegible]ದಿವೆ. ಮಾತ್ರವಲ್ಲ ಪ್ರಗತಿಗೆ ಪ್ರಮುಖ ಅಡ್ಡಿಯಾಗಿರುವ ಜಾತಿ ವ್ಯವಸ್ಥೆ ಗಟ್ಟಿಗೊಳ್ಳಲು ಕಾರಣವಾಗಿವೆ.

ಕರ್ನಾಟಕದ ಏಕೀಕರಣ ಚಳುವಳಿಯ ಪ್ರಮುಖ ಕೇಂದ್ರವಾಗಿದ್ದ ರಾಜ್ಯದ ಈ ಪ್ರದೇಶದಲ್ಲಿ ಈಗ ಪ್ರತ್ಯೇಕತೆಯ ಧ್ವನಿ ಕೇಳಿ ಬರುತ್ತಿರುವುದು ಒಂದು ವಿಪರ್ಯಾಸವಾಗಿದೆ. ಕನ್ನಡದ ನೆಲವನ್ನು ಒಂದುಗೂಡಿಸಲು ಕಮ್ಯುನಿಸ್ಟರೂ ಸಹ ಹೋರಾಡಿದ್ದರು ಎಂಬುದನ್ನು ಮರೆಯಲಾಗದು. ಉತ್ತರ ಕರ್ನಾಟಕದ ಜನತೆಯ ಬೇಡಿಕೆಗಳು ನ್ಯಾಯಯುತವಾಗಿದ್ದರೂ ಪ್ರತ್ಯೇಕತೆಯ ಬೇಡಿಕೆಯನ್ನು ಬೆಂಬಲಿಸಲಾಗದು. ಈ ಛಿದ್ರಕಾರಿ ಕೂಗು ಅಡಗುವಂತಾಗಬೇಕಾದರೆ ಕೃಷ್ಣಾ ನದಿ ಕೊಳ್ಳದ ನೀರಾವರಿ ಯೋಜನೆಗಳು, ಮಹದಾಯಿ ನದಿಯನ್ನು ಮಲಪ್ರಭ ನದಿಗೆ ಜೋಡಿಸುವ ಯೋಜನೆ, ತುಂಗ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳು ತುರ್ತಾಗಿ ಪೂರ್ಣಗೊಳ್ಳಬೇಕು, ಉತ್ತರ ಕರ್ನಾಟಕದ ಭಾಗ್ಯದ ಬಾಗಿಲು ಎಂತಿರುವ ಕಾರಾವಾರ-ಹುಬ್ಬಳ್ಳಿ ರೈಲು ಮಾರ್ಗ ನಿರ್ಮಾಣ, ನೈರುತ್ಯ ರೈಲ್ವೆ ವಲಯ ಕಛೇರಿ ಮತ್ತು ಹೈಕೋರ್ಟ್ ಪೀಠ ಸ್ಥಾಪನೆ, ಹತ್ತಿ ಬೆಳೆಯುವ ಈ ಪ್ರದೇಶದಲ್ಲಿ ಜವಳಿ ಉದ್ದಿಮೆಗೆ ವಿಶೇಷ ಪ್ರೋತ್ಸಾಹ ಇತ್ಯಾದಿ ಬೇಡಿಕೆಗಳನ್ನು ಆದ್ಯತೆಯ ಮೇರೆಗೆ ಸರ್ಕಾರ ಈಡೇರಿಸುವಂತೆ ಒತ್ತಾಯಿಸಲು ವಿಶಾಲ ಜನಾಂದೋಲನವನ್ನು ಸಂಘಟಿಸುವುದು ಅವಶ್ಯವಾಗಿದೆ ಎಂದು ಸಮ್ಮೇಳನ ಅಭಿಪ್ರಾಯಪಟ್ಟಿದೆ.

ಜಿಲ್ಲಾ ಸಮಿತಿಯ ಹಿರಿಯ ಸದಸ್ಯರಾದ ಕಾಂ. ಎಸ್.ಎಚ್. ಕಪ್ಪಣ್ಣವರ್ ಪಕ್ಷದ ಧ್ವಜವನ್ನು ಏರಿಸುವುದರೊಂದಿಗೆ ಸಮ್ಮೇಳನದ ಕಲಾಪಗಳು ಆರಂಭವಾದವು. ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ [illegible] ಹಿರಿಯ ಸ್ವಾತಂತ್ರ್ಯ ಯೋಧರೂ ಆಗಿರುವ ಕಾಂ. ಎನ್.ಕೆ. ಉಪಾಧ್ಯಾಯರು ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟುವ ಕೆಲಸಕ್ಕಾಗಿ ಪಕ್ಷವು ಅವರಿಗೆ ಒಂದು ನೂರು ರೂಪಾಯಿಗಳನ್ನು ಕೊಟ್ಟು ಬೊಂಬಾಯಿಯಿಂದ ಹುಬ್ಬಳ್ಳಿಗೆ ಕಳುಹಿಸಿದ್ದನ್ನು ಹೆಮ್ಮೆಯಿಂದ ಸ್ಮರಿಸಿದರು.

-ನಿತ್ಯಾನಂದಸ್ವಾಮಿ

ಹಾನಗಲ್ ತಾಲೂಕಿನಲ್ಲಿ ಬೆಳೆಯುತ್ತಿರುವ ಸರ್ಕಾರಿ ಭೂಮಿ ಅತಿಕ್ರಮಣ ಚಳುವಳಿಯನ್ನು ಶ್ಲಾಘಿಸಿದ ಅವರು ಆರಂಭದ ಆ ದಿನಗಳಲ್ಲಿ ಧಾರವಾಡ ತಾಲೂಕಿನಲ್ಲಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಸರ್ಕಾರಿ ಭೂಮಿ ಅತಿಕ್ರಮಣ ಮಾಡಿದ್ದನ್ನು ರೈತರು ಸ್ವಾಧೀನದಲ್ಲಿಟ್ಟುಕೊಂಡು ಅನುಭವಿಸುತ್ತಿದ್ದಾರೆ ಎಂದು ಹೇಳಿದರು.

ಶ್ರದ್ಧಾಂಜಲಿ ನಿರ್ಣಯವನ್ನು ಕಾಂ. ನಿತ್ಯಾನಂದ ಸ್ವಾಮಿ ಮಂಡಿಸಿದರು. ಮರುದಿನ ನಡೆಯಲಿದ್ದ ಜೀವ ವಿಮಾ ನೌಕರರ ಅಖಿಲ ಭಾರತ ಮುಷ್ಕರವನ್ನು ಬೆಂಬಲಿಸುವ ನಿರ್ಣಯವನ್ನು ಕಾಂ. ಸಿ.ಆರ್. ಭಟ್ ಮಂಡಿಸಿದರು. ಆರಂಭದಲ್ಲಿ ಕಾಂ. ಎಂ.ಎಚ್. ಮುಲ್ಲಾ ಸ್ವಾಗತಿಸಿದರು. ಕಾಂ. ಡಿ.ಜಿ. ಗೊಂದಕರ್ ಕೊನೆಯಲ್ಲಿ ವಂದಿಸಿದರು. ಜಿಲ್ಲಾ ಸಮಿತಿಯ ಹಿರಿಯ ಸದಸ್ಯರಾದ ಕಾಂ. ವಿ.ಎನ್. ದೇಶಪಾಂಡೆ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು.

ಪ್ರತಿನಿಧಿಗಳ ಅಧಿವೇಶನದ ಕಲಾಪಗಳನ್ನು ನಡೆಸಲು ಕಾಂ. ಫಕೀರಪ್ಪ ಹೋತನಹಳ್ಳಿ, ವಿ.ಪಿ. ಕುಲಕರ್ಣಿ ಮತ್ತು ಎಲ್.ಎಸ್. ನಾಯಕ್ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ಕಾಂ. ಸಿ.ಆರ್. ಭಟ್ ನೇತೃತ್ವದ ನಿರ್ಣಯ ವಸ್ತು ಸಮಿತಿಯನ್ನು ಕಾಂ. ಎ.ಎಸ್. ಮೂರ್ತಿ ಅವರ ಸಂಚಾಲಕತ್ವದಲ್ಲಿ ಅರ್ಹತಾ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತಲ್ಲದೆ ಸಮ್ಮೇಳನದ ಕಲಾಪಗಳನ್ನು ದಾಖಲು ಮಾಡಲು ಕಾಂ. ಗೈಬು ಜೈನೆಖಾನ್ ಮತ್ತು ಬಿ. ಸದಾಶಿವಪ್ಪ ಅವರನ್ನು ನೇಮಿಸಲಾಯಿತು.

ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ನಿತ್ಯಾನಂದ ಸ್ವಾಮಿ ಅವರು ಮಂಡಿಸಿದ ವರದಿಯ ಮೇಲೆ ಒಟ್ಟು 23 ಪ್ರತಿನಿಧಿ ಸಂಗಾತಿಗಳು ಮಾತನಾಡಿದರು. ಜಿಲ್ಲಾ ಸಮಿತಿಯ ಪರವಾಗಿ ಕಾರ್ಯದರ್ಶಿ ನೀಡಿದ ಉತ್ತರದ ಆಧಾರದಲ್ಲಿ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ರಾಜ್ಯ ಸಮಿತಿಯ ಸದಸ್ಯರೂ, ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರೂ ಆಗಿರುವ ಕಾಂ. ಜಿ.ಎನ್. ನಾಗರಾಜ್ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಾಂ. ಎನ್.ಕೆ. ಉಪಾಧ್ಯಾಯರನ್ನು ಅವರ 79ನೇ ಹುಟ್ಟಹಬ್ಬದ ನಿಮಿತ್ತ ಸತ್ಕರಿಸಿ ಅಭಿನಂದಿಸಲಾಯಿತು.

ತುಂಗ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳು, ರಂಗಯ್ಯನ ದುರ್ಗ ಯೋಜನೆ, ಮಲಪ್ರಭ ನದಿಗೆ ಮಹದಾಯಿ ನದಿ ನೀರನ್ನು ಜೋಡಿಸುವ ಯೋಜನೆ, ವರದಾ ಮತ್ತು ಸಿಂಗಟಾಲೂರು ಏತ ನೀರಾವರಿ ಯೋಜನೆಗಳನ್ನು ತಕ್ಷಣ ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕು, ಧಾರವಾಡ ಮತ್ತು ಬೆಳಗಾಂವ್ ಜಿಲ್ಲೆಗಳಲ್ಲಿನ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಿ ಪಟ್ಟಾ ಕೊಡಬೇಕು, ಅತಿ ಕ್ರಮಣ ಮಾಡಿರುವ ಬಡವರ ಮೇಲೆ ಹಾಕಲಾದ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು, ಸ್ವಂತ ಮನೆ ಇಲ್ಲದ ಬಡವರು ಸರ್ಕಾರಿ ಭೂಮಿಯಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಿ ಅವರಿಗೆ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಿ ಅವರಿಗೆ ಪಟ್ಟಾ ಕೊಡಬೇಕು, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಸಂಪೂರ್ಣವಾಗಿಯೂ ಶಾಶ್ವತವಾಗಿಯೂ ಬಗೆಹರಿಸಲು ಕ್ರಮಕೈಗೊಳ್ಳಬೇಕು, ಹುಬ್ಬಳ್ಳಿಯ ಒಂದು ಶತಮಾನಕ್ಕೂ ಹಳೆಯದಾದ ರೈಲ್ವೇ ವರ್ಕ್ ಶಾಪ್ ನ್ನು ಮುಚ್ಚುವ ವಿಚಾರವನ್ನು ಕೈಬಿಟ್ಟು ಅದನ್ನು ನವೀಕರಿಸಬೇಕು, ಧಾರವಾಡದ ಇಂಡಿಯನ್ ಫ್ರೆಡ್ [illegible] ಕಾರ್ಮಿಕರು ಬೀದಿ ಪಾಲಾಗುವುದನ್ನು ತಡೆಯಲು ಸರ್ಕಾರ ಮಧ್ಯಪ್ರವೇಶ ಮಾಡಬೇಕು ಹಾಗೂ ಅವರ ಮೇಲೆ ಹಾಕಲಾಗಿರುವ ಕೇಸನ್ನು ವಾಪಸ್ ಪಡೆಯಬೇಕು, ಹುಬ್ಬಳ್ಳಿಯಲ್ಲಿರುವ ಸರ್ಕಾರಿ ಒಡೆತನದ ಮಹದೇವ ಜವಳಿ ಗಿರಣಿಯನ್ನು ನವೀಕರಿಸಿ ಅಲ್ಲಿಯ ಕಾರ್ಮಿಕರಿಗೆ ಸರಿಯಾಗಿ ಸಂಬಳ ಸವಲತ್ತುಗಳನ್ನು ಸಂದಾಯ ಮಾಡಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ಸಮ್ಮೇಳನದಲ್ಲಿ ಚರ್ಚೆ ಮಾಡಿ ಅಂಗೀಕರಿಸಲಾಯಿತು.

ನೂತನ ಜಿಲ್ಲಾ ಸಮಿತಿಗೆ ಈ ಕೆಳಗಿನ 18 ಸಂಗಾತಿಗಳನ್ನು ಆಯ್ಕೆ ಮಾಡಲಾಯಿತು. 19ನೇ ಸ್ಥಾನವನ್ನು ಖಾಲಿ ಇಡಲಾಗಿದೆ. 1. ನಿತ್ಯಾನಂದ ಸ್ವಾಮಿ, 2. ಸಿ.ಆರ್. ಭಟ್, 3. ವಿ.ಪಿ.ಕುಲಕರ್ಣಿ, 4. ಫಕೀರಪ್ಪ ಹೋತನಹಳ್ಳಿ, 5. ಎಂ.ಎಚ್. ಮುಲ್ಲಾ, 6. ಎಂ.ಬಿ. ಕಟ್ಟಿ, 7. ಎಸ್.ಎಚ್. ಕಪ್ಪಣ್ಣನವರ್, 8. ವಿ.ಎನ್. ದೇಶಪಾಂಡೆ 9. ಬಸವಂತಪ್ಪ ಗೋಂದಕರ್, 10. ಎಂ. ಜಿನ್ನಾ, 11 ಎಲ್.ಎಸ್. ನಾಯಕ್, 12 ಡಿ.ಜಿ. ಗೊಂದಕರ್, 13. ಕೆ.ಎಲ್. ಭಟ್, 14. ಜಿ.ಬಿ. ತೊರಗಲ್ಲ್, 15. ಜಿ. ಪರಮೇಶ್ವರಪ್ಪ, 16. ಗೈಬು ಜೈಸಿಖಾನ್, 17. ಕೆ. ಮಹಾಂತೇಶ್, 18. ಎಫ್.ಎಂ. ನಧಾಫ್.

ಕಾಂ. ನಿತ್ಯಾನಂದಸ್ವಾಮಿ ಅವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ ಪುನಾರಾಯ್ಕೆ ಮಾಡಲಾಯಿತು. ಕಾಂ. ರಾಮಚಂದ್ರರಾವ್ ಅವರ ಸಮಾರೋಪ ಭಾಷಣದೊಂದಿಗೆ ಸಮ್ಮೇಳನದ ಕಲಾಪಗಳು ಮುಕ್ತಾಯವಾದವು. ಅಧ್ಯಕ್ಷೀಯ ಮಂಡಳಿಯ ಪರವಾಗಿ ಕಾಂ. ಫಕೀರಪ್ಪ ಹೋತನಹಳ್ಳಿ ಮಾತನಾಡಿದರು. ಕೊನೆಯಲ್ಲಿ ಕಾಂ. ಸಿ.ಆರ್. ಭಟ್ ವಂದಿಸಿದರು. ಅರ್ಹತಾ ಪರಿಶೀಲನಾ ಸಮಿತಿಯ ವರದಿ ಪ್ರಕಾರ ಒಟ್ಟು ೭೭ ಸಂಗಾತಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇವರಲ್ಲಿ 14 ಜನ ಜಿಲ್ಲಾ ಸಮಿತಿ ಸದಸ್ಯರು, 46 ಜನ ಪ್ರತಿನಿಧಿಗಳು ಮತ್ತು 17 ಜನ ವೀಕ್ಷಕರು ವೀಕ್ಷಕರಲ್ಲಿ [illegible] ಸಂಗಾತಿ[illegible]

ಟೋಕಿಯೋದಲ್ಲಿ ಹೊಸ ರೀತಿಯ ಅಪರಾಧ ವಿಧಾನ ರೈಲು ಮಾರ್ಗದಲ್ಲಿ ವಿಷಾನಿಲ ಆಕ್ರಮಣ

-ಶರತ್‌ಚಂದ್ರ

ಟೋಕಿಯೋದ ಐದು ಭೂಗತ ರೈಲು ಲೈನ್ ಗಳಲ್ಲಿ ವಿಷಾನಿಲ ಹಬ್ಬಿಸುವ ಮೂಲಕ ಭಯೋತ್ಪಾದಕ ಗುಂಪೊಂದು ಆಕ್ರಮಣ ಮಾಡಿದೆ. ಈ ವಿಷಾನಿಲ ಆಕ್ರಮಣದಲ್ಲಿ ಈ ವರೆಗೆ 8 ಜನ ಸತ್ತಿದ್ದಾರೆ. 76 ಜನ ಆತಂಕಕಾರಿ ಸ್ಥಿತಿಯಲ್ಲಿದ್ದಾರೆ. 600 ಕ್ಕೂ ಹೆಚ್ಚಿಗೆ ಜನರನ್ನು ಆಸ್ಪತ್ರೆಗೆ ದಾಖಲೆ ಮಾಡಬೇಕಾಯಿತು. ಈ ಆಕ್ರಮಣದಲ್ಲಿ ಬಳಸಿದ ವಿಷಾನಿಲ, ಎರಡನೇ ಮಹಾಯುದ್ಧದಲ್ಲಿ ಬಳಸಿದ ವಿಷಾನಿಲಗಳು ಎಂದು ಹೇಳಲಾಗಿದೆ. ಈ ಭಯಾನಕ ಆಕ್ರಮಣದ ಹಿಂದಿನ ಉದ್ದೇಶ ಏನು ಎಂದು ಸ್ಪಷ್ಟವಾಗಿಲ್ಲ. ಯಾವುದೇ ಭಯೋತ್ಪಾದಕ ಗುಂಪು ಇದು ತನ್ನ ಕೆಲಸ ಎಂದು ಹೇಳಿಕೊಂಡಿಲ್ಲ. ಅರ್ಧ ಗಂಟೆಯ ಅವಧಿಯಲ್ಲಿ ಅದು ಭೂಗತ ರೈಲುಗಳಲ್ಲಿ ವಿಷಾನಿಲ ಹುಟ್ಟಿಸುವ ದ್ರವ್ಯಗಳನ್ನು ಬಿಟ್ಟು ಹೋಗುವುದು ಸುಸ್ಸಜ್ಜಿತ ಭಯೋತ್ಪಾದಕ ಗುಂಪಿನ ಕೆಲಸ ಎನ್ನಲಾಗಿದೆ. ಈ ವಿಷಾನಿಲ ಹುಟ್ಟಿಸು ಅಪಾಯಕಾರಿ ರಾಸಾಯನಿಕ ದ್ರವ್ಯಗಳನ್ನು ಸಾಗಿಸಲು ಮಿಶ್ರ ಮಾಡಿ ರೈಲುಗಳಲ್ಲಿ ನಿಗದಿತ ವೇಳೆಯಲ್ಲಿ ಸಾಕಷ್ಟು ತಾಂತ್ರಿಕ ಹಾಗೂ ಸಂಘಟನಾ ಚಾತುರ್ಯ ಬೇಕು ಎನ್ನಲಾಗಿದೆ.

ರೈಲುಗಳಲ್ಲಿ ಪೇಪರ್‌ನಲ್ಲಿ ಸುತ್ತಿದ ಊಟದ ಡಬ್ಬಿಗಳಲ್ಲಿ ಹೆಚ್ಚಾಗಿ ವಿಷಾನಿಲ ಹುಟ್ಟಿಸುವ ರಾಸಾಯನಿಕ ದ್ರವ್ಯಗಳನ್ನು ಬಿಡಲಾಗಿತ್ತು. ಈ ಪ್ರಮಾಣದಲ್ಲಿ ಅಲ್ಲದಿದ್ದರೂ ಪ್ರತ್ಯೇಕವಾಗಿ ಈ ರೀತಿ ವಿಷಾನಿಲದ ರಾಸಾಯನಿಕ ದ್ರವ್ಯಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಿಡುವ ಚಿಕ್ಕ ಪುಟ್ಟ ಘಟನೆಗಳಾಗಿದ್ದು ಪೋಲೀಸರು ಅವನ್ನು ಈಗ ತೀವ್ರವಾಗಿ ತನಿಖೆ ಮಾಡುತ್ತಿದ್ದಾರೆ. ಟೋಕ್ಯೋದ ಉಪನಗರವೊಂದರಲ್ಲಿ ಈ ರೀತಿ ವಿಷಾನಿಲದ ದೂರಿನ ಮೇಲೆ ಕೆಲವರು ಆಸ್ಪತ್ರೆಗೆ ದಾಖಲಾಗಿದ್ದರು.

ಪೋಲೀಸರು ತೀವ್ರ ತನಿಖೆ ಆರಂಭಿಸಿದ್ದು, ಒಂದು ಕಡೆ ಮಾತ್ರ ಸಾರ್ವಜನಿಕರು ಈ ರೀತಿ ರಾಸಾಯನಿಕ ದ್ರವ್ಯ ಇಟ್ಟು ಓಡಿಹೋಗುವ ಒಬ್ಬ ಆಪಾದಿತನನ್ನು ಹಿಡಿಯಲು ಸಾಧ್ಯವಾಗಿದೆ. ಆತ ಸ್ವತಃ ವಿಷಾನಿಲದಿಂದ ತೀವ್ರ ಅಸ್ವಸ್ಥತೆಗೆ ಒಳಗಾಗಿದ್ದು ಇನ್ನೂ ಅವನನ್ನು ಪ್ರಶ್ನಿಸಲು ಸಾಧ್ಯವಾಗಿಲ್ಲ.

ಫುಜಿ ಪರ್ವತದ ಬುಡದಲ್ಲಿರುವ 'ಶೋಕೊ ಅಸಾಹಾರ' ಎಂಬ ಧಾರ್ಮಿಕ ಸಂಸ್ಥೆಯ ಮುಖ್ಯ ಕಚೇರಿ ಹಾಗೂ ಇತರ ಹಲವಾರು ಶಾಖೆಗಳಲ್ಲಿ ಪೋಲೀಸರು ದಾಳಿ ನಡೆಸಿದಾಗ, ವಿಷಾನಿಲ ಸುರಿಸುವ ರಾಸಾಯನಿಕ ದ್ರವ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ವಶಪಡಿಸಿಕೊಳ್ಳಲಾಗಿದೆ. ಶೊಕೊ ಅಸಾಹಾರಾ ಜಗತ್ತು ಸದ್ಯದಲ್ಲೇ ಪ್ರಳಯದಲ್ಲಿ ಕೊನೆಗೊಳ್ಳುತ್ತದೆ ಎನ್ನುವ ತಾಂತ್ರಿಕ ರೀತಿಯ ಗುಂಪು. ಈ ಗುಂಪಿನ ಮೇಲೆ ಪೋಲೀಸರು ಹಿಂದಿನಿಂದಲೂ ಕಣ್ಣಿಟ್ಟಿದ್ದಾರೆ. ಗುಂಪಿನ ಕೆಲವು ಸದಸ್ಯರನ್ನು, ಅವರ ಸಂಬಂಧಿಕರನ್ನು ಮುಖ್ಯಸ್ಥನ ಆಣತಿ ಉಲ್ಲಂಘಿಸಿದ್ದಕ್ಕಾಗಿ ಅಪಹರಿಸಿದ ಆಪಾದನೆಗಳನ್ನು ಪೋಲೀಸರು ತನಿಖೆ ಮಾಡುತ್ತಿದ್ದರು. ಸ್ವಲ್ಪ ಸಮಯದ ಹಿಂದೆ ಗುಂಪಿನ ಶಾಖೆಯೊಂದರಿಂದ ಭಾರಿ ವಾಸನೆ ಭರಿಸುವ ರಾಸಾಯನಿಕ ದ್ರವ್ಯ ಶೇಖರಿಸಿ ಇಟ್ಟಿದ್ದಾರೆ ಎಂಬ ಆಪಾದನೆ ಮೇಲೆ ಪೋಲೀಸರು ಅದರ ಮೇಲೆ ಧಾಳಿ ನಡೆಸಿದ್ದರು.

ಟೋಕ್ಯೋದ ಈ ವಿಷಾನಿಲ ಭಯೋತ್ಪಾದಕ ದಾಳಿ ಇತರ ದೊಡ್ಡ ರಾಜಧಾನಿಗಳಲ್ಲಿ ಕಳವಳ ಉಂಟು ಮಾಡಿದೆ. ಭೂಗತ ರೈಲುಗಳನ್ನು ನಡೆಸುವ ನ್ಯೂಯಾರ್ಕ್, ಲಂಡನ್, ಪ್ಯಾರಿಸ್ ಮುಂತಾದೆಡೆ ಭದ್ರತಾ ಕ್ರಮ ಗಳನ್ನು ಬಿಗಿಗೊಳಿಸಲಾಗಿದೆ. ವಿಷಾನಿಲ ಕವಚಗಳಿಂದ ಸಜ್ಜಿತರಾದ ವಿಶೇಷ ಪಡೆಗಳನ್ನು ಸಜ್ಜುಗೊಳಿಸಲಾಗಿದೆ. ಹೆಚ್ಚು ಕಡಿಮೆ ಟೋಕ್ಯೋದಲ್ಲಿ ನಡೆದಂತ ಘಟನೆಗಳನ್ನು ಬಿಂಬಿಸುವ ಕಾದಂಬರಿ, ಫಿಲಂಗಳು, ಈಗಾಗಲೇ ಪ್ರಕಾಶಿತವಾಗಿರುವುದು ಪೋಲೀಸರ ಆತಂಕಕ್ಕೆ ಇನ್ನಷ್ಟು ಕಾರಣವಾಗಿದೆ. ಈ ಹೊಸರೀತಿ ಅಪರಾಧ ವಿಧಾನ ಮಾಫಿಯಾ, ಭಯೋತ್ಪಾದಕರ ಗುಂಪುಗಳ ಕೈಯಲ್ಲಿ ಭಯಾನಕ ಅಸ್ತ್ರವಾಗಬಹುದು ಎಂದು ಶಂಕಿಸಲಾಗಿದೆ.

ಅಳು ಮರೆತು ಹೋಗುವಂತೆ ನಗಿಸುವ ಪ್ಯಾಲೆಸ್ಟೀನ್ ಜೋಕುಗಳು

ಪ್ಯಾಲೆಸ್ಟೀನಿಯನ್ನರು ಈಗ ವಿಚಿತ್ರ ಪರಿಸ್ಥಿತಿಯಲ್ಲಿದ್ದಾರೆ. ಇಂತಿಫಾದ ಹಾಗೂ ಭೂಗತ ಹೋರಾಟಗಳು ಮುಗಿದು ಈಗ ಸ್ವಯಂಮಾಡಳಿತ ರಚನೆಯಾಗಿದೆ. ಆದರೆ 'ಇಸ್ರೇಲ್ ಧೋರಣೆಗಳಿಂದ ಅದು 'ದೊಡ್ಡ ಮೋಸ' ಎಂದು ಜನರಿಗೆ ಅರ್ಥವಾಗಿದೆ. ಆದರೆ ಸಾಮ್ರಾಜ್ಯಶಾಹಿ ಒತ್ತಡ ಎದುರಿಸಲಾಗದೆ ಅರಾಫತ್ ನಾಯಕತ್ವ ಈ 'ಮೋಸ'ದಲ್ಲಿ ಶಾಮೀಲಾಗಿದೆ. ಪ್ಯಾಲೆಸ್ಟೀನ್ನರ ನಿಜವಾದ ಆಸೆ-ಆಕಾಂಕ್ಷೆಗಲು ಯಾವುದು ಫಲಿಸಿಲ್ಲ. ಈ ಹತಾಶೆ ಜೋಕುಗಳ ರೂಪದಲ್ಲಿ ಹೊರಬೀಳುತ್ತಿದೆ.

ಪ್ಯಾಲೆಸ್ಟೀನ್‌ನಲ್ಲಿ ಕೇಳಬರುತ್ತಿರುವ ಜೋಕುಗಳು ನಮೂನೆಗಳು ಎರಡು.

ಜೋಕು-1: ಯಾಸೆರ್ ಆರಾಫತ್ ತನ್ನ ಕಾರಿನಲ್ಲಿ ಎಲ್ಲೋ ಹೋಗುತ್ತಿದ್ದರಂತೆ ದಾರಿಯಲ್ಲಿ ಒಂದು ಕತ್ತೆ ಅಡ್ಡವಾಯಿತಂತೆ. ಅದು ಎಷ್ಟು ಹಾರನ್ ಬಾರಿಸಿದರೂ ದಾರಿ ಬಿಡಲು ತಯಾರಿರಲಿಲ್ಲವಂತೆ. ಆಗ ಅಕ್ಕ ಪಕ್ಕದಲ್ಲಿದ್ದ ಜನ, ಕೊನೆಗೆ ಡ್ರೈವರ್ ಇಳಿದು ಬೆದರಿಸಿದರೂ, ಹೊಡೆದರೂ ಹೋಗಲಿಲ್ಲವಂತೆ. ಇದರಿಂದ ಬೇಸತ್ತ ಅರಾಫತ್ ಇಳಿದು ಕತ್ತೆಯ ಕಿವಿಯಲ್ಲಿ ಏನೋ ಗುಟ್ಟಾಗಿ ಹೇಳಿದರಂತೆ ಕೂಡಲೇ ಕತ್ತೆ ದಾರಿ ಬಿಟ್ಟು ಓಡಿಹೋಯಿತಂತೆ ಡ್ರೈವರ್ ಹಾಗೂ ಇತರರಿಗೆ ಭಾರೀ ಆಶ್ಚರ್ಯ. ಕತ್ತೆಯ ಕಿವಿಯಲ್ಲಿ ಏನು ಹೇಳಿದಿರಿ ಸಾರ್ ಎಂದು ಅವರ ಪ್ರಶ್ನೆ. ನನ್ನ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿ ನೇಮಿಸುತ್ತೇನೆ ಎಂದು ಹೇಳಿದೆ ಎಂದರಂತೆ ಅರಾಫತ್

ಜೋಕ್-2: ಪ್ಯಾಲೆಸ್ಟೀನ್‌ನಲ್ಲಿ ಜೋಡಿಸುವ ಕಾರುಗಳಿಗೆ ಮೂರು ಗೇರುಗಳ ಬದಲು ಎರಡೇ ಗೇರುಗಳನ್ನು ಇಡಲಾಗುತ್ತಿದೆಯಂತೆ. ಯಾಕೆಂದರೆ ಪ್ಯಾಲೆಸ್ಟೀನ್‌ನಲ್ಲಿ ಕಾರು ಓಡಿಸುವಾಗ ಎರಡನೇ ಗೇರಿನಿಂದ ಮೂರನೇ ಗೇರಿಗೆ ಬರುವ ಹೊತ್ತಿಗೆ ಇಸ್ರೇಲ್ ಚೆಕ್ ಪಾಯಿಂಟ್ ಬಂದು ಕಾರು ನಿಲ್ಲಿಸಬೇಕಾಗುತ್ತದೆ.

ತಮ್ಮ ಮೇಲೆತಾವು ಜೋಕು ಹೇಳುವ ಈ ಹತಾಶೆಯ ಹಿಂದಿನ ಮನೋಧರ್ಮದ ಬಗ್ಗೆ ವಿವರಿಸುತ್ತಾ ಫ್ರೊಫೆಸರ್ ಒಬ್ಬರು ಈ ರೀತಿ ಜೋಕು ಮಾಡಿ ನಗದಿದ್ದರೆ ಎಲ್ಲ ಅಳು ಬಂದೀತೋ ಎಂದು ಜನರಿಗೆ ಆತಂಕ ಎಂದು ಹೇಳಿದರಂತೆ.

ಇರಾಕಿ ಕುರ್ದಿಶ್ ಪ್ರದೇಶಗಳ ಮೇಲೆ ಟರ್ಕಿ ದಾಳಿ

ಟರ್ಕಿ-ಇರಾಕ್ ಗಡಿಪ್ರದೇಶದಲ್ಲಿ ಕುರ್ದಿಶ್ ಜನ ವಾಸಿಸುವ ಭಾಗದ ಮೇಲೆ ಟರ್ಕಿ ಧಾಳಿ ನಡೆಸಿ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿದೆ. ಟರ್ಕಿ ಒಳಗೆ ನೆಲೆಗಳು ಇರುವ ಕುರ್ದಿಶ್ ಗೆರಿಲ್ಲಾಗಳು ಓಡಿಸಿಕೊಂಡು ಹೋಗುವ ಇರಾಖ್ ಪ್ರದೇಶದೊಳಗೆ ಅವರು ನುಗ್ಗಿದ್ದರಿಂದ ಇರಾಕ್ ನೊಳಗೆ ಅನಿವಾರ್ಯವಾಗಿ ನುಗ್ಗಬೇಕಾಯಿತು ಎಂಬುದು ಟರ್ಕಿಯ ವಾದ. ಆದರೆ ದಾಳಿಯಲ್ಲಿ ಬಳಸಲಾದ ಸೈನ್ಯದ ಪ್ರಮಾಣ ನೋಡಿದರೆ ಇದು ಪೂರ್ವ ಯೋಜಿತ ಸುಸಜ್ಜಿತ ದಾಳಿಯಂತೆ ಕಾಣುತ್ತದೆ. ದಾಳಿಯಲ್ಲಿ 35 ಸಾವಿರ ಸೈನಿಕರು ಹಾಗೂ ಟ್ಯಾಂಕ್ ಗಳು ತೋಪುಗಳು, ಯುದ್ಧ ವಿಮಾನಗಳನ್ನು ಬಳಸಲಾಗಿದೆ. ಗೆರಿಲ್ಲಾಗಳ ಸಂಖ್ಯೆ 2500 ಎಂದು ಅಂದಾಜು ಮಾಡಲಾಗಿದೆ.

ಇರಾಕ್ ಈ ದಾಳಿಯ ವಿರುದ್ಧ ಪ್ರತಿಭಟಿಸಿದೆ. ಯುರೋಪಿಯನ್ ದೇಶಗಳು ಈ ದಾಳಿಯನ್ನು ತೀವ್ರ ಖಂಡಿಸಿವೆ. ಆದರೆ ಅಮೇರಿಕ ಈ ಧಾಳಿಯನ್ನು ಖಂಡಿಸಲು ನಿರಾಕರಿಸಿದೆ. ಮಾತ್ರವಲ್ಲ, ತುರ್ಕಿಯ ದಾಳಿಯ ಉದ್ದೇಶಗಳನ್ನು ಅದು 'ಅರ್ಥಮಾಡಿಕೊಳ್ಳ ಬಲ್ಲುದು' ಎಂದು ಹೇಳಿದೆ. ಫ್ರಾನ್ಸ್, ಜರ್ಮನಿಗಳು ಈ ಧಾಳಿ '6 ಅಂತರ್ರಾಷ್ಟ್ರೀಯ ಕಾನೂನು ಹಾಗೂ ಮಾನವ ಹಕ್ಕುಗಳ' ಉಲ್ಲಂಘನೆ ಎಂದು ಖಂಡಿಸಿದೆ. ಆದರೆ ಈವರೆಗೆ ಟರ್ಕಿಯ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಕೆಲವು ಸನ್ನಿವೇಶಗಳು ಕೂಡಲೇ ನಿರ್ಣಯಗಳನ್ನು ಕೈಗೊಳ್ಳುವ ಭದ್ರತಾ ಸಮಿತಿ ಮೌನವಾಗಿದೆ.

ನಾಟೋ ದೇಶಗಳ ಈ ಧೋರಣೆ ಇಬ್ಬಗೆ ನೀತಿಯ ಜ್ವಲಂತ ಉದಾಹರಣೆ. ಈ ಹಿಂದೆ ಉತ್ತರ ಇರಾಕ್ ನಲ್ಲಿರುವ ಕುರ್ದಿಶ್ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡಲು ಆ ಪ್ರದೇಶದಲ್ಲಿ ಇರಾಕಿ ವಿಮಾನಗಳನ್ನು ನಾಟೋ ವಿಮಾನಗಳು ಆಗಾಗ ಕಾದಾಡುತ್ತಿದ್ದವು. ತಮಾಷೆಯೆಂದರೆ ಈ ಉದ್ದೇಶಕ್ಕಾಗಿ ನಾಟೋ ವಿಮಾನಗಳು ಟರ್ಕಿ ನಿಲ್ದಾಣಗಳನ್ನು ಬಳಸುತ್ತಿದ್ದವು. ಈಗ ಅದೇ ಟರ್ಕಿ ಕುರ್ದಿಶ್ ಅಲ್ಪಸಂಖ್ಯಾತರ ಮೇಲೆ ಧಾಳಿ ನಡೆಸಿರುವ ನಾಟೋ ದೇಶಗಳು ಸುಮ್ಮನಿವೆ.

ಈ ಧಾಳಿಕೆ ಟರ್ಕಿಯ ಆಂತರಿಕ ರಾಜಕೀಯ ಬಿಕ್ಕಟ್ಟು ಕಾರಣ ಎನ್ನಲಾಗಿದೆ. ಟರ್ಕಿ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದು ಆಳುವ ಪಕ್ಷ ಇಸ್ಲಾಮಿಕ್ ಮೂಲಭೂತವಾದಿ ವಿರೋಧ ಪಕ್ಷಗಳಿಂದ ತೀವ್ರ ಸವಾಲು ಎದುರಿಸುತ್ತಿದೆ. ಅಲ್ಪ ಸಂಖ್ಯಾತರ ಮೇಲೆ ಧಾಳಿ ಮೂಲಕ ಜನರ ಗಮನ ಬೇರೆಡೆ ಸೆಳೆಯುವುದು ಎಲ್ಲಾ ಆಳುವ ಪಕ್ಷಗಳ ಸುಲಭ ಫಾರ್ಮುಲಾ ತಾನೇ!

ಮದ್ರಾಸಿನಿಂದ ಚಂಡೀಗಢದವರೆಗೆ

ಪುಟ 5ರಿಂದ

ಆವಳಿ ಶತ್ರುಗಳು

ಜನಗಳ ಪ್ರತಿರೋಧ ಹೆಚ್ಚುತ್ತಿರುವಂತೆ ಕಾಂಗ್ರೆಸ್‌ನೊಳಗಿನ ಬಿಕ್ಕಟ್ಟು ಕೂಡಾ ತೀವ್ರ ಸ್ವರೂಪ ಪಡೆಯುತ್ತಿದೆ. ಬಹಳ ವರ್ಷಗಳ ನಂತರ ಮೊದಲಬಾರಿಗೆ ಆ ಪಕ್ಷದೊಳಗೆ ಆರ್ಥಿಕ ನೀತಿಗಳು, ಕೋಮುವಾದದೊಂದಿಗೆ ರಾಜಿ ಹಾಗೂ ಭ್ರಷ್ಟಾಚಾರದ ಬಗ್ಗೆ ಚರ್ಚೆ ಆರಂಭವಾಗಿದೆ. ತನ್ನ ಇಡೀ ಇತಿಹಾಸದಲ್ಲಿ ಹಿಂದೆಂದೂ ಕಾಣದ ಪರಿಸ್ಥಿತಿಯನ್ನು ಅದು ಎದುರಿಸುತ್ತಿದೆ. ಇತ್ತೀಚಿನ ಚುನಾವಣೆಗಳು ಕಾಂಗ್ರೆಸ್ ಜನಗಳಿಂದ ಹೆಚ್ಚೆಚ್ಚಾಗಿ ದೂರ ಸರಿಯುತ್ತಿರುವುದನ್ನು ಬಯಲಿಗೆಳೆದಿದೆ. ಆದರೆ ಗುಜರಾತಿನಂತೆ ಜಾತ್ಯಾತೀ, ಪ್ರಜಾಪ್ರಭುತ್ವ ಪಕ್ಷಗಳು ದುರ್ಬಲವಾಗಿರುವಲ್ಲಿ ಹಾಗೂ ಮಹಾರಾಷ್ಟ್ರದಂತೆ ಅವು ಪರಿಸ್ಥಿತಿ ಎದುರಿಸಲು ಎದ್ದು ನಿಲ್ಲಲು ಅಸಮರ್ಥವಾದ ಕಡೆ ಈಗಲೂ ಬಿಜೆಪಿಗೆ ಜನಗಳ ಅಸಂತೃಪ್ತಿಯನ್ನು ಬಳಸಿಕೊಳ್ಳಲು ಸಾಧ್ಯವಾಗಿದೆ.

ಇಡೀ ಪಶ್ಚಿಮ ಭಾರತವನ್ನು ತನ್ನ ತೆಕ್ಕೆಗೆ ತಗೊಂಡಿರುವ ಬಿಜೆಪಿ ಕೂಟ ಆಗಲೇ "ಬಾಂಗ್ಲಾದೇಶೀಯ" ರನ್ನು 'ಪಾಕಿಸ್ತಾನಿ'ಗಳನ್ನು ಓಡಿಸುವ ಘೋಷಣೆ ಮಾಡಿ ಆಗಲೇ ಭಯಭೀತರಾಗಿರುವ ಅಲ್ಪಸಂಖ್ಯಾತರ ಮೇಲೆ ಗುರಿ ಇಟ್ಟಿವೆ. ಜತೆಗೆ ಹೊರಗಿನವರು ಅಂದರೆ ಮಹಾರಾಷ್ಟ್ರೀಯರಲ್ಲದವರಿಗೆ ಅವಕಾಶವಿಲ್ಲ ಎಂದೂ ಹೇಳಿದೆ. ಆರ್.ಎಸ್.ಎಸ್. ಪ್ರಕಾರ ಇದು ಹಿಂದುತ್ವದ ವಿಜಯ. ಆದರೆ ಮಹಾರಾಷ್ಟ್ರದಲ್ಲಿ ಶಿವಸೇನೆ ಪ್ರಮುಖ ಪಕ್ಷವಾದ್ದರಿಂದ ಬಿಜೆಪಿ ತನ್ನ ಈ ಹಿಂದಿನ 'ರಾಷ್ಟ್ರವಾದ'ದ ನಿಲುವನ್ನು ಕಾಪಾಡಿಕೊಳ್ಳುವುದು ಕಷ್ಟವಾಗಬಹುದು.

ಇದಕ್ಕೆ ಪ್ರತಿಯಾಗಿ ಮುಸ್ಲಿಂ ಮೂಲಭೂತವೂ ಬೆಳೆಯಬಹುದು. ಇದು ಒಟ್ಟಾಗಿ ದೇಶಕ್ಕೆ ಎಡ-ಪ್ರಜಾಪ್ರಭುತ್ವ ಆಂದೋಲನಕ್ಕೆ ಅಪಾಯಕಾರಿ.

ಆದರೆ ಜನರಿಗೆ ಜಾತ್ಯಾತೀತ ಪರಿಹಾರ ಬೇಕು ಎಂಬುದೂ ಈ ಚುನಾವಣೆಗಳಲ್ಲಿ ವ್ಯಕ್ತವಾಗಿದೆ.

ಕ್ಲಿಷ್ಟ ಸನ್ನಿವೇಶದಲ್ಲಿ

ಮುಂಬರುವ ಸನ್ನಿವೇಶ ಬಹಳ ಕ್ಲಿಷ್ಟವಾಗಿರುತ್ತದೆ. ಕೋಮುವಾದ ಮತ್ತು ದೇಶದ ಸಾರ್ವಭೌಮತೆಯನ್ನು ಒತ್ತೆಯಿಡುವ ಆರ್ಥಿಕ ನೀತಿಗಳ ವಿರುದ್ಧ ಅಣಿನೆರೆಸಬಹುದಾದವರನ್ನೆಲ್ಲಾ ಅಣಿನೆರೆಸದೇ ಇದ್ದರೆ ಒಂದು ವಾಸ್ತವಿಕ ಎಡ-ಪ್ರಜಾಪ್ರಭುತ್ವ ಪರ್ಯಾಯವನ್ನು ದೇಶದ ಮುಂದಿಡಲು ನಮಗೆ ಆಗಲಿಕ್ಕಿಲ್ಲ. ಇದನ್ನು ಮಾಡಲು ತಕ್ಷಣದ ಸವಾಲನ್ನು ಎದುರಿಸಲು ನಾವು ಈಗಿನ ರಾಜಕೀಯ ಬೆಳವಣಿಗೆಗಳಿಂದಾಗಿ ಅಸ್ತಿತ್ವಕ್ಕೆ ಬಂದಿರುವ ಪ್ರಾದೇಶಿಕ ಶಕ್ತಿಗಳನ್ನು, ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸಬೇಕಾಗಿದೆ.

ಇನ್ನೂ ಹಲವಾರು ಸಮಸ್ಯೆಗಳು ಎದುರು ಬರುತ್ತವೆ. ನಮ್ಮ ವಿದೇಶಾಂಗ ನೀತಿಯ ಮೇಲೆ ಸಾಮ್ರಾಜ್ಯಶಾಹಿ ಒತ್ತಡಗಳು, ಹಿಂದುಳಿದ ಜಾತಿಗಳ ಪರಿಸ್ಥಿತಿ ಸುಧಾರಿಸುವ ಬದಲು. ಅದರಿಂದ ಸಂಕುಚಿತ ಚುನಾವಣಾ ಲಾಭ ಪಡೆಯಲು ಜಾತಿ ಭಾವನೆಯ ಬಳಕೆ, ಸರಕಾರದಿಂದ ವಿವಿಧ ಬುಡಕಟ್ಟು ಜನಾಂಗಗಳ ಬಗ್ಗೆ ಉಪೇಕ್ಷೆ, ಕಾಶ್ಮೀರ, ಈಶಾನ್ಯ ಭಾರತಗಳಲ್ಲಿ ಪ್ರತ್ಯೇಕತಾವಾದಿಗಳನ್ನು ಎದುರಿಸುವಲ್ಲಿ ಸರಕಾರದ ವಿಫಲತೆ, ಸಂಸತ್ತು ಮತ್ತಿತರ ಪ್ರಜಾಪ್ರಭುತ್ವ ಸಂಸ್ಥೆಗಳ ಅವಮಾನ, ಎಲ್ಲಕ್ಕೂ ಮಿಗಿಲಾಗಿ ಭ್ರಷ್ಟಾಚಾರದ ತಾಂಡವ.

ಈ ಎಲ್ಲಾ ಪ್ರಶ್ನೆಗಳನ್ನು ಮಹಾಧಿವೇಶನದಲ್ಲಿ ಆಮೂಲಾಗ್ರವಾಗಿ ಚರ್ಚಿಸಿ ಮುಂಬರುವ ವರ್ಷಗಳಲ್ಲಿ ನಮ್ಮ ಕೆಲಸಕ್ಕೆ ದಿಕ್ಕು ತೋರುವ ರಾಜಕೀಯ ನಿರ್ಣಯವನ್ನು ಅಂಗೀಕರಿಸಲಾಗುವುದು. ವಿವಿಧ ರಂಗಗಳಲ್ಲೂ ಪಕ್ಷದ ಕೆಲಸ ಅವುಗಳಲ್ಲಿನ ಮಾನ್ಯತೆಗಳನ್ನೂ ಮಹಾಧಿವೇಶನ ಚರ್ಚಿಸಿ ಸರಿಪಡಿಸಲು ಕಾರ್ಯಕ್ರಮಗಳನ್ನು ಸೂಚಿಸಲಿದೆ.

ಸಾಮೂಹಿಕ ಕ್ರಾಂತಿಕಾರಿ ಪಕ್ಷ ಎಂದರೆ...........

ನಿರ್ದಿಷ್ಟವಾಗಿ ಪಕ್ಷದ ಸಂಘಟನೆಯ ಸ್ಥಿತಿ-ಗತಿಯನ್ನು ಮಹಾಧಿವೇಶನ ಚರ್ಚಿಸಲಿದೆ. ಮುಂಬರುವ ಸವಾಲುಗಳನ್ನು ಎದುರಿಸಲು ಎಡ ಐಕ್ಯತೆ ಬಲಗೊಳಿಸಿ ಬೇರೆಲ್ಲಾ ಶಕ್ತಿಗಳನ್ನು ಒಗ್ಗೂಡಿಸಲು ಇದು ಅತ್ಯಗತ್ಯ. ಸಾಲ್ಕಿಯಾದಲ್ಲಿ ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷ ಕಟ್ಟುವ ಘೋಷಣೆ ನೀಡಲಾಯಿತು. ಪಕ್ಷವನ್ನು ಸೈದ್ಧಾಂತಿಕವಾಗಿ ಬಲಗೊಳಿಸಿ, ಅದರ ಸಾಮೂಹಿಕ ಪ್ರಭಾವವನ್ನು ವಿಸ್ತರಿಸಿ ಇದನ್ನು ಮುನ್ನಡೆಸಬೇಕಾಗಿದೆ. ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷವೆಂದರೆ ಸಾಮೂಹಿಕವಾಗಿ ಸದಸ್ಯತ್ವ ನೊಂದಾಯಿಸಿಕೊಳ್ಳುವುದು ಎಂದರ್ಥವಲ್ಲ, ಕ್ರಾಂತಿಕಾರಿ ಪಕ್ಷದ ಸದಸ್ಯತ್ವ ಕ್ರಾಂತಿಕಾರಿ ಪ್ರಜ್ಞೆಯ ಬೆಳವಣಿಗೆ ಹಾಗೂ ಕಾರ್ಯಕರ್ತರ ರಾಜಕೀಯ ಬೆಳವಣಿಗೆಯೊಂದಿಗೆ ಬೆಳೆಯುತ್ತದೆ. ಆಮೂಲಕ ತನ್ನ ಸಾಮೂಹಿಕ ಪ್ರಭಾವ ವಿಸ್ತರಿಸುತ್ತದೆ.

ಈಗಿನ ಕಷ್ಟಕರ ಪರಿಸ್ಥಿತಿಯಲ್ಲಿ ಕ್ರಾಂತಿಗಾಗಿ ತಮ್ಮನ್ನು ಸಮರ್ಪಿಸಿಕೊಳ್ಳುವ ಹೊಸ ಜನಗಳು ಬಹಳಷ್ಟು ಇದ್ದಾರೆ. ಅವರು ನಮ್ಮ ಶ್ರೀಮಂತ ಬಂಡವಾಳ. ಇವನ್ನು ಪೂರ್ಣವಾಗಿ ಬಳಸಬೇಕು.

ಅಂತರ್ರಾಷ್ಟ್ರೀಯವಾಗಿ

14ನೇ ಮಹಾಧಿವೇಶನಕ್ಕೆ ಹೋಲಿಸಿದರೆ ಸಾಮ್ರಾಜ್ಯಶಾಹಿ ಧಾಳಿ ಇನ್ನಷ್ಟು ತೀವ್ರಗೊಂಡಿದೆ. ಜತೆಗೆ ಬಂಡವಾಳಶಾಹಿ ಮಾನವ ಕುಲದ ಏಕೈಕ ಭವಿಷ್ಯ ಎಂಬ ಮಾತೂ ಸುಳ್ಳಾಗಿದೆ. ಹಿಂದಿನ ಸಮಾಜವಾದಿ ದೇಶಗಳಲ್ಲಿ ಜನ ಹಿಂದಿನ ವ್ಯವಸ್ಥೆ ಉತ್ತಮವಾಗಿತ್ತು ಎಂಬ ತೀರ್ಮಾನಕ್ಕೆ ಬರಲಾರಂಭಿಸಿದ್ದಾರೆ. ರಶ್ಯಾದ ಸಂಸತ್ತು ಡೂಮಾದಲ್ಲಿ ರಷ್ಯನ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಒಂದು ಗಮನಾರ್ಹ ಶಕ್ತಿಯಾಗುತ್ತಿದೆ.

ಹಂಗರಿ, ಪೋಲಂಡ್, ಬಲ್ಗೇರಿಯಾಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಿಂದಿನ ಕಮ್ಯುನಿಸ್ಟರು ಅಧಿಕಾರಕ್ಕೆ ಬರುತ್ತಿದ್ದಾರೆ. ಈಗಲೂ ಹಿಂದಿದ್ದ ಸಮಾಜವಾದಿ ಜಗತ್ತಿನ ಮೂರನೇ ಎರಡರಷ್ಟು ಇರುವ ಸಮಾಜವಾದೀ ದೇಶಗಳಾದ ಚೀನಾ, ಉತ್ತರ ಕೋರಿಯಾ, ವಿಯೆಟ್ನಾಂ, ಟಾವೋಸ್ ಹಾಗೂ ಕ್ಯೂಬಾದಲ್ಲಿ ತಮ್ಮದೇ ರೀತಿಯಲ್ಲಿ ನ್ಯೂನತೆಗಳನ್ನು ಸರಿಪಡಿಸಿಕೊಂಡು ತಮ್ಮ ಸಮಾಜವಾದೀ ಆರ್ಥಿಕಗಳನ್ನು ಕಟ್ಟುತ್ತಿದ್ದಾರೆ. ಅತ್ತ ಅಮೇರಿಕಾ ಈ ದೇಶಗಳಲ್ಲಿ ಇತಿಹಾಸದ ಮುಳ್ಳನ್ನು ಹಿಂದಕ್ಕೆ ತಿರುಗಿಸುವ ಶತಪ್ರಯತ್ನವನ್ನು ನಡೆಸಿದೆ.

ಜಗತ್ತಿನ ಇತರೆಡೆ ಕಮ್ಯುನಿಸ್ಟ್ ಆಂದೋಲನ ತಲೆಯೆತ್ತಿ ನಿಲ್ಲಲಾರಂಭಿಸಿದೆ. ಹಿಂದಿನ ಶರಣಾಗತಿ ಹೋಗುತ್ತಿದೆ, ಮತ್ತೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಸಮರ್ಥತೆಯ, ಸಮಂಜಸತೆಯ ಬಗ್ಗೆ ಚರ್ಚೆ ನಡೆಯಲಾರಂಭಿಸಿವೆ.

ಕೈಗಾರಿಕೀಕೃತ ದೇಶಗಳು ತಮ್ಮ ಅಭಿವೃದ್ಧಿಯ ಹೊರೆಯನ್ನು ಅಭಿವೃದ್ಧಿ ಹೊಂದದ ದೇಶಗಳ ಮೇಲೆ ಹಾಕಲು, ತಮ್ಮ ದೇಶಗಳಲ್ಲಿ ಬಂಡವಾಳ ಹಾಗೂ ಶ್ರಮಶಕ್ತಿಯ ನಡುವಿನ ವೈರುಧ್ಯವನ್ನು ಅನಭಿವೃದ್ಧ ದೇಶಗಳ ಮೇಲೆ ಹೊರೆ ಹಾಕಿ ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಹೀಗೆ ಒಂದೆಡೆ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವಿನ ವೈರುಧ್ಯವೂ ಹೆಚ್ಚಿಸುತ್ತಿದ್ದಾರೆ. ಇನ್ನೊಂದು ಕಡೆ ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯವನ್ನು ತೀವ್ರಗೊಳ್ಳುತ್ತಿದೆ.

ಎಲ್ಲಾ ನಾಲ್ಕು ವೈರುಧ್ಯಗಳು ತೀವ್ರಗೊಳ್ಳುತ್ತಿರುವ ಪ್ರಸ್ತುತ ಸನ್ನಿವೇಶ ಮತ್ತೊಮ್ಮೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಸಮಂಜಸತೆಯನ್ನು ಸಾರ್ಥಕತೆಯನ್ನು ಬಿಂಬಿಸುತ್ತಿದೆ; ಪ್ರತಿಯೊಂದು ದೇಶದಲ್ಲಿ ನಿರ್ದಿಷ್ಟ ಪರಿಸ್ಥಿತಿಗೆ ನಿರ್ದಿಷ್ಟವಾಗಿ ಅನ್ವಯಿಸುವ ಈ ಒಂದು ಸಿದ್ಧಾಂತದ ಮೂಲಕ ಮಾತ್ರವೇ ಮಾನವನಿಂದ ಮಾನವನ ಸುಲಿಗೆಯನ್ನು ಅಂತ್ಯಗೊಳಿಸಲು ಸಾಧ್ಯ ಎಂಬುದನ್ನು ತೋರಿಸುತ್ತಿದೆ. ಈ ರೀತಿ ಸುಲಿಗೆಯ ಅಂತ್ಯವಾಗದೆ ಉತ್ಪಾದಕ ಶಕ್ತಿಗಳೂ ಬೆಳೆಯಲಾರವು, ವಿಶ್ವದಲ್ಲಿ ಶಾಂತಿಯೂ ನೆಲೆಸಲಾರದು...

15ನೇ ಮಹಾಧಿವೇಶನ ಈ ಎಲ್ಲಾ ಪ್ರಶ್ನೆಗಳನ್ನು ಚರ್ಚಿಸಿ ನಮ್ಮ ಕಳೆದ ಮೂರು ವರ್ಷಗಳ ಅನುಭವಗಳ ಆಧಾರದ ಮೇಲೆ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಸನ್ನಿವೇಶಗಳಲ್ಲಿ ನಮ್ಮ ಮಧ್ಯಪ್ರವೇಶಕ್ಕೆ ಅಗತ್ಯವಾದ ಒಂದು ನೀತಿಯನ್ನು ರೂಪಿಸಲಿದೆ. ಈ ಮಹಾಧಿವೇಶನ ಪಕ್ಷವನ್ನು ಇನ್ನಷ್ಟು ಏಕೀಕೃತಗೊಳಿಸಲು ಆ ಮೂಲಕ ತನ್ನ ಪಾತ್ರ ವಹಿಸುವಂತೆ ಮಾಡಲು ಇನ್ನಷ್ಟು ನೆರವು ನೀಡುತ್ತದೆಯೆಂಬ ಭರವಸೆ ನಮಗಿದೆ.

ದೇಶದ ಕಮ್ಯುನಿಸ್ಟ್ ಆಂದೋಲನ ಇತಿಹಾಸದಲ್ಲಿ ಈ ಮಹಾಧಿವೇಶನ ಇನ್ನೊಂದು ಮೈಲುಗಲ್ಲಾಗಲಿದೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ನೇಕಾರರ ಸಲಹಾ ಸಮಿತಿ ಸರ್ಕಾರದ ಭರವಸೆ

ಕೈ ಮಗ್ಗದ ನೇಕಾರರು ಮೇಲಿಂದ ಮೇಲೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ರಾಜ್ಯ ಜವಳಿ ಮಂತ್ರಿಗಳು ಅಧ್ಯಕ್ಷರಾಗಿರುವ ರಾಜ್ಯ ಮಟ್ಟದ ಸಲಹಾ ಸಮಿತಿಯೊಂದನ್ನು ರಚಿಸಲು ಸರ್ಕಾರ ನಿರ್ಧರಿಸಿದೆ ಎಂದು ಜವಳಿ ಸಚಿವರಾದ ಶ್ರೀಯುತ ಪಿ.ಸಿ. ಸಿದ್ದನಗೌಡರು ನೇಕಾರರಿಗೆ ಭರವಸೆ ನೀಡಿದ್ದಾರೆ. ಮಾರ್ಚ್ 21 ರಂದು ರಾಜ್ಯದ ವಿವಿಧ ಜಿಲ್ಲೆಗಳಿಂದ ಬೆಂಗಳೂರಿಗೆ ಆಗಮಿಸಿ ವಿಧಾನಸೌಧದೆದುರು ಧರಣಿ ನಡೆಸುತ್ತಿದ್ದ ಸಾವಿರಾರು ಜನ ಕೈಮಗ್ಗದ ನೇಕಾರರನ್ನು ಉದ್ದೇಶಿಸಿ ಮಾತನಾಡುತ್ತಾ ಸಚಿವರು ಈ ಭರವಸೆ ನೀಡಿದರು. ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಕೈಮಗ್ಗ ನೇಕಾರ ಕಾರ್ಮಿಕರ ಸಮನ್ವಯ ಸಮಿತಿಯು ನೇಕಾರರ "ಬೆಂಗಳೂರು ಚಲೋ" ಚಳುವಳಿಯನ್ನು ಸಂಘಟಿಸಿತ್ತು.

ನೇಕಾರರ ಸರಳೀಕೃತ "ತ್ರಿಫ್ಟ್ ಫಂಡ್" ಯೋಜನೆಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ ಎಂದು ಹೇಳಿದ ಸಚಿವರು, ನೇಕಾರರಿಗೆ ಹಸಿರು ಕಾರ್ಡ್ ವಿತರಣೆ ಮತ್ತು ವೃದ್ಧಾಪ್ಯ ವೇತನ ಯೋಜನೆ ಜಾರಿಗೊಳಿಸಲು ಶ್ರೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು. ರಾಜ್ಯದ ನೇಕಾರರ ಸಮಗ್ರ ಗಣತಿ ನಡೆಸಲು ಸರ್ಕಾರ ಉದ್ದೇಶಿಸಿದೆ ಎಂದರು. ನೇಕಾರರ ವೇತನ ಹೆಚ್ಚಳದ ಬೇಡಿಕೆಯನ್ನು ಈಡೇರಿಸಲು ಹತ್ತು ದಿನಗಳ ಸಮಯವಕಾಶವನ್ನು ಕೋರಿದರು.

ಇದಕ್ಕೂ ಮೊದಲು ಕೈಮಗ್ಗ ನೇಕಾರರು ಚಿಕ್ಕಲಾಲ್ ಬಾಗ್ ನಿಂದ ಕಬ್ಬನ್ ಪಾರ್ಕ್ ವರೆಗೆ ಮೆರವಣಿಗೆ ನಡೆಸಿದರು. ಸಮಿತಿಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಸತ್ಯಾಗ್ರಹ ನಡೆಸುತ್ತಿದ್ದ ನೇಕಾರರನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಅವರು ಮಾತನಾಡಿ ಜನತಾದಳ ಸರ್ಕಾರ ಹಿಂದಿನ ಕಾಂಗ್ರೆಸ್ ಸರ್ಕಾರದಂತೆ ನೇಕಾರರಿಗೆ ಕೇವಲ ಭರವಸೆಗಳನ್ನು ಕೊಡುವುದನ್ನು ನಿಲ್ಲಿಸಿ ನೇಕಾರರಿಗೆ ಕಾಯಂ ಕೆಲಸ ಮತ್ತು ಜೀವನಾವಶ್ಯಕ ಕೂಲಿ ಮೊದಲಾದ ಮೂಲಭೂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಿಸಬೇಕೆಂದು ಒತ್ತಾಯಿಸಿದರು.

ಅಂಗನವಾಡಿ ಕಾರ್ಯಕರ್ತೆಯರ ಪಾರ್ಲಿಮೆಂಟ್ ಚಲೋ

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಹಲವಾರು ವರ್ಷಗಳಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ ದುಡಿಯುತ್ತಿದ್ದರೂ ಇವರಿಗೆ ಕೆಲಸದ ಭದ್ರತೆಯಲ್ಲಿ, ಹೆಚ್ಚಿನ ವೇತನ ಮತ್ತು ಕನಿಷ್ಠ ಸೌಲಭ್ಯಗಳು ಇಲ್ಲದಿದ್ದರಿಂದ ಇವರನ್ನು ಖಾಯಂಗೊಳಿಸಬೇಕೆಂದೂ, ಸರ್ಕಾರಿ ಕ್ಷೇತ್ರಗಳಲ್ಲಿ ಖಾಯಂ ಹುದ್ದೆಗಳನ್ನು ಕೊಡಬೇಕೆಂದೂ, ಸರ್ಕಾರಿ ನೌಕರರೆಂದೂ ಪರಿಗಣಿಸಿ, ವೇತನ ಹೆಚ್ಚಿಸುವಂತೆ ಮಾಡಲು, ಅಂಗನವಾಡಿ ಕೇಂದ್ರಗಳ ಖಾಸಗೀಕರಣವನ್ನು ನಿಲ್ಲಿಸುವಂತೆ ಮಾಡಲು ಮೇ ೫ ರಂದು ಸಂಯುಕ್ತ ಸಂಘರ್ಷ ಸಮಿತಿಯ ಆಶ್ರಯದಲ್ಲಿ ನವದೆಹಲಿಯ ಪಾರ್ಲಿಮೆಂಟ್ ಎದುರು ಧರಣಿಯನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿ ಮಾಡಬೇಕೆಂದು ಸಿಐಟಿಯು ಸಂಯೋಜಿತ ಅಂಗನವಾಡಿ ನೌಕರರ ರಾಜ್ಯ ಸಮನ್ವಯ ಸಮಿತಿ ವಿನಂತಿಸಿದೆ.

ಇದು ನಿಮಗೆ ಗೊತ್ತೆ?

ಡಾ. ಮನಮೋಹನ್ ಸಿಂಗ್‌ರ ಐದನೇ ಬಜೆಟ್ ಮರೆಮಾಚಿರುವ ವಾಸ್ತವಾಂಶಗಳ ಒಂದು ಸ್ಯಾಂಪಲ್.

* ಕೈಗಾರಿಕಾ ಉತ್ಪಾದನೆಯ ಹೆಚ್ಚಳ ಪ್ರಸುತ ಆರ್ಥಿಕ ವರ್ಷದಲ್ಲಿ 8.7ಶೇ. ದರವನ್ನು ಉಳಿಸಿಕೊಂಡಿದೆ ಎಂದು ಬಜೆಟ್ ಬೆನ್ನು ತಟ್ಟಿಕೊಂಡಿದೆ.

ವಾಸ್ತವಾಂಶ: ರಾವ್-ಸಿಂಗ್ ಸುಧಾರಣೆ ಆರಂಭವಾದಂದಿನಿಂದ ಅಂದರೆ ಕಳೆದ ನಾಲ್ಕು ವರ್ಷಗಳಲ್ಲಿ ಸರಾಸರಿ ತಗೊಂಡಿದೆ ಕೈಗಾರಿಕಾ ಉತ್ಪಾದನೆಯ ಹೆಚ್ಚಳದ ಸರಾಸರಿ ವಾರ್ಷಿಕ ದರ ಕೇವಲ ಶೇ. 2

* ಬಂಡವಾಳ ಸರಕುಗಳ ಉತ್ಪಾದನೆ ಶೇ. 24 ದರದಲ್ಲಿ ಹೆಚ್ಚುತ್ತಿದೆ ಎಂದು ಡಾ. ಸಿಂಗ್ ಹೇಳಿಕೊಂಡಿದ್ದಾರೆ.

ವಾಸ್ತವಾಂಶ: ಹಿಂದಿನ ಮೂರು ವರ್ಷಗಳಲ್ಲಿ ಬಂಡವಾಳ ಸರಕುಗಳ ಉತ್ಪಾದನೆ ನಿಜವಾಗಿ ಇಳಿಮುಖವಾಗಿದೆ. ಈ ವರ್ಷದ "ಭಾರೀ" ಹೆಚ್ಚಳವನ್ನು ಗಮನಕ್ಕೆ ತಗೊಂಡರೂ ಅದು 'ಸುಧಾರಣೆ' ಆರಂಭವಾದ ಹಿಂದಿನ ವರ್ಷ(1990-91)ದ ಉತ್ಪಾದನೆಗಿಂತ ಕಮ್ಮಿ!

* ಆಂತರಿಕ ಉಳಿತಾಯ ದರ 1991ರ ಮೊದಲು 24ಶೇ. ಇದ್ದರೂ ಈ ನಾಲ್ಕು ವರ್ಷಗಳಲ್ಲಿ ಶೇ. 20ಕ್ಕಿಳಿದಿದೆ.

ಈ ಬಗ್ಗೆ ಬಜೆಟ್ ನದ್ದು ದಿವ್ಯಮೌನ! ಕೆಲವು ದಿನಗಳ ಹಿಂದೆ "ಕೇಂದ್ರ ಅಂಕಿ-ಅಂಶ ಸಂಘಟನೆ" (CSO) ಈ ಅಂಶವನ್ನು ಬಹಿರಂಗ ಪಡಿಸಿದಾಗ ಹಣಕಾಸು ಮಂತ್ರಿಗಳು ಸಿಟ್ಟಿಗೆದ್ದು ಈ ಅಂಕಿ-ಅಅಂಶದ ಆಧಾರ ಸರಿಯಿಲ್ಲ ಎಂದರಂತೆ. ಆದರೆ 1991ರ ಮೊದಲಿನ ಅಂಕಿ-ಅಂಶ ಹಾಗೂ ಈಗಿನ ಅಂಕಿ-ಅಂಶ ಇವುಗಳೆರಡರ ಆಧಾರವೂ ಒಂದೇ CSO ಸಮರ್ಥಿಸಿಕೊಂಡಿದೆ.

* 20 ಶತಕೋಟಿ ಡಾಲರುಗಳ ವಿದೇಶೀ ವಿನಿಮಯ ಭಂಡಾರ ಈಗ ನಮ್ಮಲ್ಲಿದೆ ಎಂದು ಬಜೆಟ್ ಹೆಮ್ಮೆಯಿಂದ ಹೇಳಿಕೊಂಡಿದೆ.

ವಾಸ್ತವಾಂಶ: ಈ ಭಂಡಾರದ ಮುಖ್ಯ ಭಾಗ ವಿದೇಶೀ ಸಾಲದಿಂದ ಬಂದದ್ದು ಎಂದು ಮಾತ್ರ ಬಜೆಟ್ ಹೇಳುವುದಿಲ್ಲ, ಈಗ ಭಾರತದ ವಿದೇಶಿ ಸಾಲ 92 ಶತಕೋಟ ಡಾಲರುಗಳು. ವಿಶ್ವದ ಅತೀ ಹೆಚ್ಚು ವಿದೇಶೀ ಸಾಲ ಮಾಡಿಕೊಂಡ ಮೂರು ದೇಶಗಳಲ್ಲಿ ನಾವು ಸೇರಿದ್ದೇವೆ ಎಂಬ ಬಗ್ಗೆಯಂತೂ ಬಜೆಟ್ ನಲ್ಲಿ ಎಲ್ಲೂ ಪ್ರಸ್ತಾಪವೂ ಕಾಣದು.

* ಇದು 'ಬಡತನ-ವಿರೋಧಿ' ಬಜೆಟ್ ಗ್ರಾಮೀಣ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಪ್ರಕಟಪಡಿಸಿರುವ ಬಜೆಟ್ ಎಂದೆಲ್ಲಾ ಹೇಳಲಾಗಿದೆ.

ವಾಸ್ತವಾಂಶ: ಹೆಚ್ಚಿನ ಯೋಜನೆಗಳು 'ಗ್ರಾಮೀಣ ಅಭಿವೃದ್ಧಿ'ಯ ವ್ಯಾಪ್ತಿಯಲ್ಲಿ ಬರುವಂತವು. ಆದರೂ ಕೇಂದ್ರ ಯೋಜನೆಗಿಟ್ಟ ಹಣದಲ್ಲಿ ಈ ಬಾಬ್ತಿನಲ್ಲಿ ಬರುವ ಹಣ 7700 ಕೋಟಿ ರೂ. ಕಳೆದ ವರ್ಷದ ಪರಿಷ್ಕೃತ ಹಣ ರೂ. 7320 ಕೋಟಿ ರೂ. ಅಂದರೆ ಕೇವಲ ಶೇ. 5 ಏರಿಕೆ! ಶೇ. 10 ಹಣದುಬ್ಬರ ಲೆಕ್ಕ ಹಾಕಿದರೆ ನಿಜವಾಗಿ ಶೇ. 5 ಇಳಿತ! ಈ ಬಜೆಟ್ ಒಟ್ಟು 2390 ಕೋಟಿ ರೂ.ಗಳ ತೆರಿಗೆ ರಿಯಾಯ್ತಿ ನೀಡಿದೆ. ಇದರಲ್ಲಿ ಬಹಳ ಪಾಲು ಶ್ರೀಮಂತರ ಬಳಕೆಯ ಸರಕುಗಳಿಗೆ -ಏರ್ ಕಂಡೀಶನಿಂಗ್, ಸೌಂದರ್ಯವರ್ಧಕಗಳು, ಕಲರ್ ಟಿ.ವಿಗಳು, ಕಂಪ್ಯೂಟರ್‌ಗಳ ತೆರಿಗೆ ಇಳಿದಿದೆ. ಇದರಿಂದ ಬಡವರ ಹೊರೆ ಕಮ್ಮಿಯಾಗುತ್ತದೆಯೇ?

* 1994-95ರ ಪರಿಷ್ಕೃತ ಹಣಕಾಸು ಕೊರತೆ ಶೇ.6.7 ಇದು ಬಜೆಟ್ ಅಂದಾಜಿಗಿಂತ ಕೇವಲ 0.7ಶೇ. ಜಾಸ್ತಿ ಎಂದಿದ್ದಾರೆ ಹಣಕಾಸು ಮಂತ್ರಿಗಳು.

ವಾಸ್ತವಾಂಶ: ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟದಿಂದ ಬಂದ ಹಣವನ್ನು ಲೆಕ್ಕಕ್ಕೆ ತಗೊಂಡಿದ್ದರಿಂದ ಹಣಕಾಸು ಕೊರತೆ ಶೇ. 6.7 ನಿಜವಾಗಿ ಹಣಕಾಸು ಕೊರತೆ ಲೆಕ್ಕ ಹಾಕುವಾಗ ಇದನ್ನು ತಗೊಳ್ಳದಿದ್ದರೆ ಅದು ಶೇ. 7.3. ಇದು ರಾವ್-ಸಿಂಗ್‌ರ "ಸುಧಾರಣೆ"ಗಳು ಆರಂಭವಾಗುವುದಕ್ಕಿಂತ ಮೊದಲು ಇದ್ದ ಹಣಕಾಸು ಕೊರತೆಗಿಂತ ಕಮ್ಮಿಯೇನಲ್ಲ, ಅಂದರೆ ನಾಲ್ಕು ವರ್ಷಗಳ "ಸುಧಾರಣೆ" ಜನಗಳಿಗಂತೂ ಕಷ್ಟಕೋಟಲೆಗಳನ್ನು ತಂದಿದೆ, "ಸುಧಾರಣೆ"ಯ ಬೆಂಬಲಿಗರು ಹೇಳಿಕೊಂಡಿರುವಂತೆ "ಹಣಕಾಸು ಶಿಸ್ತ"ನ್ನೂ ತಂದಿಲ್ಲ!

* ಬಿಕ್ಕಟ್ಟಿನ ಅಂಚಿನಲ್ಲಿದ್ದ ದೇಶದ ಹಣಕಾಸು ಸ್ಥಿತಿ ಈಗ ಬಹಳಷ್ಟು ಸುಧಾರಿಸಿದೆ ಎಂದೆಲ್ಲಾ ಹಣಕಾಸು ಮಂತ್ರಿಗಳು ಪದೇ ಪದೇ ಬೆನ್ನುತಟ್ಟಿಕೊಂಡಿದ್ದಾರೆ.

ವಾಸ್ತವಾಂಶ: ಇದಂತೂ ಶುದ್ಧ ಸುಳ್ಳು. ಏಕೆಂದರೆ ಯಾವುದೇ ಸರಕಾರ ದೇಶದ ಹಣಕಾಸನ್ನು ಎಷ್ಟು ದಕ್ಷವಾಗಿ ನಡೆಸಿಕೊಂಡು ಬರುತ್ತಿದೆ ಎಂಬುದರ ಸಂಕೇತ. ಬಟೆಟ್ಟಿನಲ್ಲಿ ಕಾಣುವ "ರೆವಿನ್ಯೂ ಕೊರತೆ" "ಸುಧಾರಣೆ"ಯ ಅಂದರೆ 1991ರ ಮೊದಲು ನಾಲ್ಕು ವರ್ಷಗಳು 1987-88 ರಿಂದ 1990-91 ರವರೆಗೆ ಅನುಕ್ರಮವಾಗಿ ಇದು ಒಟ್ಟು ಆಂತರಿಕ ಉತ್ಪಾದನೆಯ ಶೇ. 2.7, 2.7, 2.6, 3.5 ಶೇಕಡಾ ಇತ್ತು, 1991-92ರ ನಂತರದ ಈ "ಸುಧಾರಣೆ"ಯ ನಾಲ್ಕು ವರ್ಷಗಳಲ್ಲಿ ಇದು 2.6, 2.6, 4.2, 3.8 ಶೇಕಡಾ ಆಗಿದೆ ಹಣಕಾಸಿನ ನಿರ್ವಹಣೆಯ ದಕ್ಷತೆ "ಸುಧಾರಣೆ"ಯಿಂದ ಹೆಚ್ಚಿಲ್ಲ, ಕುಸಿದಿದೆ.

* ಭಾರತ ವಿಶ್ವದಲ್ಲಿ ಒಂದು ಆರ್ಥಿಕ ಶಕ್ತಿಯಾಗಿ ಬೆಳೆದು ಬರುತ್ತಿದೆ ಎಂದು ಡಾ. ಸಿಂಗ್ ಎದೆಯುಬ್ಬಿಸಿ ಹೇಳಿದ್ದಾರೆ.

ವಾಸ್ತವಾಂಶ: ವಿಶ್ವದಲ್ಲಿ ಆರ್ಥಿಕ ಶಕ್ತಿಯಾಗಿ ಮೂಡಿಬರುತ್ತಿರುವ, ಉನ್ನತ-ಬೆಳವಣಿಗೆಯ ಆರ್ಥಿಕ ಹೊಂದಿರುವ ಪ್ರತಿಯೊಂದು ದೇಶದಲ್ಲೂ ಬಂಡವಾಳ ಹೂಡಿಕೆಯ ಅನುಪಾತ ೩೫ರಿಂದ ೪೦ಶೇ. ಇದೆ. ಭಾರತದಲ್ಲಿ ಈ ಅನುಪಾತ ಇದರ ಅರ್ಧದಷ್ಟು. ಈ ಅನುಪಾತವನ್ನು ಹೆಚ್ಚಿಸಬೇಕಾದರೆ, ಖಾಸಗೀ ಬಂಡವಾಳ ಹೂಡಿಕೆಯನ್ನು ಕೂಡಾ ಆಕರ್ಷಿಸಬೇಕಾದರೆ ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಬೇಕಾಗುತ್ತದೆ. ಆದರೆ ಈ ಬಜೆಟ್ ಹಾಗೂ ಹಿಂದಿನ ಬಜೆಟ್ ಗಳು ವಾಸ್ತವವಾಗಿ ಇದನ್ನು ಕಡಿಮೆ ಮಾಡಿರುವಾಗ "ಆರ್ಥಿಕ ಶಕ್ತಿ"ಯಾಗುವ ಹೆಗ್ಗಳಿಕೆ ಕೇವಲ ಬೊಗಳೆ.

ತಿದ್ದುಪಡಿ ಮಾರ್ಚ್ 26ರ ಸಂಚಿಕೆಯ ಪುಟ 5 ರಲ್ಲಿ ಬಜೆಟ್ ಬಗ್ಗೆ ಪತ್ರಿಕೆಗಳಪ್ರತಿಕ್ರಿಯೆಯನ್ನು ಪ್ರಕಟಿಸಿದ್ದೆವು. ಅವುಗಳಲ್ಲಿ ಈ ಕೆಳಗಿನ ಎರಡು ಮುದ್ರಣ ದೋಷಗಳಿವೆ.

ಮೊದಲ ಕಾಲಂನ ನಾಲ್ಕನೇ ಪ್ರತಿಕ್ರಿಯೆಯಲ್ಲಿ ".....ಸಾರ್ವಜನಿಕ ವಲಯದಲ್ಲಿ ಬಂಡವಾಳ ವಿನಿಯೋಗವನ್ನು ಹೆಚ್ಚಿಸಬೇಕಿತ್ತು' ಎಂದು ಅದು (ಡೆಕ್ಕನ್ ಹೆರಾಲ್ಡ್) ಹೇಳಿದೆ" ಎಂದಿರಬೇಕಿತ್ತು.

೨ನೇ ಕಾಲಂನಲ್ಲಿ 'ಪ್ರಜಾವಾಣಿ' ಪ್ರತಿಕ್ರಿಯೆಯಲ್ಲಿ "....ಅದಕ್ಕೆ ಕಾಲಾವಕಾಶ ಬೇಕು ಎಂದು ಬಜೆಟ್ ಭಾಷಣದಲ್ಲಿ ಹೇಳಿರುವುದರಿಂದ ದೂರು ನಿಜವಿರಬೇಕೆಂದು ಒಪ್ಪಿಕೊಂಡಂತೆ ಆಯಿತಾದರೂ...." ಎಂದಿರಬೇಕಿತ್ತು.

ಆಧುನಿಕ ಭಾರತವನ್ನು ಭವ್ಯ ಭವಿಷ್ಯದೆಡೆಗೆ ಮುಂದೊಯ್ಯಲು

ಪುಟ 5 ರಿಂದ

ಎಷ್ಟೋ ಮೊದಲೇ ತೀವ್ರವಾಗಿತ್ತು. ಅಂದರೆ ನಮ್ಮ ದೇಶದ ಬಂಡವಾಳಶಾಹಿಯ ಆಂತರಿಕ ಅಗತ್ಯಗಳಿಗೆ ಅಂತರ್‍ರಾಷ್ಟ್ರೀಯ ಬೆಳವಣಿಗೆಗಳು ಇನ್ನಷ್ಟು ಒತ್ತು ನೀಡಿದವಷ್ಟೆ.

ಹೀಗಿರುವಾಗ ಆಂತರಿಕ ಅಂಶಗಳು ನಮ್ಮ ವಿಶ್ಲೇಷಣೆಯಲ್ಲಿ ಬರದಿದ್ದರೆ ಈ ನೀತಿಗಳ ವಿರುದ್ಧ ಹೋರಾಟ ದಾರಿ ತಪ್ಪುತ್ತದೆ. ಸಿಪಿಐ(ಎಂ)ನ ತಿಳುವಳಿಕೆಯಿಂದಾಗಿ ಈ ಆಂತರಿಕ ಅಂಶಗಳನ್ನು ಗಮನಿಸಲು ಸಾಧ್ಯವಾಯಿತು. ಈ ಮೂಲಕ ದೇಶದ ಆರ್ಥಿಕ ಸಾರ್ವಭೌಮತೆ ಹಾಗೂ ಸ್ವಾವಲಂಬನೆಯ ರಕ್ಷಣೆಗಾಗಿ ಜನಗಳ ಹೋರಾಟಗಳನ್ನು ಬಲಪಡಿಸಿ, ವ್ಯಾಪಕಗೊಳಿಸಿದರೆ ಮಾತ್ರವೇ ಸ್ವಾತಂತ್ರ್ಯಾನಂತರ ೪ ದಶಕಗಳಲ್ಲಿ ನಮ್ಮ ದೇಶ ಗಳಿಸಿದ್ದನ್ನು ಉಳಿಸಿ ಮುಂದುವರೆಸಲು ಸಾಧ್ಯ ಎಂದು ಗುರುತಿಸಲು ಅನುವು ಮಾಡಿಕೊಟ್ಟಿತು.

ಸಾಮಾಜಿಕ ರಂಗದಲ್ಲಿ

ಆಳುವ ವರ್ಗದ ಸ್ವಭಾವ ದೇಶದ ಸಾಮಾಜಿಕ ರಂಗದಲ್ಲೂ ಮಹತ್ವದ ಪ್ರಭಾವ ಬೀರುತ್ತದೆ. ಪಾಳೆಯಗಾರಿ ಉಳಿಕೆಗಳನ್ನು ನಿರ್ಮೂಲ ಮಾಡದೆ ಬಂಡವಾಳಶಾಹಿ ಕಟ್ಟುವ ಪ್ರಯತ್ನ ನಡೆಸಿದರ ಫಲವಾಗಿ ಪಾಳೆಯಗಾರಿ ಮೌಲ್ಯಗಳ ಭಾಗವಾಗಿರುವ ಹಿಂದುಳಿದ ಸಾಮಾಜಿಕ ಪ್ರಜ್ಞೆ ಮತ್ತು ಧಾರ್ಮಿಕ ಹಾಗೂ ಜಾತಿ ವಿಭಜನೆಯ ಬಲವಾದ ಪ್ರಭಾವ ಜನಮಾನಸದಲ್ಲಿ ಮುಂದುವರಿಯಿತು. ಇಂತಹ ಸನ್ನಿವೇಶದಲ್ಲಿ ಆರ್ಥಿಕ ನೀತಿಗಳಿಂದುಂಟಾದ ಅಸಂತೃಪ್ತಿಯನ್ನು ಪ್ರತಿಗಾಮಿ ಶಕ್ತಿಗಳು ತಮ್ಮ ರಾಜಕೀಯ ಗುರಿ ಸಾಧನೆಗಾಗಿ ಜಾತಿ ಹಾಗೂ ಕೋಮು ಮಾರ್ಗದತ್ತ ಸೆಳೆಯಲು ಅವಕಾಶವಾಯಿತು. ಇತ್ತೀಚೆಗೆ ಬಹುಸಂಖ್ಯಾತ ಕೋಮುವಾದದ ಧಾಳಿ ಭಾರತೀಯ ಜನತೆಯಲ್ಲಿ ಇದ್ದಕ್ಕಿದ್ದಂತೆ ಧಾರ್ಮಿಕ ಮನೋಭಾವ ಭುಗಿಲೆದ್ದುದರಿಂದ ಹೆಚ್ಚಿದ್ದಲ್ಲ, ಜನಗಳ ಪ್ರಜ್ಞೆಯ ಮಟ್ಟವನ್ನು, ಧಾರ್ಮಿಕ ಭಾವನೆಗಳನ್ನು ಫ್ಯಾಸಿಸ್ಟ್ ಮಾದರಿಯ ರಾಜಕೀಯ ಯೋಜನೆಗಾಗಿ ದುರುಪಯೋಗ ಪಡಿಸಿಕೊಳ್ಳುವ ಪ್ರಯತ್ನದ ಫಲವಾಗಿ ಹೆಚ್ಚಿದ್ದು. ಭಾರತೀಯ ಜನತೆಯ ನಾಲ್ಕು ದಶಕಗಳ ಪ್ರಜಾಪ್ರಭುತ್ವ ಸಾಧನೆಗಳನ್ನು ಅಳಿಸಿ ಹಾಕಿ ಒಂದು ಆಧುನಿಕ ಪ್ರಜಾಸತ್ತಾತ್ಮಕ ಜಾತ್ಯಾತೀತ ಭಾರತದ ಅಡಿಪಾಯಕ್ಕೇ ಬೆದರಿಕೆ ಹಾಕುವ ಯತ್ನವೇ ಈಗಿನ ಕೋಮುವಾದಿಗಳ ಧಾಳಿಯ ಹಿಂದಿರುವ ವಾಸ್ತವಾಂಶ.

ಆದರೆ ಇತ್ತೀಚೆಗೆ ದೇಶದಲ್ಲಿ ಕಂಡು ಬರುತ್ತಿರುವ ಜಾತಿ ಪ್ರಕ್ಷೋಭೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅದರ ನಕಾರಾತ್ಮಕ ಹಾಗೂ ಸಕಾರಾತ್ಮಕ ಈ ಎರಡೂ ಅಂಶಗಳನ್ನು ಗಮನಿಸಬೇಕು. ದಲಿತ, ಶೋಷಿತ ಜಾತಿಗಳಲ್ಲಿ ಈಗ ಶತಮಾನಗಳ ಸುಲಿಗೆ ಹಾಗೂ ದುರುಪಯೋಗದಿಂದ ವಿಮೋಚನೆ ಪಡೆಯ ಬಯಸುವ ಪ್ರಜ್ಞೆಯ ಮಟ್ಟ ಮತ್ತೊಮ್ಮೆ ಹೆಚ್ಚುತ್ತಿದೆ. ಇದೊಂದು ಸಕಾರಾತ್ಮಕ ಅಂಶ ಮಾತ್ರವೇ ಅಲ್ಲ ದೇಶದ ಪ್ರಜಾಪ್ರಭುತ್ವ ಆಂದೋಲನದ ಒಂದು ಮಹತ್ವದ ಭಾಗ ಕೂಡಾ. ನಮ್ಮ ಸಮಾಜದ ಬಹುಪಾಲು ದಲಿತ, ದಮನಿತ ಜಾತಿಗಳು ಶೋಷಣೆಗೊಳಗಾದ ವರ್ಗಗಳೂ ಕೂಡಾ ಆಗಿವೆ. ಇದು ಜಾತಿಯೋ ವರ್ಗವೋ ಎಂಬ ಪ್ರಶ್ನೆಯಲ್ಲ; ಶತಮಾನಗಳಿಂದ ಬಂದಿರುವ ಜಾತಿಭೇದದಿಂದ ಕೂಡಿದ ಸಮಾಜದೊಳಗೆ ಬಂಡವಾಳಶಾಹಿಯ ಬೆಳವಣಿಗೆಯೊಂದಿಗೆ ಸತತವಾಗಿ ವರ್ಗಗಳು ರೂಪುಗೊಳ್ಳುತ್ತಿವೆ ಎಂಬ ವಾಸ್ತವತೆಯನ್ನು ಗುರುತಿಸುವ ಪ್ರಶ್ನೆಯಿದು. ಇಲ್ಲಿರುವ ಪ್ರಶ್ನೆ ಆರ್ಥಿಕ ಪ್ರಶ್ನೆಗಳ ವಿರುದ್ಧ ವರ್ಗ ಹೋರಾಟವನ್ನು ಸಾಮಾಜಿಕ ಶೋಷಣೆಯ ವಿರುದ್ಧ ದಲಿತ, ದಮನಿತ ಜಾತಿಗಳ ಹೋರಾಟದೊಂದಿಗೆ ಸಮಗ್ರೀಕರಿಸುವುದು.

ಈ ವಿದ್ಯಮಾನದ ನಕಾರಾತ್ಮಕ ಅಂಶವೆಂದರೆ ಈ ಪ್ರಕ್ಷೋಭೆಯನ್ನು ಜಾತಿಮಿತಿಯೊಳಗೇ ಇರುವಂತೆ ಮಾಡುವ ಕೆಲವು ಜಾತಿ ಮುಖಂಡರುಗಳ ಪ್ರಯತ್ನ; ಸಾಮಾಜಿಕ ದಮನದ ವಿರುದ್ಧ ಈ ಹೋರಾಟಗಳನ್ನು ವಿಶಾಲ ಪ್ರಜಾಪ್ರಭುತ್ವ ಆಂದೋಲನದೊಂದಿಗೆ, ಆರ್ಥಿಕ ನೀತಿಗಳ ವಿರುದ್ಧ ಹೋರಾಟಗಳೊಂದಿಗೆ ಬೆಸೆಯಲು ಅವರು ಬಿಡುತ್ತಿಲ್ಲ, ಇದಕ್ಕೆ ಕಾರಣ ಈ ಮುಖಂಡರ ಅಲ್ಪ ರಾಜಕೀಯ ಲಾಭ ಪಡೆಯುವ ಪ್ರಯತ್ನ. ಇದರಿಂದ ಸಾಮಾಜಿಕ ವಿಭಜನೆ ಇನ್ನಷ್ಟು ಹೆಚ್ಚಿ ತಿಕ್ಕಾಟದ ಸನ್ನಿವೇಶಗಳು ಸೃಷ್ಟಿಯಾಗುತ್ತವೆ. ಮೀಸಲಾತಿಯ ಮೇಲೆಯೇ ಒತ್ತು ನೀಡುತ್ತಾ,ಅದೇ ಮಂಡಲ್ ಆಯೋಗದ ವರದಿ ಭೂಸುಧಾರಣೆಗಳು ನಡೆದು, ಶೋಷಿತ ಜಾತಿಗಳ ಆರ್ಥಿಕ ಸ್ಥಾನಮಾನ ಎತ್ತರಿಸದೆ ಕೇವಲ ಮೀಸಲಾತಿಯಿಂದಲೇ ಅವರ ಪರಿಸ್ಥಿತಿ ಸುಧಾರಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿರುವುದನ್ನು ಉಪೇಕ್ಷಿಸುವುದು ಇಂತಹ ಮನೋಭಾವವನ್ನೇ ತೋರಿಸುತ್ತದೆ. ಸಿಪಿಐ(ಎಂ) ಮಾತ್ರ ಮೊದಲಿನಿಂದಲೂ ಈ ಆರ್ಥಿಕ ಅಂಶದ ಮೇಲೆ ಒತ್ತು ನೀಡುತ್ತಾ ಮೀಸಲಾತಿಯ ಪ್ರಯೋಜನ ಶೋಷಿತ ಜಾತಿಗಳಲ್ಲಿ ಅತೀ ಅಗತ್ಯವಿರುವವರಿಗೆ ತಲುಪಬೇಕು ಎಂದು ಹೇಳುತ್ತಾ ಬಂದಿದೆ. ಬಹಳಷ್ಟು ಮಂದಿ ಈ ನಿಲುವನ್ನು ಒಪ್ಪುಲಿಲ್ಲ, ಸುಪ್ರೀಂ ಕೋರ್ಟ್‌ನ ಪ್ರಸಿದ್ಧ "ಕೆನೆಪದರ"ದ ತೀರ್ಪು ಇದನ್ನು ಅನುಮೋದಿಸಿದ ಮೇಲೂ ಒಪ್ಪಿಲ್ಲ.

ಹೀಗೆ ಒಂದೆಡೆ ಕೋಮುವಾದದ ವಿರುದ್ಧ ಸೈದ್ಧಾಂತಿಕ, ರಾಜಕೀಯ, ಸಂಘಟನಾತ್ಮಕ ಹೋರಾಟ ನಡೆಸಬೇಕಾಗಿದೆ. ಇನ್ನೊಂದೆಡೆ ಜಾತೀವಾದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಕಮ್ಯುನಿಸ್ಟರು ಶೋಷಿತ ಜಾತಿಗಳ ಹೋರಾಟಗಳನ್ನು ಸಮಾಜದಲ್ಲಿ ವಿಶಾಲ ರೂಪದಲ್ಲಿ ನಡೆಯುತ್ತಿರುವ ವರ್ಗ ಹೋರಾಟದೊಂದಿಗೆ ಬೆಸೆಯಬೇಕು. ಈ ಮೂಲಕ ಮಾತ್ರವೇ ನಮ್ಮ ದೇಶದ ಸಾಮಾಜಿಕ ಹಂದರವನ್ನು ಉಳಿಸಿಕೊಂಡು ಆಳುವ ವರ್ಗ ನೀತಿಗಳ ವಿರುದ್ಧ ಜನಗಳನ್ನು ಒಟ್ಟುಗೂಡಿಸಲು ಸಾಧ್ಯ.

ಐಕ್ಯತೆಯ ರಕ್ಷಣೆಯಲ್ಲಿ

ಭಾರತ ಒಂದು ಬಹುದೇಶೀಯ ರಾಷ್ಟ್ರ ಎಂದು ಸಿಪಿಐ(ಎಂ) ಆರಂಭದಿಂದಲೂ ಹೇಳಿಕೊಂಡು ಬಂದಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ಮೂಡಿಬಂದ ವಿವಿಧ ದೇಶೀಯತೆಗಳ ಐಕ್ಯತೆ ನಮ್ಮ ದೇಶವನ್ನು, ನಮ್ಮ ಜನಗಳನ್ನು ಒಗ್ಗೂಡಿಸುವ ಆಧಾರ. ಈಗಿನ ಸಂದರ್ಭದಲ್ಲೂ ಏಕೀಕೃತ ಆಳುವ ವರ್ಗಗಳ ವಿರುದ್ಧ ಹೋರಾಟದಲ್ಲಿ ವಿವಿಧ ಜನಗಳ ಐಕ್ಯತೆಯೇ ದೇಶದ ಐಕ್ಯತೆಯನ್ನು ಬಲಗೊಳಿಸುವ ಸಾಧನ. ಆದರೆ ಬಂಡವಾಳಶಾಹಿ ಬೆಳೆದಂತೆ ದೇಶದ ವಿವಿಧ ಜನಗಳ ಆಕಾಂಕ್ಷೆಗಳೂ ಬೆಳೆಯುತ್ತವೆ. ಅವರು ಹಿಂದಿನಿಂದ ತಮ್ಮ ಮೇಲೆ ಹೇರಿದ್ದ ಹಿಂದುಳಿಕೆಯ ಪರಿಸ್ಥಿತಿಗಳನ್ನು ಬದಲಿಸಬಯಸುತ್ತಾರೆ. ಝಾರ್ಖಂಡ್, ಉತ್ತರಾಖಂಡ ಮತ್ತು ವಿವಿಧ ಭಾಗಗಳಲ್ಲಿ ಬುಡಕಟ್ಟು ಜನಗಳು ವಿವಿಧ ಆಂದೋಳನಗಳು ತಮ್ಮ ಹಕ್ಕನ್ನು ಎತ್ತಿ ಹಿಡಿಯುತ್ತಿರುವುದನ್ನು ಈ ಜನಗಳ ಒಂದು ಉತ್ತಮ ಬದುಕಿನ, ತಮ್ಮ ಸ್ವಂತಿಕೆಗಳನ್ನು ರಕ್ಷಿಸಿಕೊಳ್ಳಬೇಕೆಂಬ ಆಕಾಂಕ್ಷೆಗಳ ಪ್ರತೀಕವಾಗಿ ಕಾಣಬೇಕು.

ಜನಗಳ ಆರ್ಥಿಕ ಸ್ಥಿತಿ ಹದಗೆಡುತ್ತಿರುವಾಗ ಈಗಾಗಲೇ ಗಳಿಸಿದ್ದನ್ನು ಉಳಿಸಿಕೊಳ್ಳಲು ಕೂಡಾ ಸತತ ಹೋರಾಡಬೇಕಾದ ಪರಿಸ್ಥಿತಿ ಬಂದಾಗ ಈ ರೀತಿ ತಮ್ಮ ಸ್ವಂತಿಕೆಯನ್ನು ಎತ್ತಿ ಹಿಡಿಯುವ ಪ್ರಯತ್ನ ಖಂಡಿತಾ ನಡೆಯುತ್ತದೆ. ಈ ಪ್ರಕ್ರಿಯೆಯಲ್ಲಿ ಈ ಭಾವನೆಗಳನ್ನು ಪ್ರತಿಗಾಮಿ ಶಕ್ತಿಗಳು ಹಾಗೂ ಸಾಮ್ರಾಜ್ಯಶಾಹಿ ದೇಶದಲ್ಲಿ ಕಿತ್ತಾಟ, ಅಸ್ಥಿರತೆ ಉಂಟು ಮಾಡಲು ದುರುಪಯೋಗಪಡಿಸಿಕೊಳ್ಳುವ ಅಪಾಯವೂ ಇದೆ. ಈಗ ಕಾಶ್ಮೀರದಲ್ಲಿ, ಹಿಂದೆ ಪಂಜಾಬಿನಲ್ಲಿ ಮಾಡಿದಂತೆ ಸಾಮ್ರಾಜ್ಯಶಾಹಿ ನೇರವಾಗಿ ತಲೆಹಾಕುವುದಲ್ಲದೆ ಇಂತಹ ಅಸ್ಥಿರತೆಯನ್ನು ಅವು ತಮ್ಮ ಲಾಭಕ್ಕೆ ಬಳಸಲೂ ಪ್ರಯತ್ನಿಸುತ್ತವೆ. ಇಂತಹ ಪ್ರಾದೇಶಿಕ ಸಮಸ್ಯೆಗಳನ್ನು ಭಾರತದ ಸದ್ಯದ ಪರಿಸ್ಥಿತಿಯಲ್ಲಿ ಒಂದು ದೇಶೀ ಗುಂಪಿನ ಮೇಲೆ ಇನ್ನೊಂದು ದೇಶೀ ಗುಂಪಿನ ದಮನ ಎಂದು ಹೇಳಲಿಕ್ಕಾಗದು ಎಂದು 1972ರಲ್ಲಿ ನಡೆದ ಸಿಪಿಐ(ಎಂ)ನ ಮಧುರೈ ಮಹಾಧಿವೇಶನ ತೀರ್ಮಾನಿಸಿತು. ಆದ್ದರಿಂದ ಪ್ರತ್ಯೇಕವಾಗುವ ಹಕ್ಕು ಸಮರ್ಥನೀಯವಲ್ಲ ಎಂದಿತ್ತು. ಭಾರತವನ್ನು ಒಂದು ಏಕೀಕೃತ ಆಳುವ ವರ್ಗ ಆಳುತ್ತಿದೆ. ಆದ್ದರಿಂದ ಈ ವರ್ಗ ಆಳ್ವಿಕೆಯ ವಿರುದ್ಧ ಹೋರಾಟ ಎಲ್ಲಾ ದೇಶೀ ಗುಂಪುಗಳ, ಎಲ್ಲಾ ಧರ್ಮಗಳ, ಎಲ್ಲಾ ಜಾತಿಗಳು ಭಾರತೀಯ ಕಾರ್ಮಿಕ ವರ್ಗ ಹಾಗೂ ಶ್ರಮ ಜೀವಿ ಜನಸಮೂಹಗಳ ಏಕೀಕೃತ ಬಲದಿಂದಲೇ ಸಾಧ್ಯ. ಈ ತಿಳುವಳಿಕೆಯ ಆಧಾರದ ಮೇಲೆ ಸಿಪಿಐ(ಎಂ) ಎಲ್ಲಾ ಪ್ರತ್ಯೇಕತಾವಾದಿ ಚಳುವಳಿಗಳು ದೇಶದ ಐಕ್ಯತೆ ಹಾಗೂ ವರ್ಗ ಹೋರಟದ ಹಿತಾಸಕ್ತಿಗಳಿಗೆ ಕಂಟಕಪ್ರಾಯ ಎಂದು ಗುರುತಿಸಿತು. ಸಿಪಿಐ(ಎಂ-ಎಲ್)ನಲ್ಲಿರುವವರು ಈ ಪ್ರಕ್ಷೋಭೆಗಳನ್ನು ರಾಷ್ಟ್ರೀಯ ಬಂಡಾಯ ಎಂದು ವರ್ಣಿಸಿ ಅವರ ವಿಮೋಚನಾ ಹೋರಾಟಗಳೆಂದು ಬೆಂಬಲಿಸುತ್ತಾರೆ. ಈ ಮೂಲಕ ಭಾರತೀಯ ಪರಿಸ್ಥಿತಿಯಲ್ಲಿ ಕೋಮು, ಜಾತಿ ಹಾಗೂ ಇತರ ಸಂಕುಚಿತ ಘೋಷಣೆಗಳ ಮೂಲಕ ಸುಲಭವಾಗಿ ಮುರಿಯಬಹುದಾದ ದುಡಿಯುವ ಜನಗಳ ಐಕ್ಯತೆಯನ್ನು ಬುಡಮೇಲು ಮಾಡಲು ತಮ್ಮ ಕಾಣಿಕೆಯನ್ನೂ ನೀಡುತ್ತಿದ್ದಾರೆ. ಆದ್ದರಿಂದ ಸಿಪಿಐ(ಎಂ) ಬಹಳ ವರ್ಷಗಳಿಂದ ಪ್ರತಿಪಾದಿಸಿಕೊಂಡು ಬಂದಿರುವಂತೆ ಒಂದೆಡೆ ದೇಶದ ಐಕ್ಯತೆ ಸಮಗ್ರತೆಯನ್ನು ಸತತವಾಗಿ ರಕ್ಷಿಸುತ್ತಾ, ಅಕ್ಕಪಕ್ಕದ ಸ್ವಾತಂತ್ರ್ಯವಿರುವ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಜನಗಳಿಗೆ ಹೆಚ್ಚಿನ ಸ್ವಾಯತ್ತತೆ, ತಮ್ಮ ಅಭಿವೃದ್ಧಿಯನ್ನು ಕುರಿತಂತೆ ಹೆಚ್ಚಿನ ಅಧಿಕಾರ ಹಾಗೂ ಜವಾಬ್ದಾರಿ ನೀಡಿದರೆ ಮಾತ್ರವೇ ಇದರ ಪರಿಹಾರ ಸಾಧ್ಯ. ಈ ಕ್ರಮದ ಮೂಲಕ ಮಾತ್ರವೇ ವಿವಿಧ ಪ್ರದೇಶಗಳ ಜನಗಳ ಸತತವಾಗಿ ಹೆಚ್ಚುತ್ತಿರುವ ಆಕಾಂಕ್ಷೆಗಳನ್ನು ಈಡೇರಿಸುವ ಕಾರ್ಯವನ್ನು ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸಿ ಬಲಗೊಳಿಸುವ ಕೆಲಸದೊಂದಿಗೆ ಬೆಸೆಯಲು ಸಾಧ್ಯ.

ಹೀಗೆ ನಮ್ಮ ದೇಶ ಹಾಗೂ ಜನ ಎದುರಿಸುತ್ತಿರುವ ಈ ಎಲ್ಲಾ ಮಹತ್ವದ ಪ್ರಶ್ನೆಗಳಲ್ಲಿ ಆಧುನಿಕ ಭಾರತದ ತಳಪಾಯವನ್ನು ರಕ್ಷಿಸುತ್ತಿರುವುದಷ್ಟೇ ಅಲ್ಲ, ಒಂದು ಉತ್ತಮ ಭವಿಷ್ಯಕ್ಕಾಗಿ ಜನಗಳ ಆಂದೋಲನವನ್ನು ಮುಂದೊಯ್ಯುತ್ತಿರುವುದು ಸಿಪಿಐ(ಎಂ) ಮಾತ್ರ. ಸಿಪಿಐ(ಎಂ)ನ ಮುನ್ನೋಟ ಮಾತ್ರವೇ ಅಲ್ಲ ಅದು ನಿರಂತರವಾಗಿ ತಳೆದ ನಿಲುಮೆ ಸಮಯದ ಒರೆಗಲ್ಲಲ್ಲಿ ಗೆದ್ದು ಬಂದಿದೆ.

ಚಂಡೀಗಢದಲ್ಲಿ 15ನೇ ಮಹಾಧಿವೇಶನ ನಡೆಯುತ್ತಲಿದೆ. ಸುಮಾರು ಎರಡು ದಶಕಗಳ ನಂತರ ಪಕ್ಷದ ಮಹಾಧಿವೇಶನ ಮತ್ತೊಮ್ಮೆ ಪಂಜಾಬಿನಲ್ಲಿ ನಡೆಯುತ್ತಿದೆ. ಈ ನಡುವೆ ಈ ರಾಜ್ಯವೊಂದರಲ್ಲೇ ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಟದಲ್ಲಿ 300ಕ್ಕೂ ಹೆಚ್ಚು ಸಂಗಾತಿಗಳು ಹುತಾತ್ಮರಾಗಿದ್ದಾರೆ. ಈ ಅವಧಿಯಲ್ಲಿ ನಮ್ಮ ದೃಢ ವಿಚಾರ, ತ್ಯಾಗ ಹಾಗೂ ಧೈರ್ಯದ ಬಲದ ಮೇಲೆ ಸಿಪಿಐ(ಎಂ) ತನ್ನ ತಿಳುವಳಿಕೆ ಸರಿಯಾದ ತಿಳುವಳಿಕೆ ಎಂದು ಮತ್ತೆ ತೋರಿದೆಯಷ್ಟೇ ಅಲ್ಲ, ಭಾರತೀಯ ಜನತೆಯ ಹೋರಾಟವನ್ನು ಅದರ ಅಂತಿಮ ಗುರಿಯತ್ತ ಮುಂದೊಯ್ಯುವ ದೃಢಚಿತ್ತವನ್ನು ತೋರಿಸಿಕೊಟ್ಟಿದೆ.